

ರಂಜನೆ ಬೋಧನೆ ಪ್ರಚೋದನೆ



ಲಂಕೇಶ್

05 ಅಕ್ಟೋಬರ್ 2016 ಪುಟ 20 ರೂ. 15/-

ತ್ರಿಪಲ್ ತಲಾಖ್ ಇಸ್ಲಾಂ ವಿರೋಧಿ




ಶೇಮ್ ಶೇಮ್


ಕಾವೇರಿ ವಿವಾದ

ಅನ್ಯಾಯದ ಹಿಂದೆ ಆರೆಸ್ಸೆಸ್

ಪ್ರಜಾಪ್ರಭುತ್ವಕ್ಕೆ ಅಗ್ನಿಪರೀಕ್ಷೆ

ಗಾಯದ ಮೇಲೆ ಬರೆ

ಮಿಶ್ರ ತಳಿಯೂ, 'ಧಾತು' ಶಾಸ್ತ್ರವೂ




ಮೈಸೂರು ದಸರೆಗೆ ಡಿಸಿಯೇ ಪೂಜಾರಿ, ಕಮೀಷನರೇ ಪುರೋಹಿತ


ರಾಯಚೂರು ತಿಪ್ಪರಾಜನ ಗೂಂಡಾಗಿರಿ ಶಿವನಗೌಡನ ಮೌಢ್ಯಾವತಾರ

ಆಸ್ತಿಗಾಗಿ ಬ್ರಹ್ಮಕುಮಾರಿಗಳ ಬೀದಿ ಕಾಳಗ

ಕೊಡಗು ಗಣಪತಿ ಕುಟುಂಬಕ್ಕೆ ಕೈ ಕೊಟ್ಟ ಚೆಡ್ಡಿಗಳು



ಇಸ್ಲಾಂ ವಿರೋಧಿ
ತಲಾಖ್ ತಲಾಖ್ ತಲಾಖ್



ಸುಧಾರಣೆಯ ಹೆಸರಿನಲ್ಲಿ ವೈಯಕ್ತಿಕ ಕಾನೂನುಗಳ ಪುನರ್ ರಚನೆ ಸಾಧ್ಯವಿಲ್ಲ, ಮುಸ್ಲಿಂ ಧರ್ಮಗ್ರಂಥ ಕುರಾನ್‌ನಿಂದ ಮುಸ್ಲಿಂ ವೈಯಕ್ತಿಕ ಕಾನೂನನ್ನು ರಚಿಸಲಾಗಿದೆ. ಆದ್ದರಿಂದ ಅದನ್ನು ಪರೀಕ್ಷೆಗೆ ಒಳಪಡಿಸಲು ಅವಕಾಶವಿಲ್ಲ ಎಂದು ಅಖಿಲ 'ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ'ಯು 2016ನೇ ಸೆಪ್ಟೆಂಬರ್ 18ರಂದು ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಪ್ರಜ್ಞಾವಂತ ಮುಸ್ಲಿಮರು ಕೇಳುತ್ತಿರುವುದು ಷರಿಯತ್‌ನಲ್ಲಿ ಸುಧಾರಣೆ ಅಲ್ಲ, ಬ್ರಿಟಿಷರು ಜಾರಿಗೊಳಿಸಿದ ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಸುಧಾರಣೆ.

'ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ' ಸಂಘಟನೆ, ಮೂರು ತಲಾಖ್ ವಿರುದ್ಧ 50 ಸಾವಿರ ಸಹಿ ಸಂಗ್ರಹಿಸಿ ಅದನ್ನು ನಿಷೇಧಿಸಬೇಕೆಂದು ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸಿದೆ.

ಮುಸ್ಲಿಮರ ಮೇಲೆ ಹೇರಿರುವ ಮುಸ್ಲಿಂ ವೈಯಕ್ತಿಕ ಕಾನೂನು ಷರಿಯತ್ ಅಲ್ಲ. ಷರಿಯತ್ ಚಲನಶೀಲವಾದುದು. ಮುಸ್ಲಿಂ ಧರ್ಮದ ಪ್ರಬುದ್ಧ ಅನುಯಾಯಿಗಳು ಯಾವ ಕಾಲಕ್ಕೂ ಹೆಂಡತಿಗೆ 'ತಲಾಖ್ ತಲಾಖ್ ತಲಾಖ್' ಎಂದು ಹೇಳುವುದಿಲ್ಲ.

ಕಾಮದಾಸೆಗಾಗಿ ಎರಡನೇ ಮದುವೆಯಾಗುವುದಿಲ್ಲ. 'ತಲಾಖ್ ತಲಾಖ್ ತಲಾಖ್' ಎಂದು ಒದರಿ ಹೆಂಡತಿಯನ್ನು ಹೊರಗಟ್ಟುವ ಗಂಡನನ್ನು ಪ್ರಶ್ನಿಸುವ ಹಕ್ಕು ಭಾರತದಲ್ಲಿ ಪ್ರಚಲಿತವಿರುವ ಮುಸ್ಲಿಂ ವೈಯಕ್ತಿಕ ಕಾನೂನಿಗೆ ಇಲ್ಲ, ಆದರೆ ಷರಿಯತ್‌ಗೆ ಇದೆ.

"ಬರುವ ವರ್ಷ ನಿಮ್ಮನ್ನು ಕಾಣುವೆನೊ ಇಲ್ಲವೊ ಗೊತ್ತಿಲ್ಲ, ಆದಕ್ಕಾಗಿ ಓ ಜನರೇ ನನ್ನ ಮಾತುಗಳ ಕಡೆ ಗಮನವಿಡಿ. ಅಧರ್ಮವಾದ ಪದ್ಧತಿಗಳೆಲ್ಲ ನನ್ನ ಪದತಲದಲ್ಲಿ ನಿರ್ನಾಮಗೊಂಡಿವೆ. ಅರಬರು ಅರಬರಲ್ಲದವರಿಗಿಂತ ಹೆಚ್ಚಿನವರಲ್ಲ, ಅರಬರಲ್ಲದವರು ಅರಬರಿಗಿಂತ ಹೆಚ್ಚಿನವರಲ್ಲ, ನೀವೆಲ್ಲ ಆದಂನ ಮಕ್ಕಳು. ಆದಂನನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ಸತ್ಯವಾಗಿಯೂ ಎಲ್ಲಾ ಸತ್ಯವಿಶ್ವಾಸಿಗಳು ಸಹೋದರರು. ನಿಮ್ಮ ಗುಲಾಮರು! ನೀವು ಉಣ್ಣುವಂಥ ಆಹಾರ ಅವರಿಗೆ ಕೊಡಿ. ನೀವು ಉಡುವಂಥ ಬಟ್ಟೆ ಅವರಿಗೆ ಕೊಡಿ. ಅಜ್ಞಾನ ಕಾಲದ ರಕ್ತಪಾತಮಯವಾದ ಬದ್ಧದ್ವೇಷವನ್ನು ನಿಷೇಧಿಸಲಾಗಿದೆ.

ನೀವು ನಿಮ್ಮ ಹೆಂಡಂದಿರೊಡನೆ ವ್ಯವಹರಿಸುವಾಗ ಅಲ್ಲಾಹನನ್ನು ಜ್ಞಾಪಿಸಿಕೊಳ್ಳಿ. ನಿಮಗೆ ಅವರ ಮೇಲೆ ಹಕ್ಕಿದೆ. ಅವರಿಗೆ ನಿಮ್ಮ ಮೇಲೆ ಹಕ್ಕಿದೆ. ಸತ್ಯವಾಗಿಯೂ ನ್ಯಾಯತೀರ್ಮಾನದ ದಿನದವರೆಗೆ ಪ್ರತಿಯೊಬ್ಬರ ರಕ್ತ ಆಸ್ತಿ ಮತ್ತು ಪ್ರತಿಷ್ಠೆಗಳು ಅತಿಕ್ರಮಣಕ್ಕೀಡಾಗದಂಥವು ಎಂಬುದನ್ನು ನೀವು ತಿಳಿಯಲೇ ಬೇಕು."

ಮುಹಮ್ಮದ್ ಪೈಗಂಬರರು (ಕ್ರಿಸ್ತಶಕ 571-633) ಮೆಕ್ಕಾದಲ್ಲಿ ಹಜ್ ಯಾತ್ರಿಕರಿಗೆ ವಿದಾಯ ಹೇಳುವಾಗ ಅವರನ್ನು ಉದ್ದೇಶಿಸಿ ಮಾಡಿದ ಕೊನೆಯ ಭಾಷಣವಿದು. ಅವರ ಕೊನೆ ಮಾತು ಮಾನವ ಜನಾಂಗಕ್ಕೆ ಅನುಪಮ ಕೊಡುಗೆಯಾಗಿದೆ. ಮಾನವ ವ್ಯಕ್ತಿತ್ವವನ್ನು ಅಳೆಯುತ್ತ ಆಚಂದ್ರಾರ್ಕವಾಗಿ ನಿಲ್ಲುವಂಥ ಶಕ್ತಿಶಾಲಿಯಾದ ಮಾತು ಅದು. ಪೈಗಂಬರರು ವಿಶ್ವಕ್ಕೆ ಅರುಹಿದ ಇಸ್ಲಾಂ ಧರ್ಮದಲ್ಲಿ ಮೇಲಿಲ್ಲ ಕೀಳಿಲ್ಲ, ಒಡೆಯ ಒಡೆಯನಲ್ಲ, ಗುಲಾಮ ಗುಲಾಮನಲ್ಲ, ಯಾರೂ ಸರ್ವಾಧಿಕಾರಿ ಅಲ್ಲ, ಹೆಂಗಸು ಗಂಡಸಿನ ದಾಸಿ ಅಲ್ಲ, ಯಾರೂ ಯಾರ ಮೇಲೂ ಏನನ್ನೂ ಹೇರುವಂತಿಲ್ಲ, ಶಾಂತಿ ಮತ್ತು ಪರಧರ್ಮ ಸಹಿಷ್ಣುತೆಯನ್ನು ಬಿಟ್ಟುಕೊಡುವಂತಿಲ್ಲ. ಇಂಥ ಮಹಾಬಯಕೆಗಳ ಒಂದು ಧರ್ಮದ ಹೆಸರಿನಲ್ಲಿ ಏನೇನು ನಡೆಯುತ್ತಿದೆ ಎಂಬುದಕ್ಕೆ ಇಂದಿನ ವಿದ್ಯಮಾನಗಳೇ ಸಾಕ್ಷಿ.

ಮಹಿಳೆ ಸದಾ ಬಲಿಪಶು

ಮಹಿಳೆ ಯುಗಯುಗಗಳಿಂದಲೂ ಬಲಿಪಶುವಾಗುತ್ತಲೇ ಮುಂದುವರಿದಿದ್ದಾಳೆ. ಇಸ್ಲಾಂ ಧರ್ಮ ಮಹಿಳೆಯರಿಗೆ, ಅನಾಥಮಕ್ಕಳಿಗೆ, ಗುಲಾಮರಿಗೆ ಮತ್ತು ಬಡಜನರಿಗೆ ಹೊಸ ಆಶಾಕಿರಣವಾಗಿ ಬಂದಿತು. ಸಮಾನತೆಯ ಸಂದೇಶದೊಂದಿಗೆ ಹೊಸ ಗಾಳಿ ಬೀಸಿತು. ಸರ್ವವಿಧದಿಂದಲೂ ತುಳಿತಕ್ಕೀಡಾದವರು ಹಾಯಾಗಿ ಉಸಿರಾಡುವಂತಾಯಿತು. ಆದರೆ ಮುಸ್ಲಿಂ ವೈಯಕ್ತಿಕ ಕಾನೂನಿನಿಂದಾಗಿ ಭಾರತೀಯ ಮುಸ್ಲಿಂ ಮಹಿಳೆ ಹೊಸ ಬದುಕನ್ನು ಕಾಣದಂಥ ಪರಿಸ್ಥಿತಿಯುಂಟಾಗಿದೆ. ಇಂಥ ಇಸ್ಲಾಂ ವಿರೋಧಿ ವೈಯಕ್ತಿಕ ಕಾನೂನಿನಿಂದಾಗಿ ಅವಳನ್ನು ಕಟ್ಟಿಕೊಂಡ ಗಂಡ ಮೂರು ಬಾರಿ ತಲಾಖ್ ಹೇಳಿ ಅವಳನ್ನು ಆರ್ಥಿಕವಾಗಿ ಕೂಡ ಸಹಕರಿಸದೆ ಬೀದಿಗಟ್ಟಬಹುದು. ಇಲ್ಲವೆ ಇನ್ನೊಬ್ಬಳನ್ನು ಕಟ್ಟಿಕೊಂಡು ಅವಳನ್ನು ಅವಮಾನಕ್ಕೀಡುಮಾಡಬಹುದು. ಹೀಗೆಂದ ಮಾತ್ರಕ್ಕೆ, ಎಲ್ಲ ಮುಸ್ಲಿಂ ಗಂಡಸರು ಕ್ರೂರಿಗಳಾಗಿದ್ದಾರೆಂದಾಗಲೀ, ಹಿಂದೂ ಮಹಿಳೆಯರು ಸುಖದ [illegible] ನರಳಾಡುತ್ತಿದ್ದಾರೆಂದಾಗಲೀ [illegible]. ಶಾಂತಿ ಮತ್ತು ಮಾನವೀಯತೆಯಿಂದ ತುಂಬಿದ ಒಂದು ಧರ್ಮದ ಹೆಸರಿನಲ್ಲಿ ವಿಕೃತ ಮನಸ್ಸಿನ ಜನ ವೈಯಕ್ತಿಕ ಕಾನೂನಿನ ದುರ್ಬಳಕೆ ಮಾಡಿಕೊಳ್ಳುತ್ತ ಎಂಥ ಅಧರ್ಮಕ್ಕೆ ಇಳಿಯುತ್ತಾರೆ ಎಂಬುದನ್ನು ತಿಳಿಯಪಡಿಸುವುದೇ ಇಲ್ಲಿನ ಉದ್ದೇಶವಾಗಿದೆ.

ಷರಿಯತ್ ಜಾರಿಯಲ್ಲಿಲ್ಲ

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವಿದ್ದಾಗ ಭಾರತದ ವೈಸರಾಯ್ ವಾರನ್ ಹೇಸ್ಟಿಂಗ್ಸ್ 1772ರಲ್ಲಿ ಹಿಂದೂ ಮುಸ್ಲಿಂ ಕಾಯ್ದೆಗಳ ಮೇಲೆ ನಿಯಂತ್ರಣ ಹೇರಿದ. 1780ರಲ್ಲಿ ಅದನ್ನು ಕಾನೂನಿನ ಮೂಲಕ ಕಾರ್ಯರೂಪಕ್ಕೆ ತರಲಾಯಿತು. ಆಗ ಮುಸ್ಲಿಮರಿಗೆ ಅವರ ಮದುವೆ, ಉತ್ತರಾಧಿಕಾರ ಮುಂತಾದ ವಿಚಾರಗಳಿಗೆ ಸಂಬಂಧಿಸಿದ ಕಾನೂನು ಮಾತ್ರ ಉಳಿಯಿತು. ಮುಂದೆ 1937ರಲ್ಲಿ ಬ್ರಿಟಿಷರು ಜಾರಿಗೆ ತಂದ 'ಮುಸ್ಲಿಂ ಪರ್ಸನಲ್ ಲಾ (ಷರಿಯತ್) ಅಪ್ಲಿಕೇಷನ್ ಆಕ್ಟ್ 1937' ಅನ್ನು ಜಸ್ಟಿಸ್ ಅಮೀರ್ ಅಲಿ ಅವರು ಕ್ರೋಢೀಕರಿಸಿದ್ದಾರೆ. ಷಿಯಾ ಪಂಗಡಕ್ಕೆ ಸೇರಿದ್ದ ಅವರು, ಭಾರತದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಇರುವ ಸುನ್ನಿ ಪಂಗಡಕ್ಕೆ ಅವಶ್ಯಕವೆನಿಸುವಂಥ ಕಾನೂನನ್ನು ರೂಪಿಸುವಲ್ಲಿ ವಿಫಲರಾಗಿದ್ದಾರೆ. ಅವರು ಕಾಯ್ದೆ ತಜ್ಞರಾಗಿದ್ದರೂ ಷರಿಯತ್ ಅನ್ನು ಆಳವಾಗಿ ಅಧ್ಯಯನ ಮಾಡಿದವರಾಗಿರಲಿಲ್ಲ ಎಂಬ ವಾದವೂ ಇದೆ. ಇಸ್ಲಾಂ ಮೂಲತಃ ಏಕಪತ್ನಿತ್ವವನ್ನು ಬೆಂಬಲಿಸುತ್ತದೆ ಮತ್ತು ವಿವಾಹ ವಿಚ್ಛೇದನವನ್ನು ತಿರಸ್ಕರಿಸುತ್ತದೆ ಎಂಬುದು ಅವರ ಗಮನಕ್ಕೆ ಬರಲೇ ಇಲ್ಲ. ಹೀಗಾಗಿ ಅವರು ಕ್ರೋಢೀಕರಿಸಿದ ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ಕುರಾನ್ ಮತ್ತು ಹದೀಸ್‌ಗೆ ಅಪಚಾರವೆಸಗುವಂಥ ವಿಚಾರಗಳಿವೆ. ಆದ್ದರಿಂದ ಮುಸ್ಲಿಮರು ಷರಿಯತ್‌ನ ತಿರುಳನ್ನು ಅರ್ಥೈಸಿಕೊಂಡು ಮುನ್ನಡೆಯುವುದು ಅವಶ್ಯವಾಗಿದೆ.

ಷರಿಯತ್‌ನ ಶಬ್ದಾರ್ಥ 'ನೀರುಳ್ಳ ಸ್ಥಳಕ್ಕೆ ದಾರಿ' ಅಥವಾ ಅನುಸರಿಸಬೇಕಾದ ಮಾರ್ಗ. ಪಾರಿಭಾಷಿಕ ಅರ್ಥದಲ್ಲಿ ಅದು ಮುಸ್ಲಿಂ ಧರ್ಮಶಾಸ್ತ್ರ. ಧಾರ್ಮಿಕ, ನೈತಿಕ, ಸಾಮಾಜಿಕ, ರಾಷ್ಟ್ರೀಯ ಮತ್ತು ಅಂತರ[illegible] ವಿಚಾರಗಳನ್ನು ಅದು ಒಳಗೊಂಡಿದೆ.

ಬ್ರಿಟಿಷರು ಅಮೀರ್ ಅಲಿ ಮೂಲಕ ಮುಸ್ಲಿಂ ವೈಯಕ್ತಿಕ ಕಾನೂನು ಕೇವಲ ಮದುವೆ, ವಿಚ್ಛೇದನ, ಉತ್ತರಾಧಿಕಾರ ಮತ್ತು ಧರ್ಮದತ್ತಿ [illegible] ವೈಯಕ್ತಿಕ ಧಾರ್ಮಿಕ ವಿಚಾರಗಳಿಂದ (ಅದೂ ತಪ್ಪು ತಪ್ಪಾಗಿ) ಕೂಡಿದೆ. ಗೊಂದಲದ ಈ [illegible] ವೈಯಕ್ತಿಕ ಕಾನೂನನ್ನೇ ಷರಿಯತ್ ಎಂದು [illegible] ಹಿತಾಸಕ್ತಿಗಳು ಮುಸ್ಲಿಂ ಸಮೂಹದಲ್ಲಿ ಭ್ರಮೆ ಹುಟ್ಟಿ[illegible] ಮುಸ್ಲಿಂ ಕೋಮುವಾದಿಗಳು ಮತ್ತು [illegible] ಕೋಮುವಾದಿಗಳು ಒಂದು ವಿಚಾರದಲ್ಲಿ [illegible] ಬರುತ್ತಾರೆ. ಅದೇನೆಂದರೆ ಯಥಾಸ್ಥಿತಿವಾ[illegible] ಬೆಂಬಲಿಸುವುದು.

'ಮುಸ್ಲಿಂ ವೈಯಕ್ತಿಕ ಕಾನೂನು ಮುಸ್ಲಿಂ ಮಹಿ[illegible] ವಿರುದ್ಧವಾಗಿದೆ. ಆದರೆ ಷರಿಯತ್ ಮುಸ್ಲಿಂ ಮಹಿ[illegible] ರಕ್ಷಣಾ ಕೋಟೆಯಂತಿದೆ' ಎಂಬ ಸತ್ಯವನ್ನು ಯಾವ[illegible] ಮುಸ್ಲಿಮನೂ ಹೇಳಲು ಸಿದ್ಧನಿಲ್ಲ!

'ಭಾರತದಲ್ಲಿ ಷರಿಯತ್ ಜಾರಿಯಲ್ಲಿಲ್ಲ, ಆ ಕುರಿತು ಸುಧಾರಣೆ ಬಯಸುವುದು ಅಥವಾ ಇದ್ದಂತೆ ಇರಲಿ ಎಂದು ವಾದಿಸು[illegible] ಅಸಮಂಜಸವಾಗುತ್ತದೆ. ಆದರೆ ಷರಿಯತ್ [illegible] ಪ್ರಕಾರ ಮುಸ್ಲಿಂ ವೈಯಕ್ತಿಕ ಕಾನೂನಿನಲ್ಲಿ ತಿದ್ದುಪ[illegible] ಬಹುಪತ್ನಿತ್ವ ಮತ್ತು ತಲಾಖ್ ಅನ್ನು [illegible] ಬಾಹಿರಗೊಳಿಸುವುದು. ಒಂದುವೇಳೆ ಕೂಡಿಬಾ[illegible] ಸಾಧ್ಯವೇ ಇಲ್ಲ ಎಂದಾದರೆ ತಲಾಖ್ ಪಡೆದ [illegible] ಜೀವನಾಂಶವನ್ನು ಒದಗಿಸುವುದು'- ಇವು ಪ್ರ[illegible] ಮುಸ್ಲಿಮರ ಮುಖ್ಯ ವಿಚಾರಗಳಾಗಿವೆ.

ಷರಿಯತ್ ವಿಕಸನಶೀಲವಾದು[illegible]

ಇನ್ನು ಷರಿಯತ್ ವಿಚಾರವನ್ನೇ ತೆಗೆದುಕೊ[illegible] ಕಾಲದ ಹಿನ್ನೆಲೆಯಲ್ಲಿ ಅದು ಕೂಡ ವಿಕಸನಗೊ[illegible] ಬಂದಿದೆ.

ಷರಿಯತ್ ಮೂಲ ಕುರಾನ್ ಮತ್ತು ಹದಿಸ್[illegible] (ಮಹಮ್ಮದ್ ಬದುಕಿದ ಪರಿ ಮತ್ತು ಅವರ ವಚ[illegible] ಹದಿಸ್ ಒಳಗೊಂಡಿದೆ). ಇಜ್ಮಾ ಮತ್ತು ಕಿಯ[illegible] ಮೂಲಕ ಅದು ವಿಕಸನಗೊಂಡಿದೆ. ಪೈಗ[illegible] ಸಂಗಾತಿಗಳು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ [illegible] ಎನ್ನುತ್ತಾರೆ. ಮುಸ್ಲಿಂ ನ್ಯಾಯಪಂಡಿತರು ಮತ್ತು [illegible] ಸರ್ವಸದಸ್ಯರ ಸಭೆಯ ಒಟ್ಟು ಅಭಿಪ್ರಾಯದ ಮೂ[illegible] 'ಇಜ್ಮಾ' ರೂಪಿಸಲಾಗುವುದು. ಕೇವಲ ಮುಜ್ತಾಹಿ[illegible] (ವ್ಯಾಖ್ಯಾನಕಾರರು) ಮಾತ್ರ ಇಜ್ಮಾ ರೂಪಿ[illegible] ಭಾಗವಹಿಸಬೇಕೆಂಬುದು ತಪ್ಪು ಅಭಿಪ್ರಾಯ[illegible] 'ಕಿಯಾಸ್' ಎಂದರೆ ಔಚಿತ್ಯ ಪ್ರಜ್ಞೆಯಿಂದ ಮೂಲ[illegible] ಮೂಲಕ ಕಾನೂನನ್ನು ಬೆಳೆಸುವುದು.

ಈ ರೀತಿಯ ವಿಕಸನ ಕ್ರಿಯೆ ಇಂದು ನಿನ್ನೆ[illegible] ಪೈಗಂಬರರೇ ಈ ಬಗ್ಗೆ ಸೂಚನೆ ಕೊಟ್ಟಿದ್ದಾರೆ. [illegible] ಮತ್ತು ಸುನ್ನಾ(ಹದಿಸ್)ಗಳ ಮೂಲಕ ಸಮ[illegible] ಯಾವುದೇ ಬೆಳಕು ಕಾಣದಿದ್ದರೆ ಏನು ಮಾಡಬ[illegible] ಕೇಳಿದ್ದಕ್ಕೆ, 'ಆಗ ತರ್ಕದ ಮೂಲಕ ನನ್ನ ಅಭಿ[illegible] ವ್ಯಕ್ತಪಡಿಸುತ್ತೇನೆ' ಎಂದು ಪೈಗಂಬರರು ಹೇಳಿದ್ದರು[illegible] ಮೂಲ ಗ್ರಂಥದ ಆಧಾರದ ಮೇಲೆ ತರ್ಕದ [illegible] ಕಾಲದ ಸಮಸ್ಯೆಗಳನ್ನು ಬಿಡಿಸುವ ಕ್ರಿಯೆಗೆ 'ಇಜ್ತಿ[illegible] ಎಂದು ಹೇಳುತ್ತಾರೆ.

ಹಜ್ರತ್ ಉಮರ್ ಅವರು ಎರಡನೇ [illegible] ಆಗಿದ್ದರು. ಅವರು ಇಜ್ತಿಹಾದ್ ಕುರಿತು ಹೀಗೆ ಹೇ[illegible]

'ನಿಮ್ಮ ತಿಳಿವಳಿಕೆ ಪ್ರಕಾರ ಕುರಾನ್ ಮತ್ತು (ಹದಿಸ್) ಹೇಳದಂಥ ಸಮಸ್ಯೆಯನ್ನು ನೀವು ಎದುರಿ[illegible] ಅದಕ್ಕೆ ಸಂಬಂಧಿಸಿದಂತೆ ಯಾವ ನಿ[illegible] ಯೋಗ್ಯವಾದುದು ಎಂಬುದನ್ನು ನಿಮ್ಮ ಮ[illegible] ಸ್ಪಷ್ಟಪಡಿಸಿಕೊಳ್ಳಿರಿ. ಮೊದಲು ಸಮಸ್ಯೆ[illegible] ಅರ್ಥೈಸಿಕೊಳ್ಳಲು ಪ್ರಯತ್ನಿಸಿರಿ. ಒಂದೇ ತೆರನಾದ[illegible] ಸಾದೃಶ್ಯ ರೀತಿಯ ಘಟನೆಗಳನ್ನು ಹುಡುಕಿರಿ. [illegible] ಸಾದೃಶ್ಯವಾಗಿ ತರ್ಕಿಸಿರಿ. ಸಮಾನಾಂತರವಾದ ನಿರ್ಣಯ[illegible] ಕೈಗೊಳ್ಳಿರಿ. ನಂತರ ಅಲ್ಲಾಹಗೆ ಹೆಚ್ಚು ಹಿಡಿ[illegible] ಮತ್ತು ಆ ವಿಚಾರದಲ್ಲಿ ಸತ್ಯಕ್ಕೆ ಅತಿ ಸಮೀಪ[illegible] ಅಭಿಪ್ರಾಯ ಹೊಂದಿರಿ."

ಷರಿಯತ್ ಜಡವಲ್ಲ

ಅರಬಸ್ತಾನದಲ್ಲಿ ಬಡತನ ಹೆಚ್ಚಾದಾಗ ಉಮರ್ ಅವರು, ಕಳ್ಳತನ ಮಾಡಿದವರ ಕೈ ಕತ್ತರಿಸು[illegible] ನಿಲ್ಲಿಸಲು ತಿಳಿಸಿದರು. ಷರಿಯತ್ ಜಡವಲ್ಲ [illegible] ಇದೊಂದೇ ಉದಾಹರಣೆ ಸಾಕು. ಅರಬರಲ್ಲಿ [illegible] ಹೆಚ್ಚಾಯಿತು ಎಂದರೆ ಅರಬರಲ್ಲಿನ ಶ್ರೀಮಂತರು[illegible] ಧರ್ಮವನ್ನು ನಿಜವಾದ ಅರ್ಥದಲ್ಲಿ ಅನುಸರಿಸಲಿಲ್ಲ[illegible] ಅರ್ಥ. ಇಸ್ಲಾಂ ಧರ್ಮದ ಪ್ರಕಾರ ಬಡ್ಡಿ ತಿನ್ನಬ[illegible] ಕಷ್ಟದಲ್ಲಿದ್ದವರಿಗೆ ಸಾಲ ಕೊಟ್ಟವನ್ನು



ಕನ್ನಡಿಗರ ಪಾಲಿಗೆ ಪರಮದ್ರೋಹಿ ಬಿಜೆಪಿ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕರ್ನಾಟಕದ ಬಿಜೆಪಿಗರ ಬಂಡವಾಳ ಮತ್ತು ರಾಜ್ಯದ್ರೋಹಿ ನಿಲುವು ಕಾವೇರಿ ವಿವಾದದಲ್ಲಿ ಜಗಜ್ಜಾಹೀರಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ಬಿಜೆಪಿಯ ಸಂಸದರಿಗೆ ಮತ್ತು ಚಿಡ್ಡಿ ನಾಯಕರಿಗೆ ಕ್ಯಾಕರಿಸಿ ಉಗಿಯುತ್ತಿದ್ದಾರೆ. ಟ್ವಿಟರ್‌ನಲ್ಲಿ 'ಬಿಜೆಪಿ ಅಗೇನ್‌ಸ್ಟ್ ಕರ್ನಾಟಕ', 'ರಿಸೈನ್ ಫಾರ್ ಕಾವೇರಿ' ಎಂಬ ಹ್ಯಾಶ್‌ಟ್ಯಾಗ್‌ಗಳು ಹುಟ್ಟಿಕೊಂಡಿದ್ದು ಎಲ್ಲಾ 17 ಬಿಜೆಪಿ ಸಂಸದರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ಮೂಲಕ ಮೋದಿ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಒತ್ತಾಯಿಸುತ್ತಿದ್ದಾರೆ. ಇನ್ನೂ ಕೆಲವರು ಅದೇ ಟ್ವಿಟರ್‌ನಲ್ಲಿ "ಕರ್ನಾಟಕಕ್ಕೆ ಅನ್ಯಾಯವಾಗುತ್ತಿದ್ದರೆ ಬಿಜೆಪಿ ಪಕ್ಷದವರು ಸುಮ್ಮನೆ ಕೂತು ಮಜಾ ನೋಡುತ್ತಿದ್ದಾರೆ" ಎಂದು ಗೇಲಿ ಮಾಡುತ್ತಿದ್ದಾರೆ.

ವ್ಯಾಟ್ಸ್‌ಅಪ್‌ನಲ್ಲಿ ಹಲವು ಪ್ರತಿಭಾವಂತ ಪ್ರಗತಿಪರ ಯುವಕರು 'ಭಕ್ತರ ಪೋಸ್ಟ್‌ಮಾರ್ಟಮ್' ಎಂಬ ಗುಂಪನ್ನು ಸ್ಥಾಪಿಸಿ ಮೋದಿ ಮತ್ತು ಆತನ ಭಕ್ತರ ಅಸಲೀಯತ್ತನ್ನು ಪ್ರತಿನಿತ್ಯ ಬಯಲುಗೊಳಿಸುತ್ತಿದ್ದಾರೆ. ಫೇಸ್‌ಬುಕ್‌ನಲ್ಲಿ ಜನರು ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದಿಂದ ರೋಸಿಹೋಗಿ "ನಾನು ಮೋದಿಯನ್ನು ನಂಬಿ ಬಿಜೆಪಿಗೆ ಮತಹಾಕಿದ್ದೆ. ಆದರೆ ಮೋದಿ ಯಾಕೆ ಇಲ್ಲಿಯ ತನಕ ಕಾವೇರಿ ವಿವಾದವನ್ನು ಬಗೆಹರಿಸಲು ಮುಂದಾಗಿಲ್ಲ? ನಾನು ಮೋಸ ಹೋದೆ" ಎಂಬುದಾಗಿ ಪರಿತಪಿಸುತ್ತಿದ್ದಾರೆ. ಅದಕ್ಕೆ ಕೆಲವು ಜಾತ್ಯತೀತರು "ಈಗಲಾದರೂ ನಿಮ್ಮಂಥವರಿಗೆ ಬುದ್ಧಿ ಬಂತಲ್ಲ" ಎಂದು ಸಂತೈಸುತ್ತಿದ್ದಾರೆ.

ಕಾವೇರಿ ವಿಷಯದಲ್ಲಿ ಕರ್ನಾಟಕಕ್ಕೆ ನ್ಯಾಯ ಸಿಗುತ್ತೋ ಇಲ್ಲವೋ, ಆದರೆ ಬಿಜೆಪಿಯವರ ಭಂಡತನ ಮತ್ತು ಷಂಡತನಗಳೆರಡೂ ಕನ್ನಡಿಗರ ಮುಂದೆ ಅನಾವರಣಗೊಂಡಿವೆ.

ಬಿಜೆಪಿಯ ರಾಜ್ಯಾಧ್ಯಕ್ಷ ಯಡಿಯೂರಪ್ಪ ಮತ್ತಾತನ ಚಿಡ್ಡಿ ಪಡೆ "ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕು" ಎಂದು ಒತ್ತಾಯಿಸುತ್ತಿದ್ದರು. ಕಳೆದ ವಾರ ಇದೇ ಅಂಕಣದಲ್ಲಿ ಬರೆದಂತೆ ಯಡ್ಡಿಯ ಈ ಹೇಳಿಕೆಯಲ್ಲಿ ರಾಜ್ಯದ ಹಿತಾಸಕ್ತಿಯೇನೂ ಇರಲಿಲ್ಲ, ಬದಲಾಗಿ ಅದರಲ್ಲಿದ್ದದ್ದು ಅಧಿಕಾರದ ದಾಹ. ಸಿದ್ದು ರಾಜೀನಾಮೆ ಕೊಡಬೇಕೆಂಬ ಚಿಡ್ಡಿಗಳ ಮಾತಿಗೆ ಫೇಸ್‌ಬುಕ್‌ನಲ್ಲಿ ಸಿದ್ದಯ್ಯ ಚಿಕ್ಕಮಾದೇಗೌಡ ಎಂಬುವವರು "ಮಾನ್ಯ ಮುಖ್ಯಮಂತ್ರಿಗಳೆ, 'ನಾವು ನಿಮ್ಮ ಬೆಂಬಲಕ್ಕೆ ನಿಲ್ಲುತ್ತೇವೆ. ಸುಪ್ರೀಂಕೋರ್ಟ್ ಆದೇಶ ಧಿಕ್ಕರಿಸಿ' ಎಂಬ ಬಿಜೆಪಿಯವರ ಮಾತನ್ನು ಎಂದೂ ನಂಬಬೇಡಿ. 'ಕಾವೇರಿಯ ಪ್ರವಾಹ'ಕ್ಕೆ ಬೀಳುವುದಾದರೆ, ಬಿಜೆಪಿ ನಾಯಕರನ್ನೂ ಹಗ್ಗದಲ್ಲಿ ಕಟ್ಟಿಕೊಂಡು ಬೀಳಿ. ಎಲ್ಲಾ ಶಾಸಕರನ್ನೂ, ಸಚಿವರನ್ನೂ ಬಿಡಿಸಿಕೊಳ್ಳಲಾಗದಂತೆ ಕಟ್ಟಿಕೊಳ್ಳಿ, ರಾಜ್ಯದ ಕೇಂದ್ರ ಸಚಿವರಾದ ಅನಂತ ಕುಮಾರ್‌ರನ್ನೂ, 'ನಮೋ ಮೋದ್ಯಾಯಣ' ಮಹಾಗ್ರಂಥ ಬರೆದ 'ವಾಲ್ಮೀಕಿ' ಪ್ರತಾಪ ಸಿಂಹ ಅವರನ್ನೂ, ಯಡಿಯೂರಪ್ಪ, ಈಶ್ವರಪ್ಪ ಅವರನ್ನೂ ಸೇರಿಸಿ ಹಗ್ಗ ಬಿಗಿಯಿರಿ. ಆಗ ಮಾತ್ರ ದೆಹಲಿಯ ಸಿಂಹಾಸನದ ಮೇಲೆ ಕುಳಿತಿರುವವರು ತಮ್ಮವರನ್ನು ರಕ್ಷಿಸಲು ಓಡೋಡಿ ಬರುತ್ತಾರೆ. ಸಮಸ್ಯೆಗೆ ಪರಿಹಾರವೂ ಸಿಗುತ್ತದೆ" ಎಂದು ಕಿಡಿಕಾರಿದ್ದಾರೆ.

ಇರಲಿ, ಇದೇ ಯಡ್ಡಿ ಮೊನ್ನೆ "ಕಾವೇರಿ ಸಮಸ್ಯೆಯನ್ನು ಚರ್ಚಿಸಲು ಸರ್ವ ಪಕ್ಷಗಳ ಸಭೆಯ ಅಗತ್ಯತೆ ಇಲ್ಲ, ಬದಲಾಗಿ ತುರ್ತು ಅಧಿವೇಶನವನ್ನು ಕರೆಯಬೇಕು" ಅಂದಿದ್ದ. ಇವತ್ತು ಸಿದ್ದರಾಮಯ್ಯನವರು ಬರುವ ಶನಿವಾರ ತುರ್ತು ಅಧಿವೇಶನವನ್ನು ಕರೆಯಲಾಗುವುದು ಎಂದು ಘೋಷಿಸುತ್ತಿದ್ದಂತೆ ಯಡ್ಡಿ ಮಹಾಶಯ "ನಾವು ಬಿಜೆಪಿಗರು ಆ ತುರ್ತು ಅಧಿವೇಶನಕ್ಕೆ ಗೈರು ಹಾಜರಾಗುತ್ತೇವೆ" ಎಂದು ಹೇಳಿದ್ದಾನೆ. ಯಾಕೆ ಗೊತ್ತಾ? ಹಾಗೊಮ್ಮೆ ಬಿಜೆಪಿಗಳು ಅದರಲ್ಲಿ ಭಾಗವಹಿಸಿದರೆ ಮತ್ತು ಆ ತುರ್ತು ಅಧಿವೇಶದಲ್ಲಿ ಪ್ರಧಾನಿ ಮೋದಿಯೇ ಮಧ್ಯಸ್ಥಿಕೆ ವಹಿಸಬೇಕೆಂದು ನಿರ್ಧರಿಸಿದರೆ ಮೋದಿಯ ಮೇಲೆ ಒತ್ತಡ ಹೇರುವ ಜವಾಬ್ದಾರಿ ಯಡ್ಡಿ ಮತ್ತಾತನ ಚಿಡ್ಡಿ ಗ್ಯಾಂಗಿನ ಮೇಲೆ ಬೀಳುತ್ತದೆ.

ಆದರೆ ಮೋದಿ ಮೇಲೆ ಒತ್ತಡ ಹೇರುವ ತಾಕತ್ತಾಗಲಿ, ನೈತಿಕ ಸ್ಥೈರ್ಯವಾಗಲಿ, ರಾಜ್ಯದ ಹಿತಾಸಕ್ತಿಯಾಗಲಿ ಯಡ್ಡಿ-ಚಿಡ್ಡಿ ಗ್ಯಾಂಗಿಗೆ ಇಲ್ಲ. ಕರ್ನಾಟಕಕ್ಕೆ ಅನ್ಯಾಯವಾದರೂ, ಕಾವೇರಿ ಹರಿದುಹೋದರೂ, ಕುಡಿಯಲು ನೀರಿಲ್ಲದೆ ಕನ್ನಡಿಗರು ಬೀದಿಗಿಳಿದು ಕಣ್ಣೀರಿಟ್ಟರೂ ಚಿಡ್ಡಿಗಳಿಗೆ ಯಾವ ತಕರಾರೂ ಇಲ್ಲ, ಬದಲಾಗಿ ಅವರಿಗೆ ತಮ್ಮ ಮಹಾನ್ ಪುರುಷ, 56 ಇಂಚು ಸುತ್ತಳತೆ ಎದೆಯ ಮೋದಿ ಎಂಬ ಜುಮ್ಲಾ ನಾಯಕನನ್ನು ಕಾಪಾಡುವುದೇ ಮುಖ್ಯವಾಗಿದೆ. ಅದಕ್ಕೇ ಅವರೆಲ್ಲ ಈಗ ಮೋದಿಯ ರಕ್ಷಣೆಗೆ ನಿಂತು ಕನ್ನಡಿಗರ ಬೆನ್ನಿಗೆ ಚೂರಿ ಹಾಕಿದ್ದಾರೆ.


ದೇವೇಗೌಡರಂತಹ ಹಿರಿಯ ನಾಯಕರೇ ತಮ್ಮೆಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ರಾಜ್ಯದ ಹಿತಾಸಕ್ತಿಯ ದೃಷ್ಟಿಯಿಂದ ಸರ್ವಪಕ್ಷಗಳ ಸಭೆಗೆ ಹಾಜರಾಗುತ್ತಾರೆಂದರೆ, ಮಾಜಿ ಪ್ರಧಾನಿ ಆಗಿದ್ದ ಅವರು ಸಿದ್ದರಾಮಯ್ಯನವರಿಗೆ "ನೀವು ದಿಟ್ಟ ನಿರ್ಧಾರ ತೆಗೆದುಕೊಳ್ಳಿ. ನಾವು ನಿಮ್ಮ ಜೊತೆ ಇದ್ದೇವೆ" ಎಂದು ಹೇಳುತ್ತಿರುವಾಗ ಈ ಚಿಡ್ಡಿಗಳಿಗೆ ಏನಾಗಿದೆ ಧಾಡಿ?


ತೀರ್ಥಹಳ್ಳಿಯ ನಂದಿತಾ ಪ್ರಕರಣದಲ್ಲಿ ಬಾಯಿ ಬಡಿದುಕೊಂಡಿದ್ದ ಉಡುಪಿ-ಚಿಕ್ಕಮಗಳೂರು ಸಂಸದೆ ಶೋಭಮ್ಮ ಈಗ ಕಂಪ್ಲೀಟ್ ಸೈಲೆಂಟ್ ಮೋಡ್‌ನಲ್ಲಿದ್ದಾರೆ. ಕೊಡಗಿನಲ್ಲಿ ಕುಟ್ಟಪ್ಪ ಎಂಬಾತ ಮುಸಲ್ಮಾನರ ಮೇಲೆ ದಾಳಿ ಮಾಡಲು ಹೋಗಿ, ಅವರು ತಿರುಗಿ ಕಲ್ಲು ತೂರಿದ್ದನ್ನು ಎದುರಿಸಲಾಗದೆ ಓಡಿಹೋಗುವಾಗ ಕಾಲು ಜಾರಿ ಸತ್ತ. ಕುಟ್ಟಪ್ಪ ಕಾರ್ಗಿಲ್‌ನಲ್ಲಿ ದೇಶವನ್ನು ರಕ್ಷಿಸುತ್ತಾ ಸತ್ತ ಯೋಧ ಎಂಬಂತೆ ಆತನ ಮನೆಗೆ ಓಡೋಡಿ ಹೋಗಿದ್ದ ಬಿಜೆಪಿಯ ಅಂದಿನ ರಾಜ್ಯಾಧ್ಯಕ್ಷ ಮತ್ತು ಧಾರವಾಡದ ಈಗಿನ ಸಂಸದ ಪ್ರಹ್ಲಾದ್ ಜೋಶಿ ಈಗ ಅದೆಲ್ಲಿದ್ದಾರೆ ಎಂಬುದೇ ಯಾರಿಗೂ ಗೊತ್ತಿಲ್ಲ. ಕುಡಿಯುವ ನೀರಿಗಾಗಿ ಕಾವೇರಿ ನದಿಯನ್ನೇ ಅವಲಂಬಿಸಿರುವ ಬೆಂಗಳೂರಿನಿಂದ ಆರು ಬಾರಿ ಸಂಸದನಾಗಿರುವ ಅನಂತಕುಮಾರನೂ ಈ ವಿಷಯ ಕುರಿತು ತುಟಿಪಿಟಿಕ್ ಎಂದಿಲ್ಲ, ಮಾಜಿ ಮುಖ್ಯಮಂತ್ರಿಯೂ, ಈಗ ಬೆಂಗಳೂರು ಉತ್ತರ ಕ್ಷೇತ್ರದಿಂದ ಗೆದ್ದು ಕೇಂದ್ರದಲ್ಲಿ ಮಂತ್ರಿಯೂ ಆಗಿರುವ ಸದಾನಂದ ಗೌಡ ಕೂಡ ಗಾಯಬ್ ಆಗಿದ್ದಾರೆ. ಬೆಂಗಳೂರು ಕೇಂದ್ರ ಕ್ಷೇತ್ರದಿಂದ ಗೆದ್ದು ಸಂಸದನಾಗಿರುವ ಪಿ.ಸಿ.ಮೋಹನ್ ಅದ್ಯಾವ ಹಿಂದೆ ಅವಿತು ಕೂತಿದ್ದಾನೆ ಎಂಬುದು ಯಾರಿಗೂ ಗೊತ್ತಿಲ್ಲ, ಇನ್ನು ಪ್ರತಾಪ್ ಸಿಂಹ ಎಂಬ ಕೂಗುಮಾರನನ್ನು ಮರೆಯಲಾದೀತೆ. ಕಾವೇರಿ ನದಿ ಹುಟ್ಟುವ ಕೊಡಗಿನ ಪ್ರತಿನಿಧಿಯಾಗಿರುವ ಈ ಸಂಸದ ಮಹಾನ್ 'ದೇಶಭಕ್ತ', 'ಭಾರತೀಯರಿಗೆ ಅನ್ಯಾಯ'ವಾದಾಗಲೆಲ್ಲ ಎದೆ ತಟ್ಟಿ ಆರ್ಭಟಿಸುವ 'ಪರಾಕ್ರಮಿ'. ಆದರೆ ಕಾವೇರಿ ವಿವಾದ ಶುರುವಾದಾಗಿನಿಂದ ಆತ ಸಿಂಹ ಆಗಿ ಉಳಿದಿಲ್ಲ, ಬದಲಾಗಿ ಇಲಿಯಂತಾಗಿದ್ದಾನೆ ಎಂಬ ಗುಮಾನಿ ಆತನ ಬೆಂಬಲಿಗರಿಗೇ ಬಂದಿರುವಂತಿದೆ.


ಇದನ್ನು ಬರೆಯುತ್ತಿರುವಾಗಲೇ ಪ್ರತಾಪ್ ಸಿಂಹ "ಈ ವಿವಾದವನ್ನು ಬಗೆಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಮಿಳುನಾಡಿನ ಮುಖ್ಯಮಂತ್ರಿ ಜೊತೆ ಮಾತುಕತೆ ನಡೆಸಬೇಕಿತ್ತು, ಅದನ್ನು ಮಾಡದೇ ಪ್ರಧಾನಿಗೆ ಪತ್ರಗಳನ್ನು ಬರೆಯುತ್ತಿದ್ದಾರೆ" ಎಂದು ಆರೋಪಿಸುತ್ತಿದ್ದಾನೆ. ಅಲ್ವಾ ಮತ್ತೆ? ಕಾವೇರಿ ಸಮಸ್ಯೆ ಇರೋದು ಕರ್ನಾಟಕ ಮತ್ತು ತಮಿಳುನಾಡಿನ ನಡುವೆ; ಅದಕ್ಕೂ, ಕೇಂದ್ರ ಸರ್ಕಾರದ ನಾಯಕ ಮೋದಿಗೂ ಎತ್ತಿಂದೆತ್ತಣ ಸಂಬಂಧ ಎಂಬಂತಿದೆ ಪ್ರತ್ತಾಪನ ವಾದ.


ಕಳಸಾ-ಬಂಡೂರಿ ವಿಷಯದಲ್ಲೂ ಮೋದಿ ಕರ್ನಾಟಕಕ್ಕೆ ಮಾಡಿದ್ದು ಅನ್ಯಾಯ. ಆಗ ಸಿದ್ದರಾಮಯ್ಯನವರು "ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಸಭೆ ನಡೆಸಿ, ಆ ಮೂಲಕ ಕರ್ನಾಟಕದ ಮೂರು ಜಿಲ್ಲೆಗಳಿಗೆ ಕುಡಿಯುವ ನೀರು ಸಿಗುವಂತೆ ಮಾಡಿ" ಅಂದಾಗ ಇದೇ ಮೋದಿ "ನೀವು ಮೂರು ರಾಜ್ಯಗಳಲ್ಲಿ ನಿಮ್ಮ ಪಕ್ಷದವರ ಒಮ್ಮತ ಪಡೆದುಕೊಂಡು ಬನ್ನಿ" ಎಂದು ಸಾಗಹಾಕಿದ್ದ. ಈಗ ಕಾವೇರಿ ವಿಷಯದಲ್ಲೂ ಅಂಥದ್ದೇ ನಿರ್ಲಕ್ಷ್ಯ ಧೋರಣೆಯನ್ನು ಪ್ರದರ್ಶಿಸುತ್ತಿದ್ದಾನೆ. ಕಳೆದ ಹತ್ತು ದಿನಗಳಿಂದ ಕಾವೇರಿ ಸಮಸ್ಯೆ ಹತ್ತಿ ಉರಿಯುತ್ತಿದ್ದರೂ, ಈ ಕುರಿತು ಸಿದ್ದರಾಮಯ್ಯ ಎಂಟು ಪತ್ರಗಳನ್ನು ಬರೆದಿದ್ದರೂ ಮೋದಿಗೆ ತನ್ನ ಹುಟ್ಟುಹಬ್ಬದಂದು ಹಾರೈಸಿದವರಿಗೆ ಧನ್ಯವಾದಗಳನ್ನು ಟ್ವೀಟ್ ಮಾಡಲು ಸಮಯ ಸಿಗುತ್ತೆ, ಆದರೆ ಲಕ್ಷಾಂತರ ಜನರಿಗೆ ಅನ್ಯಾಯವಾಗುತ್ತಿದ್ದರೂ ಇದರತ್ತ ಆತ ಗಮನ ಹರಿಸುವುದಿಲ್ಲ. ಗಮನ ಹರಿಸಬೇಕೆಂದು ಚಿಡ್ಡಿ ಸಂಸದರು ಒತ್ತಾಯಿಸುವುದೂ ಇಲ್ಲ. ಬದಲಾಗಿ ಇದೇ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ "ವಿವಾದ ನ್ಯಾಯಾಲಯದ ಮುಂದಿರುವಾಗ ಮೋದಿ ಮಧ್ಯಸ್ಥಿಕೆ ವಹಿಸಬೇಕೆಂಬುದೇ ಅರ್ಥಹೀನ" ಎನ್ನುತ್ತಾರೆ. ಅದಕ್ಕೆ ಯಡ್ಡಿ ಕೂಡ "ಹೌದೌದು" ಎಂದು ತಲೆ ಆಡಿಸುತ್ತಾನೆ.


ಕನ್ನಡಿಗರು ಇದೇ ಜುಮ್ಲಾ ಮೋದಿಯನ್ನು ನಂಬಿ ಬಿಜೆಪಿಯ ನಾಲಾಯಕ್ 17 ಮಂದಿಯನ್ನು ಲೋಕ ಸಭೆಗೆ ಕಳುಹಿಸಿದ್ದರು. ಆದರೆ ಇವತ್ತು ಮೋದಿ ಮತ್ತು ಈ 17 ಸಂಸದರು ಕನ್ನಡಿಗರಿಗೆ ದ್ರೋಹ ಬಗೆದಿದ್ದಾರೆ. ಕನ್ನಡಿಗರಿಗೆ ನ್ಯಾಯ ಬೇಕು ಎಂದು ಮೋದಿಯನ್ನು ಒತ್ತಾಯಿಸಲಾಗದ, ಕರ್ನಾಟಕದ ಜನ ನೆಗೆದು ಬಿದ್ದುಹೋದರೂ ಪರವಾಗಿಲ್ಲ ಮೋದಿಯನ್ನು ರಕ್ಷಿಸಬೇಕು ಎಂದು ನಿಂತಿರುವ ಈ ಚಿಡ್ಡಿಗಳು ಕನ್ನಡಿಗರ ಬೆನ್ನಿಗೆ ಚೂರಿ ಹಾಕಿದ್ದಾರೆ. ಮೋದಿಯ ಈ ಸಂತತಿ ಕರ್ನಾಟಕದ ಶತ್ರುಗಳು ಎಂಬುದನ್ನು ನಮ್ಮ ರಾಜ್ಯದ ಜನ ಅರಿತು ಮುಂದಿನ ಚುನಾವಣೆಯಲ್ಲಿ ಅವರೆಲ್ಲರನ್ನೂ ಮತ್ತು ಅವರ ಪಕ್ಷವನ್ನೂ ಧಿಕ್ಕರಿಸಬೇಕಿದೆ. ■

















ವಾಟ್ಸ್‌ಅಪ್‌ನಲ್ಲಿ 'ಭಕ್ತರ ಪೋಸ್ಟ್ ಮಾರ್ಟಮ್' ಎಂಬ ಗುಂಪು ಬಿಜೆಪಿ ಸಂಸದರ ನಿಷ್ಕ್ರಿಯತೆಯ ಬಗ್ಗೆ ಹಂಚಿಕೊಂಡಿರುವ ಪೋಸ್ಟರ್‌ಗಳು





ಹಸು-ಹೋರಿಗಳ ಚಿತ್ರ (ದೇಶಿ ಮತ್ತು ವಿದೇಶಿ)





ಮಿಶ್ರ ತಳಿಯ ದನಗಳೂ ದಗಲುಬಾಜಿ ರಾಘುನ 'ಧಾತು' ಶಾಸ್ತ್ರವೂ!!

ಫ್ರೆಣ್ಯಕೋಟಿಯ ಗುಣಗಾನ ಚಂಡ ವ್ಯಾಘ್ರ ಮಾಡಿದರೆ ನಂಬುವುದಾದರೂ ಯಾರು? ಈ ಖೂಳ ಹುಲಿ ತನ್ನೊಳಗಿನ ತೆವಲು-ತೀಟೆ ತೀರಿಸಿಕೊಳ್ಳಲು ಗೋವಿನ ಹಾಡು ಹಾಕುವ ನಾಟಕ ನಡೆಸುತ್ತಿದೆ ಎಂಬುದು ಅರ್ಥವಾಗದೇ ಇರುತ್ತದಾ? ಗೋ ಸ್ವಾಮಿ ಎಂಬ ಹುಸಿ ಮುಖವಾಡ ಹಾಕಿಕೊಂಡು ಕಂಡ-ಕಂಡ ಅಮಾಯಕ ಹೆಂಗಸರನ್ನೆಲ್ಲ ಉಂಡು ತೇಗಿದ ಭಂಡ ರಾಘು ಸ್ವಾಮಿ ಕುಖ್ಯಾತಿಯಿಂದ ಹೊರಬರಲು ಗೋ ಚತುರ್ಮಾಸ ಮಾಡಿಮುಗಿಸಿದ್ದಾನೆ. ಅವಳಿ ರೇಪ್ ರಾದ್ಧಾಂತ ನಿಭಾಯಿಸಲು ರಾಮಚಂದ್ರಾಪುರ ಮಠದ ಹುಂಡಿ ಖಾಲಿ ಮಾಡಿರುವ ರಾಘು ಮತ್ತದನ್ನು ತುಂಬಲು 'ಗೋ ಕಿಂಕರ ಯಾತ್ರೆ' ನೆಪದಲ್ಲಿ ಭಿಕ್ಷಾಟನೆಗೆ ವೇಷ ಕಟ್ಟುತ್ತಿದ್ದಾನೆ. ಅಂಥದೊಂದು ಅನುಮಾನಕ್ಕೆ ಬಿದ್ದಿರುವ ಮಠದ ಭಕ್ತಾದಿಗಳಲ್ಲೇ ಗುಸು-ಗುಸು ಚರ್ಚೆಗಳು ಶುರುವಾಗಿದೆ.

ಷಡ್ಯಂತ್ರ ಹೆಣೆಯುವುದು-ಕಣ್ಕಟ್ಟು ಆಟ ಆಡುವುದರಲ್ಲಿ ರಾಘು ಇಂಟರ್‌ನ್ಯಾಷನಲ್ ಕ್ರಿಮಿನಲ್ ಚಾರ್ಲ್ಸ್ ಶೋಭರಾಜ್‌ಗಿಂತಲೂ ನಿಸ್ಸೀಮ! ದೇಶಾದ್ಯಂತ ಎದ್ದಿರುವ ಗೋ ನೆಪದ ಕ್ಷೋಭೆಯ ದುರ್ಲಾಭ ಪಡೆದು ತನ್ನ ಮುಖಕ್ಕೆ ಮೆತ್ತಿದ ಸಗಣಿ ತೊಳೆದುಕೊಳ್ಳಬಹುದೆಂಬ ದು(ದೂ)ರಾಲೋಚನೆಯಿಂದಲೇ ಈ ಬಾರಿ ಆತ ಗೋವನ್ನೇ 'ವಸ್ತು'ವಾಗಿಟ್ಟುಕೊಂಡು ಚಾತುರ್ಮಾಸ 'ವ್ರತ' ನಡೆಸಿದ್ದಾನೆ. ಆಕಳು-ಗೂಳಿಗಳ ಸಗಣಿ, ಮೂತ್ರ, ಹಾಲಿಂದ ಹಿಡಿದು ಅವುಗಳ ಸಂತಾನಾಭಿವೃದ್ಧಿಯ ಸಮ್ಮಿಲನದವರೆಗೆ ರಂಗು-ರಂಗಿನ ಪ್ರವಚನ ಬಿಗಿದಿದ್ದಾನೆ. ಮಧ್ಯಮ ವರ್ಗದ ಹಿಂದೂಗಳ ಗೋವುಗಳೆಡೆಗಿನ ಭಾವುಕತೆಯನ್ನೇ ಬಂಡವಾಳ ಮಾಡಿಕೊಂಡು ತನ್ನ ಅಸಲೀ ಅನಾಚಾರ ಮರೆಮಾಚಲು ಹವಣಿಸಿದ್ದಾನೆ.

ತನ್ನ ತಾಲಿಬಾನಿ ಪಡೆಯ ಪುಂಡಾಗ್ರಜರನ್ನು ಕರೆಕರೆದು ಸನ್ಮಾನಿಸಿ ಹುರಿದುಂಬಿಸಿದ್ದಾನೆ. ತನ್ಮೂಲಕ ತನ್ನ





ಪೀಠಾಧಿಪತ್ಯದ ರಾಮಚಂದ್ರಾಪುರ ಮಠ 'ಭಯವೇ ಧರ್ಮದ ಮೂಲ' ಎಂಬ ತತ್ವಾದರ್ಶ ಅಳವಡಿಸಿಕೊಂಡಿದೆ ಎಂಬ ಸಂದೇಶ ಹವ್ಯಕ ಸಮುದಾಯದಲ್ಲಿ ಹರಡಿ ಪಟ್ಟ ಭದ್ರತೆಗೆ ಪರದಾಡಿದ್ದಾನೆ, ಪಾಪ!! ಮೂಕ ಗೋವಿಗೆ ಗಂಟುಬಿದ್ದರೆ ಗಂಟು ಮತ್ತು ಪ್ರಸಿದ್ಧಿ ಎರಡೂ ಒಟ್ಟೊಟ್ಟಿಗೇ ದಕ್ಕಿಸಿಕೊಳ್ಳಬಹುದೆಂಬ ಸತ್ಯ ಸಾಕ್ಷಾತ್ಕಾರ ಪೀಠಕ್ಕೇರಿದ ಕೆಲವೇ ದಿನಗಳಲ್ಲಿ ರಾಘು ವಿಶ್ವ ಗೋ ಯಾತ್ರೆಯಂಥ ಗಿಮಿಕ್ ಮಾಡಿ ಯಶಸ್ವಿಯೂ ಆಗಿದ್ದ. ಗೋ ಉತ್ಪನ್ನಗಳ ಬಿಸ್ನೆಸ್ಸೂ ಆರಂಭಿಸಿದ್ದ, ಗಾಯಕಿಯರಿಂದ ಹಾಡಿಸಿ, ನೃತ್ಯಗಾರ್ತಿಯರನ್ನು ಕುಣಿಸಿ ರಾಮಕಥೆ ನಡೆಸಿದ ರಾಘವನ ಗವ್ಯ ಉತ್ಪನ್ನಕ್ಕೆ ಈ ಕಥೆಯಿಂದ ಮಾರುಕಟ್ಟೆಯೇನೂ ಕುದುರಲಿಲ್ಲ, ಆಗಾತ ಗವ್ಯ ಮಾರುಕಟ್ಟೆಗೆ ಮಹತ್ವ ತರಲೆಂದೇ 'ಗೋ ಕಥಾ' ಪ್ರಹಸನವೂ ಮಾಡಿದ್ದ.

ಗೋ ದಂಧೆ ದೊಡ್ಡಮಟ್ಟದಲ್ಲಿ ಕುದುರಿಸಿಕೊಳ್ಳಲೆಂದೇ ರಾಘು ಗೋ-ಕಥಾ, ಗೋ-ತುಲಾಭಾರ, ಗೋ ಗ್ರಾಮ ಉತ್ಪನ್ನ, ಗೋ ಪ್ರದರ್ಶನ, ಕಾಮಧೇನು ಮಹಾಯಾಗವೇ ಮುಂತಾದ ನವ ವಿಧ ಸರ್ಕಸ್‌ನ ಜಾತ್ರೆಯನ್ನು 2013ರ ಅಂತ್ಯದಲ್ಲಿ ಮಾಡಿದ್ದ. ಆದರದು ಫ್ಲಾಪ್ ಶೋನಂತಾಗಿತ್ತು, ರಾಮ ಕಥೆಯಷ್ಟು ದೊಡ್ಡ ಯಶಸ್ಸು ರಾಘುಗೆ ಗೋಕಥಾದಿಂದ ಸಿಗಲಿಲ್ಲ, ಕಾಸೂ ಸಿಕ್ಕಿದ್ದು ಅಷ್ಟಕಷ್ಟೇ. ಆದರೆ ರಾಮಕಥೆಯಂತೆಯೇ ಗೋ ಕಥೆಯಲ್ಲಿ ರಾಘು ಮೈಮರೆತು ಪೀಠ ಒದ್ದೆ ಮಾಡಿಕೊಂಡಿದ್ದು ದೊಡ್ಡ ಸುದ್ದಿ-ಸದ್ದು ಮಾಡಿತ್ತು. ಗೋ ಕಥೆಯಲ್ಲಿ ದುಡ್ಡು ಸಿಕ್ಕಿದರೆ ಅದನ್ನು ಗೋ ಪ್ರವಾಸೋದ್ಯಮದಲ್ಲಿ ತೊಡಗಿಸುವ ಯೋಜನೆ ರಾಘು ಹಾಕಿಕೊಂಡಿದ್ದ. ಮತ್ತೆ ನಾಲ್ಕಾರು ಸರ್ಕಾರಿ ಅನುದಾನ ಸಿಗುವ ಗೋಶಾಲೆ, ಗೋಬರ್ ಗ್ಯಾಸ್ ಪ್ಲಾಂಟ್, ಉದ್ಯಾನವನ, ಹೋಮ್‌ಸ್ಟೇ ತರಹದ ಕುಟೀರಗಳು, ಪಶು ಆಹಾರ ಗೋದಾಮು, ಸೋಲಾರ್ ದೀಪ, ಧ್ಯಾನ-ಯೋಗಮಂದಿರ, ಪ್ರವಾಸಿಗರಿಗೆ ಮೂಲ ಸೌಕರ್ಯ.... ಹೀಗೆ ಕೋಟಿ-ಕೋಟಿ ರೂಪಾಯಿಗಳ ಪ್ರವಾಸೋದ್ಯಮ ಕುಮಟಾದ 'ಹೊಸಾಡ' ಎಂಬ ಅರಣ್ಯಾವೃತ ಹಳ್ಳಿಯಲ್ಲಿ ಕೈಗೊಳ್ಳುವ ಕನಸು ರಾಘು ಕಂಡಿದ್ದ. ಅದಕ್ಕೆಂದೇ ಗೋ ಕಥಾ, ಜನಜನನಿ ಜಾತ್ರೆ ಮಾಡಿದ್ದ.

ಗೋವಿನ ಉಪಯೋಗ, ಅದರ ಉತ್ಪನ್ನಗಳ ಬಳಕೆ ಬಗ್ಗೆ ಚಂಡ ವ್ಯಾಘ್ರನಂಥ ರಾಘು ಅಥವಾ ಆತನ ಖೂಳ ತಾಲಿಬಾನಿ ಪಡೆ ಜನರಿಗೆ ತಿಳಿವಳಿಕೆ ಕೊಡುವ ಅಗತ್ಯವೇನೂ ಇರಲಿಲ್ಲ, ಹಳ್ಳಿಗಾಡಿನ ಸಂಸ್ಕೃತಿ, ಜನಪರ ಬದುಕು ಹಸು-ಹೋರಿಯ ಅಗತ್ಯ-ಅಸ್ತಿತ್ವ ಸಾರಿಸಾರಿ ಹೇಳಿವೆ. ಇದೇ ರೀತಿ ಬೇಡ ಜಾನುವಾರುಗಳನ್ನು ತಿನ್ನುವವರಿಗೆ ಮಾರುವುದೂ ತಲತಲಾಂತರದಿಂದ ನಡೆದು ಬಂದ ರಿವಾಜು. ಇದು ಪ್ರಕೃತಿ ನಿಯಮವೂ ಹೌದು. ಇದರಲ್ಲಿನ ಅರ್ಧ ಸತ್ಯವನ್ನಷ್ಟೇ ಬಳಸಿಕೊಂಡು ನಕಲಿ ಸ್ವಾಮಿ ರಾಘುನಂಥ ಕಾವಿ-ಕೇಸರಿ ಖೂಳರು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಈ ಹುನ್ನಾರ ಅರ್ಥವಾಗದ ಶೂದ್ರರು ಪಾಪಕೂಪದಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ.

ಗೋವಿನ ಮಹತ್ವ ತನ್ನ ರಕ್ಷಣೆ-ಅನುಕೂಲಕ್ಕೆ ತಕ್ಕಂತೆ ರಾಘು ಹೇಳುತ್ತಲೇ ಬಂದಿದ್ದಾನೆ. ಹಿಂದೆ ಹಸು-ಗೂಳಿ ಸಾಕುವುದು ಸಾಮಾನ್ಯವಾಗಿತ್ತು, ಕೃಷಿಕರಿಗೆ ಜಾನುವಾರು ಜೀವನದ ಅವಿಭಾಜ್ಯ ಅಂಗವಾಗಿತ್ತು, ಖೋಟಾ ಕವಿ ಕುಲಗುರು ರಾಘು ಅದೇನೇ ಹೇಳಲಿ, ಅಂದು ಕುಟುಂಬಗಳು ಸಾಕುತ್ತಿದ್ದ ಹಸುಗಳು ಅಲ್ಪ ಪ್ರಮಾಣದಲ್ಲಿ ಹಾಲನ್ನು ಸೀಮಿತ ಅವಧಿಗೆ ಮಾತ್ರ ನೀಡುತ್ತಿದ್ದವು. ಎಮ್ಮೆಗಳೇ ಹಾಲಿನ ಬಹುತೇಕ ಬೇಡಿಕೆ ಪೂರೈಸುತ್ತಿದ್ದವೆಂಬ ಸತ್ಯ ಖಾಲಿ ಬುರುಡೆಯ ಕಾಮದುರಂಧರ ರಾಘುನಂಥವರಿಗೆ ಗೊತ್ತಿರಲು ಸಾಧ್ಯವೇ ಇಲ್ಲ ಬಿಡಿ. ದಿನಮಾನ ಬದಲಾದಂತೆ ಗೋವುಗಳನ್ನು ಪೋಷಿಸುವುದು ಅಥವಾ ಹೈನುಗಾರಿಕೆ ಸಾಮಾಜಿಕ - ಆರ್ಥಿಕವಾಗಿ ಕಷ್ಟವಾಯ್ತು.

ಭಾರತಕ್ಕೆ ಬಂದ ವಿದೇಶಿ ತಳಿಗಳು ಹರಿಸುತ್ತಿದ್ದ ಕ್ಷೀರಧಾರೆ ದೇಶಿ ಗೋವುಗಳ ಮಹತ್ವ ಕಮ್ಮಿ ಮಾಡಿತು. ಭಾರತೀಯ ಗೋತಳಿ ಪಾಲನೆ-ಪೋಷಣೆ ಆರ್ಥಿಕವಾಗಿ ಹೊರೆ ಎಂಬ ಭಾವನೆ ಬಂತು. ಬದಲಾದ ಜೀವನಶೈಲಿಯಿಂದ ಕಡ್ಡಾಯವಾಗಿ ಎಂಬಂತೆ ಮನೆ-ಮನೆಗಳಲ್ಲಿ ಇರುತ್ತಿದ್ದ ಕೊಟ್ಟಿಗೆಗಳು ಕಣ್ಮರೆಯಾದವು. ಇದೆಲ್ಲದರ ಪರಿಣಾಮವಾಗಿ ದೇಶಿ ದನದ ಸಂತತಿ ಕ್ರಮೇಣ ನಶಿಸಿತು. ರಾಘುನಂಥ ಖೋಟಾ ಸ್ವಾಮಿಗಳು ಅಥವಾ ಸಂಘ ಪರಿವಾರದ ಪರಾಕ್ರಮಿಗಳು ಹೇಳುವಂತೆ ಸಾಬರು-ದಲಿತರು ತಿಂದೇ ಗೋ ಸಂತತಿ ನಶಿಸಿತೆಂಬುದು ಅಪ್ಪಟ ಸುಳ್ಳು. ಹಿಂದೂಗಳಿಗೆ ಅದರಲ್ಲೂ ರಾಘುನ ಹವ್ಯಕ ಸಮುದಾಯಕ್ಕೆ ಗೋಪಾಲನೆ ಈಗ ಬೇಡವಾಗಿದೆ. ಗೋ ತಳಿ ರಕ್ಷಣೆ, ಹಸುವಿನ ಪಾವಿತ್ರ್ಯ, ಗೋ ಉತ್ಪನ್ನ ಬಳಕೆ, ಗೋಮೂತ್ರ, ಗೋಮಾಯು, ಗೋಶಾಲೆ ಎಂದೆಲ್ಲ ಬಡಬಡಿಸುವ ಸ್ವಯಂಘೋಷಿತ ಗೋರಕ್ಷಕರು ಹಸು ಸಾಕಲು ಮಾತ್ರ ಮನಸ್ಸು ಮಾಡುತ್ತಿಲ್ಲ, ಇದು ರಾಘು ಮತ್ತಾತನ ಗೋ ಕಿಂಕರ ಪಡೆಯ ಆಷಾಢಭೂತಿತನಕ್ಕೆ ಜೀವಂತ ನಿದರ್ಶನದಂತಿದೆ!

ದನ-ಕರು ಮುಟ್ಟಲಿಕ್ಕೂ ಹೇಸುವ ಈ ಮಂದಿ ಯಾರೋ ಸಗಣಿ-ಮೂತ್ರ ಬಳಿದು, ಮೈ ತೊಳೆದು ಚಂದ ಮಾಡಿಟ್ಟ ಹಸುವಿಗೆ ಕುಂಕುಮ ಇಟ್ಟು, ಆರತಿ ಬೆಳಗುತ್ತಾರಷ್ಟೇ. ಜರತಾರಿ ಮಡಿಯುಟ್ಟುಕೊಂಡು ಗೋವಿನ ಬಗ್ಗೆ ಗಂಟೆಗಟ್ಟಲೆ ಬೂಟಾಟಿಕೆಯ ಭಾಷಣ-ಪ್ರವಚನ ಬಿಗಿಯುತ್ತಾರೆ. ಅಮಾಯಕರನ್ನು ದಲಿತರು, ಸಾಬರ ಮೇಲೆ ಛೂಬಿಟ್ಟು ತಾವು ರಾಜಕೀಯ-ಸಾಮಾಜಿಕ ಪ್ರತಿಷ್ಠೆ ಬೆಳೆಸಿಕೊಳ್ಳುತ್ತಾರೆ. ಗೋವಿನ ಬಗ್ಗೆ ಕಳಕಳಿ-ಕಾಳಜಿ ಪ್ರದರ್ಶಿಸುವ ರಾಘು ಶಿಷ್ಯಸಂಕುಲದಲ್ಲಿ ಎಷ್ಟು ಜನರ ಮನೆಯಲ್ಲಿ ನಿಯತ್ತಿನಿಂದ ದನ ಸಾಕಲಾಗಿದೆ? ದನ ಸಾಕಲಾಗದವನು ಅದರ ಮಹತ್ವ-ಅನಿವಾರ್ಯತೆ ಬಗ್ಗೆ ಮಾತಾಡುವುದೇ ಹಾಸ್ಯಾಸ್ಪದ!!

ದೇಶಿ ಗೋವು, ಸೀಮೆಹಸು ಎಂದೆಲ್ಲ ಪೀಠದಲ್ಲಿ ಕುಂತಲ್ಲೇ ಹಾರಾಡುವ ರಾಘುನ ಆತ್ಮವಂಚನೆ ಒಂದೆರಡಲ್ಲ, ಆತನ ಗೋಶಾಲೆಯ ಹಸುಗಳೇ ಕಸಾಯಿಖಾನೆಗೆ ಹೋಗುತ್ತಿವೆ. ಮೂಕ ಜಾನುವಾರುಗಳ ಹಿಂಡಿಹುಲ್ಲುಗಳ ಹೆಸರಲ್ಲಿ ಸುಳ್ಳು ಲೆಕ್ಕ ಬರೆಯಲಾಗುತ್ತಿದೆ. ಅಷ್ಟೇ ಏಕೆ; ರಾಮಚಂದ್ರಾಪುರ ಮಠದ ಪಾರುಪತ್ಯದಲ್ಲಿರುವ ಗೋಕರ್ಣ ಮಹಾಬಲೇಶ್ವರನ ಆತ್ಮಲಿಂಗ ಅಭಿಷೇಕಕ್ಕೆ ಒಂದು ದೇಶಿ ಆಕಳ ಹಾಲು ಆಡಳಿತಗಾರರಿಗೆ ತರಲಾಗುತ್ತಿಲ್ಲ, ಇವತ್ತಿಗೂ ಆತ್ಮಲಿಂಗಕ್ಕೆ ಪಾಶ್ಚರೀಕರಿಸಿದ ಯಾವ್ಯಾವುದೋ ಮಿಲ್ಕ್ ಕಂಪನಿಯ 'ವೈಲಿಗೆ'ಯ ಪ್ಯಾಕೆಟ್ ಹಾಲನ್ನೇ ಸುರಿಯಲಾಗುತ್ತಿದೆ. ಇದು ರಾಘುನ ಅಸಲೀ ಗೋ ಪ್ರೀತಿ-ನಿಷ್ಠೆಗೆ ಪ್ರತೀಕದಂತಿದೆ!! ಇಂಥ ಡೋಂಗಿ ರಾಘುನಿಂದ ಗೋರಕ್ಷಣೆ ಸಾಧ್ಯವಾ? ಜನರ ದಿಕ್ಕು ತಪ್ಪಿಸುವ ಷಡ್ಯಂತ್ರವಾ?

ಏನೂ ಬೇಡ. ಗೋ ಹಬ್ಬಗಳಲ್ಲಿ ಮಡಿ ಉಟ್ಟುಕೊಂಡು, ಶಾಲು ಹಾಕಿಕೊಂಡು ಓಡಾಡುವ ರಾಘುನ ಪ್ರತಿಷ್ಠಿತ ಶಿಷ್ಯರು, ಸಾಮಾನ್ಯ ಅನುಯಾಯಿಗಳಾದರೂ ಗೋವು ಸಾಕುವಂತಾಗಿದ್ದರೆ ಆತನ ಗೋ ಸರ್ಕಸ್‌ಗಳಿಗೆ ಒಂದು ಅರ್ಥವಾದರೂ ಇರುತ್ತಿತ್ತು, ವೈದಿಕರೇ ಇವತ್ತು ಗೋ ದಾನ ತಿರಸ್ಕರಿಸಿ ಅದರ ಮೌಲ್ಯದ ಹಣ ಕೊಡುವಂತೆ ಕೇಳುತ್ತಿದ್ದಾರೆ. ಇದೆಲ್ಲ ತಡೆಗಟ್ಟುವ ನೈಜ ಕಳಕಳಿ, ನೈತಿಕ ಧೈರ್ಯ ರಾಘುನಲ್ಲಿ ಇಲ್ಲ! ಗೋವು ಏನಿದ್ದರೂ ರಾ... ಪಾಲಿಗೆ ಮುಖ ಉಳಿಸಿಕೊಳ್ಳಲು ಮತ್ತು ದುಡ್ಡು ಮ... ಸಾಧನವಷ್ಟೇ!

ರಾಘು ಮೊನ್ನೆ ಮುಗಿಸಿರುವ ಗೋ-ಚತುರ್ಮಾ... ದನದ ಬಗ್ಗೆ ಬೇಡದ್ದೇ ಹೆಚ್ಚು ಹಲುಬಿದ್ದಾನೆ. ... ದಿನವೂ ಆತ ಕೊಟ್ಟ ಗೋಪ್ರವಚನ ಬರೀ ಹ... ಬೂದಿ ಎಂದು ಮಠದ ಮಾಣಿಗಳೇ ಮುಸಿ-ನಗುತ್ತಾರೆ. ಒಂದು ಪ್ರವಚನದಲ್ಲಂತೂ ಆತ ... ಹಸುಗಳನ್ನಷ್ಟೇ ಸಾಕಿರಿ. ಅರೆ ದೇಶಿ-ಅರೆ ವಿದೇಶಿ ... 'ಕ್ರಾಸ್'ಗೆ ಪ್ರಯತ್ನಿಸುವುದು ಮಹಾಪಾಪ! ವಿದೇಶಿ... ಹೋರಿಯ ಧಾತು (ವೀರ್ಯ) ಕುಬ್ಜ ದೇಶಿ ಹ... ಗರ್ಭಕೋಶಕ್ಕೆ ಬಿಡುವುದೇ ಧರ್ಮ ವಿರೋಧಿ ... ಹೇಳಿದ್ದಾನೆ. ದೊಡ್ಡ ಗಾತ್ರದ ಕರು ಸಣ್ಣ ಸೈಜಿನ... ಹಸುವಿನ ಗರ್ಭ ಚೀಲದಲ್ಲಿ ಅದ್ಹೇಗೆ ಬೆಳೆಯು... ಅದಕ್ಕೆಷ್ಟು ಹಿಂಸೆ ಆದೀತು ಎಂಬೆಲ್ಲ ಲೈಂಗಿಕ-... ಶಾಸ್ತ್ರ ಉಪನ್ಯಾಸ ಮಾಡಿದ್ದಾನೆ.

ಇಷ್ಟಕ್ಕೆ ರಾಘುನ 'ಧಾತು ಶಾಸ್ತ್ರ'ದ ವಿವರಣೆ ಮು... ಒಂದು ಹಂತದಲ್ಲಿ ತಳಿ ಶಾಸ್ತ್ರಜ್ಞನಂತೆ ತಾರಕ ... ಆತ ವಿದೇಶಿ ಪುರುಷರ ಧಾತು ಭಾರತೀಯ ನಾರಿ... ಬಿಡುವ ಮಾತಾಡಿದ್ದಾನೆ. "ವಿದೇಶಿಯರು ಸುಪೀರಿ... ಭಾರತೀಯರು ಇನ್‌ಫೀರಿಯರ್ ಎಂಬ ... ನಮ್ಮಲ್ಲಿದೆಯಲ್ಲವಾ...? ಸುಪೀರಿಯರ್ ಅಮೆ... ಬ್ರಿಟನ್‌ನ ಪುರುಷರ ಧಾತು ತಂದು ಭಾರ... ಹೆಂಗಸರೆಲ್ಲರ ಉದರಕ್ಕೆ ಬಿಟ್ಟರೆ ನೀವು ಒಪ್ಪೀ... ಎಂದು ರಾಘು ತನ್ನ ಅನುಯಾಯಿಗಳಿಗೆ ಕೇ... ಗುರುವಿನ ಗಲೀಜು ಮಾತಿನ ಧ್ವನಿ ಅರ್ಥವಾಗದ... ಅನುಯಾಯಿಗಳು "ಧಾತು ಆಘಾತ"ಕ್ಕೆ ಕೇಕೆ ... ಚಪ್ಪಾಳೆ ಹೊಡೆದು ಸಂಭ್ರಮಿಸಿದ್ದಾರೆ. ಇದ... ಮುದಗೊಂಡ ಪೋಲಿ ಗುರು "ಧಾತು" ವಿ... ಪದೇಪದೇ ಪುನರಾವರ್ತಿಸಿದ್ದಾನೆ. ಸಂತನೊಬ್ಬನ ಬಾ... ಪ್ರವಚನ ರೂಪದಲ್ಲಿ ಬರಬಾರದ ಈ ಕೃತಕ ಗರ್ಭಧಾ... ಬುರ್ನಾಸ್ ಮಾತುಗಾರಿಕೆ ಬುದ್ಧಿವಂತ ಬ್ರಾಹ್ಮಣ (ಹ... ಸಹಿಸಿಕೊಂಡಿರುವುದೇ ವಿಪರ್ಯಾಸ. ಹವ್ಯಕ ಸ... ನೈತಿಕತೆ, ವೈಚಾರಿಕತೆ, ನಾಗರಿಕ ಶಿಷ್ಟಾಚಾರವನ್ನೆಲ್ಲ ... ಅಧಃಪತನಕ್ಕೆ ತಳ್ಳುತ್ತಿರುವುದು ದುರಂತವೇ ಸರಿ...

'ಲೀವಿಂಗ್ ಟುಗೆದರ್' ಸಂಸ್ಕೃತಿಯ ಸಂತ ಶಿ... ಯೆಂದು ಬೆಂಗಳೂರು ಸೆಷನ್ಸ್ ನ್ಯಾಯಾಲಯದ ತೀ... ದಾಖಲಾಗಿರುವ ರಾಘು ಸ್ವಾಮಿ ಹಸುಗಳ, ಮ... ಸಹಜ ಲೈಂಗಿಕ ಗರ್ಭಧಾರಣೆ ಪ್ರತಿಪಾದಿಸುವ... 'ವಿಶೇಷ'ವೇನೂ ಇಲ್ಲ ಬಿಡಿ. ಕೃತಕ ಗರ್ಭ... ವಿರೋಧಿಸಲು ಈತ ಕೊಟ್ಟಿರುವ ಹೋಲಿಕೆ ಆತನ ... ಮನಸ್ಥಿತಿಯ ಪ್ರತಿಬಿಂಬದಂತಿದೆ. ರಾಘುನ ಡಿಂಗ್... ವಿಚಾರ ಲಹರಿ ಈಗ ಬಹಿರಂಗ ಪ್ರವಚ... ನುಸುಳುತ್ತಿದೆ! ಮುಂದೆ ಏನೇನು ಆನಾಹುತ ಕಾದಿ... ಹವ್ಯಕ ಸಮುದಾಯಕ್ಕೆ? ರಾಮಕಥಾ ಗಾಯಕಿಯ ಮ... ಒಳ ಉಡುಪಿನ ಮೇಲೆಲ್ಲ ಸ್ವ-ಧಾತು ಚೆಲ್ಲಿದ ಸ... ರಾಘು ಸ್ವಾಮಿಗೆ ಸಹಜವಾಗೇ ವಿದೇಶಿ ಧಾತ... ಮಾತಾಡುವ ಪ್ರೌಢಿಮೆ ಬಂದಿದೆ, ಅಲ್ಲವಾ?!


ದೇಶಿ ಹಸು ಪಾಲನೆ ದುಬಾರಿಯಾಗಿರು... ಕಾಲದಲ್ಲಿ ಹೆಚ್ಚು ಹಾಲು-ಸಗಣಿ ಕೊಡುವ, ಒ... ಸೋವಿ ಪಶುಪಾಲನೆಯೂ ಆಗಿರುವ 'ಕ್ರಾಸ್' ... ಗುರುಗಳು ವಿರೋಧ ವ್ಯಕ್ತಪಡಿಸುತ್ತಿರುವುದು ಬಹು... ಹವ್ಯಕರಲ್ಲೀಗ ಗೊಂದಲ ಮೂಡಿಸಿಬಿಟ್ಟಿದೆ. ಗುರುವೇಕೆ ಹೀಗೆ ಹುಚ್ಚುಚ್ಚಾಗಿ ಹಲುಬಲು ... ಮಾಡಿದ್ದಾರೆಂಬ ಜಿಜ್ಞಾಸೆಯೂ ಶುರುವಾಗಿದೆ. ಕಾಲ-... ತಕ್ಕಂತೆ ಒಂದು ಸಮಾಜ ಬದಲಾಗಲು ಬಿಡದ ... ಆಸಾಮಿ ಗುರುವಾಗಲು ಯೋಗ್ಯನಾ? ನಡತೆಗೆಟ್ಟ, ... ದ್ವೇಷದ, ಸೇಡಿನ ಪ್ರವಚನ ಹೊಡೆಯುವ ... ಕೆಡಿಸಿಕೊಂಡಿರುವ ಚಟಗಾರ ಗುರು ಪೀಠದಲ್ಲಿರ... ಎಂಬ ನೈತಿಕ ಒತ್ತಡ ಹವ್ಯಕರಲ್ಲಿ ಇನ್ನೂ ವಿಳದಿ... ದುರಂತ.

'ಧಾತು ಗುರು' ರಾಘು ಹವ್ಯಕ ಪೀಠದಲ್ಲಿ ಇರ... ಕಾಲವೂ ಆ ಸಮಾಜಕ್ಕೆ ಮುಜುಗರ ತಪ್ಪಿದ್ದಲ್ಲ!

■ ಶುದ್ದೋ...

ಮುಂದೆ ಅಂತಹ ಬಾಂಧವ್ಯ ಸಾಧ್ಯವೆ!

ಬೆಂಗಳೂರ ಗಲಭೆಯ ನಂತರ ಗಲಭೆಗ್ರಸ್ತ ಕೆಲವು ಬಡಾವಣೆಗಳಲ್ಲಿ ತಿರುಗಾಡಿದೆ. ಅಲ್ಲಲ್ಲಿ ಸುಟ್ಟ ಲಾರಿಗಳ ಅಸ್ಥಿಪಂಜರದ ಕೆಳಗೆ ಬಿದ್ದ ಬೂದಿಯನ್ನು ಬೀದಿ ಗುಡಿಸುವ ಮಹಿಳೆಯರು ಬಾಚಿ ಬಳಿದು ಗುಡ್ಡೆ ಮಾಡುತ್ತಿದ್ದರು. ಅವರಲ್ಲಿ ಬಹುತೇಕರು ತಮಿಳು ಕುಲಮಾತೆಯರು. ತಮ್ಮ ಕೆಲಸದಿಂದ ಸುಸ್ತಾಗಿ ಸುಧಾರಿಸಿಕೊಳ್ಳಲು ಕೆಲವರು ತೆರೆಯದ ಅಂಗಡಿ ಬಾಗಿಲೆದುರು ಕುಳಿತು ಎಲೆಯಡಿಕೆ ಜಗಿಯುತ್ತಿದ್ದರು. ನನಗೇನೋ ಅನ್ನಿಸಿ ಸುಮಾರು ಹೊತ್ತು ಅವರನ್ನೇ ನೋಡಿದೆ.



ಇದೇ ರೀತಿಯ ಹೆಂಗಸರನ್ನು ಈಚೆಗೆ ಬಾಂಬೆಗೆ ಹೋದಾಗ ನೋಡಿದ್ದೆ. ಬೊಂಬಾಯಿಯದ್ದೇ ಆದ ಒಂದು ಭಾಷೆ, ವೇಶ ಅವರನ್ನೇನು ಮಾಡಲಾಗಿರಲಿಲ್ಲ. ತಮಿಳುನಾಡಿನ ತಮ್ಮ ಕಾಲೋನಿಯಲ್ಲಿ ನಿಂತು ಕುಳಿತು ಹರಟಿದಷ್ಟೇ ಸಲೀಸಾಗಿ ಬಾಂಬೆಯಲ್ಲೂ ಹರಟುತ್ತಿದ್ದರು. ಹಾಗೆಯೇ ಈ ಬೆಂಗಳೂರಿನಲ್ಲೂ ತಮಿಳರು ನೆಲೆಸಿದ್ದು ಈ ಊರನ್ನ ಚೊಕ್ಕಟಗೊಳಿಸಲು ಬಹಳ ಹಿಂದಿನಿಂದಲೂ ಶ್ರಮಿಸುತ್ತಿದ್ದಾರೆ.

ಹಿಂದಿನಿಂದಲೂ ತಮಿಳಿಗರ ವಲಸೆ ಕರ್ನಾಟಕದ ಮಟ್ಟಿಗೆ ಪ್ರವಾಹದಂತೆ ಸಂಭವಿಸಿದೆ. ಅವರೆಲ್ಲಾ ನಿರ್ಗತಿಕ ಬಡವರು. ಆದ್ದರಿಂದ ಕರ್ನಾಟಕದ ಸ್ಲಮ್ಮುಗಳೆಲ್ಲಾ ತಮಿಳರಿಂದ ತುಂಬಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅವರೆಲ್ಲಾ ಶ್ರಮಿಕರು. ಸದಾ ಇರುವೆಗಳಂತೆ ಕಟ್ಟಡ ಕಟ್ಟುವುದು, ಡ್ಯಾಂ ಕಟ್ಟುವುದು, ಸೇತುವೆ ನಿರ್ಮಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ. ಕನ್ನಂಬಾಡಿ ಕಟ್ಟುವುದರಲ್ಲೂ ತಮಿಳು ಕಾರ್ಮಿಕರ ಶ್ರಮ ದೊಡ್ಡದಿತ್ತು. ಇಂಜನಿಯರ್‌ಗಳೂ ತಮಿಳುನಾಡಿನ ಅಯ್ಯಂಗಾರಿಗಳಿದ್ದರು. ಆಗ ಭಾಷಾ ಪ್ರಾಂತ್ಯವೆಂಬ ಗಡಿಯೇ ಇರಲಿಲ್ಲ.

ತಮಿಳರು ಇಲ್ಲಿ ಬಂದು ನೆಲೆಸಿ ಕಡಿಮೆ ಕೂಲಿಗೆ ಕೆಲಸ ಮಾಡುತ್ತ ನಮ್ಮ ಅನ್ನವನ್ನೇ ಕಸಿದಿದ್ದಾರೆಂದು ನಾವು ದೂರುವಂತಿಲ್ಲ. ನಮ್ಮವರೂ ಬೇರೆ ಕಡೆ ಹೋಗಿದ್ದಾರೆ. ಇದೆಲ್ಲಕ್ಕಿಂತ ಬಹಳ ಮುಖ್ಯವಾದ ಸಂಗತಿ ಯಾವುದೆಂದರೆ 80ರ ದಶಕದವರೆಗೂ ನಮ್ಮ ಚಿತ್ರರಂಗ ಮದ್ರಾಸಿನಲ್ಲಿ ನೆಲೆಸಿತ್ತು. ನಮ್ಮೆಲ್ಲಾ ಮಹಾನ್ ನಟರ ಮನೆಗಳೂ ಅಲ್ಲಿದ್ದವು. ಅವರ ಆಸ್ತಿಗಳು ಈಗಲೂ ಅಲ್ಲೇ ಇವೆ. ತಮಿಳರಿಗೆ ಮತ್ತು ನಮಗೆ ಅದೆಷ್ಟು ಕೊಡುಕೊಳ್ಳುವಿಕೆಯ ಸಂಬಂಧವಿತ್ತೆಂದರೆ, ಅಲ್ಲಿ ಅಮ್ಮನಾಗಿ ಇಲ್ಲಿ ನಮಗೆ ಮಾರಿಯಾಗಿರುವ ಜಯಲಲಿತ ಕೂಡ ನಮ್ಮ ಕೊಡುಗೆ.

ಆಕೆ ಒಂದು ಕಾಲದಲ್ಲಿ ಗ್ರೂಪ್ ಡ್ಯಾನ್ಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಲಾವಿದೆ. ಅಂತವಳನ್ನು ನಾಯಕಿಯಾಗಿ ಮಾಡಿದ್ದು ಕೂಡ ಕನ್ನಡ ಚಿತ್ರರಂಗ. 1972ರಲ್ಲಿ ಈಕೆ ದಸರಾ ಕಾರ್ಯಕ್ರಮಕ್ಕೆ ಡ್ಯಾನ್ಸ್ ಮಾಡಲು ಬಂದಿದ್ದಳು. ಈಕೆ ಎಷ್ಟೇ ಹಾರಾಡಿದರೂ ನಂಬಿರುವುದು ಚಾಮುಂಡೇಶ್ವರಿಯನ್ನ. ಆದರೂ ಈ ಹೆಣ್ಣಿನ ಸೇಡು ನಿಗೂಢವಾದದ್ದು. ಈ ಮಾತಿಗಿಂತ ತನ್ನನ್ನು ಮುಖ್ಯಮಂತ್ರಿ ಮಾಡಿದ ಜನರಿಗೆ ಅನ್ನ ನೀರು ಕೊಡುವುದು ಆಕೆಯ ಅತಿ ಕಾಳಜಿಯಾಗಿರಬಹುದು ಅಥವಾ ಈ ಕನ್ನಡತಿಗೆ ತಮಿಳು ನಿಷ್ಠೆಯ ರೋಗ ಬಡಿದಿರಬಹುದು.

ಈಕೆಯ ಅವಧಿಗಿಂತಲೂ ಹಿಂದೆ ಹೋಗಿ ನೋಡಿದರೆ ತಮಿಳು ಮತ್ತು ಕನ್ನಡದ ಬಾಂಧವ್ಯದ ಇತಿಹಾಸ ಬಹಳ ಮಧುರವಾಗಿ ನಡೆದುಬಂದಿರುವುದು ಗೊತ್ತಾಗುತ್ತದೆ. ಚಕ್ರವರ್ತಿ ರಾಜಗೋಪಾಲಚಾರಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, ನಮ್ಮ ಕನ್ನಡ ಸಾಹಿತ್ಯ ಸಮ್ಮೇಳನ ಮದ್ರಾಸಿನಲ್ಲಿ ಜರುಗಿತ್ತು. ಅಂದು ಅಧ್ಯಕ್ಷರಾಗಿದ್ದವರು ಟಿ.ಪಿ. ಕೈಲಾಸಂ. ತಮಿಳು ಜನ ಅತ್ತ ಸುಳಿದಿದ್ದರೊ ಇಲ್ಲವೊ, ಅಂತೂ ಮದ್ರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನವನ್ನ ಅಲ್ಲಿನ ಮುಖ್ಯಮಂತ್ರಿ ಉದ್ಘಾಟಿಸಿದರೆ, ತಮಿಳು ಕುಲದವರಾಗಿದ್ದು ಕನ್ನಡ ರಂಗಭೂಮಿಯನ್ನ ಶ್ರೀಮಂತಗೊಳಿಸಿದ ಟಿ.ಪಿ. ಕೈಲಾಸಂ ಸಮ್ಮೇಳನಾಧ್ಯಕ್ಷರಾಗಿದ್ದರು. ಇಲ್ಲಿಯವರೆಗೆ ಸಮ್ಮೇಳನಾಧ್ಯಕ್ಷರು ಮಾಡಿದ ಭಾಷಣಕ್ಕಿಂತ ಚಿಕ್ಕ ಭಾಷಣ ಮಾಡಿದ್ದು ಇತಿಹಾಸದಲ್ಲಿ ದಾಖಲಾಗಿದೆ.

ಬೆಂಗಳೂರಿನ ಭೂಗತಲೋಕ ಹಚ್ಚಿದ ಬೆಂಕಿಯಿಂದ ಕರಕಲಾದ ವಾಹನಗಳನ್ನು ನೋಡುತ್ತಿದ್ದರೆ, ಮುಂದೆ ಅಂತಹ ಭಾಷಾ ಸಾಮರಸ್ಯ ಸಾಧ್ಯವೇ ಇಲ್ಲ ಅನ್ನಿಸಿತು. ಭಾಷಾಂಧತೆಯಲ್ಲಿ ತಮಿಳರನ್ನು ಮೀರಿಸುವವರಿಲ್ಲ. ಅದಕ್ಕೆ ಕಾರಣ ಬಿ.ಜಿ.ಎಲ್ ಸ್ವಾಮಿಯವರು ಹೇಳಿರುವಂತೆ, ಅವರ ಅಕ್ಷರ ಮಾಲೆ ಕಾರಣ. ಅತಿ ಕಡಿಮೆ ಅಕ್ಷರ ಮಾಲೆಯ ಕಾರಣಕ್ಕೆ ಅವರು ಬೇರೆ ಭಾಷೆ ಕಲಿಯುವುದು ಕಷ್ಟವಾಗಿದೆ. ಕಲಿತರೂ ತಮಿಳು ವರಸೆ ಮೀರಲಾಗುವುದಿಲ್ಲ. ತಮಿಳು ಮಾತನಾಡಿದ ಕೂಡಲೇ ಈತ ನಮ್ಮವನೆಂದು ಪರಿಗಣಿಸುವ ಭಾಷಾ ಬಾಂಧವ್ಯ ಅವರಲ್ಲಿದೆ. ಅದಕ್ಕೆ ಕನ್ನಡ ಚಿತ್ರರಂಗದಲ್ಲಿ ಅವಕಾಶ ವಂಚಿತರೆಲ್ಲಾ ತಮಿಳಲ್ಲಿ ನಾಯಕರಾಗಿರುವುದು. ಅವರ ಒಡನಾಟವಿದ್ದರೆ ನಾವು ತಮಿಳು ಕಲಿತುಬಿಡುತ್ತೇವೆಯೇ ಹೊರತು ನಮ್ಮ ಭಾಷೆಯನ್ನ ಅವರು ಕಲಿಯದೇ ನಿಭಾಯಿಸುತ್ತಾರೆ.


ಬೆಂಗಳೂರಿಗೆ ಬೆಂಕಿ ಹಚ್ಚಿದ ಭೂಗತ ಲೋಕದ ಪಾತಕಿಗಳು ತಿಳಿದುಕೊಳ್ಳಬೇಕಾದುದೇನೆಂದರೆ ಪೌರುಷದ ವಿಷಯದಲ್ಲಿ ತಮಿಳರೊಂದಿಗೆ ಸ್ಪರ್ಧೆ ಮಾಡಲಾಗುವುದಿಲ್ಲ. ಜಗತ್ತಿನ ಮೊಟ್ಟ ಮೊದಲ ಮಾನವ ಬಾಂಬು ತಯಾರಿಸಿ ನಮ್ಮ ಮಾಜಿ ಪ್ರಧಾನಿ ಕೊಂದ ಇತಿಹಾಸ ಅವರಿಗಿದೆ. ತಮ್ಮ ಆಕ್ರಮಿತ ಪ್ರದೇಶಕ್ಕಾಗಿ ಸಾಯುವುದರಲ್ಲಿ ಅವರು ನಿಸ್ಸೀಮರು. ಬಾಯಲ್ಲಿ ಸೈಯನೈಡ್ ಇಟ್ಟುಕೊಂಡು ಹೋರಾಡುವ ಜನ ಅವರು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕನ್ನಡಿಗರೊಂದಿಗೆ ಬೆರೆತು ತಮ್ಮ ತಮಿಳು ಕುಲ ಭಾಷೆ ಕಾಪಾಡಿಕೊಂಡೇ ಬದುಕುತ್ತಿದ್ದಾರೆ.

ಕಾವೇರಿ ವಿಷಯದಲ್ಲಿ ನಮ್ಮ ನೆಲದ ರೈತ ಎಂದೂ ವಾಹನಗಳನ್ನು ಸುಟ್ಟ ಇತಿಹಾಸವಿಲ್ಲ. ಭೂಮಿ ನಚ್ಚಿ ಬದುಕುವ ಜನ ಯಾವತ್ತಿಗೂ ಒಳ್ಳೆಯವರಾಗಿರುತ್ತಾರೆ. ಸರಕು ತುಂಬಿದ ಲಾರಿ ನೋಡಿದರೆ ಅದರೊಳಗೆ ಏನಿದೆಯೋ ಏನೋ ಎಂದು ಆಲೋಚಿಸುತ್ತಾರೆ. ಬೆಂಗಳೂರಿನ ಗಲ್ಲಿಗಲ್ಲಿಗೆ ನುಗ್ಗಿ 12 ಮತ್ತು 14 ಟೈರುಗಳನ್ನು ಹೊಂದಿದ ಲಾರಿಗೆ ಬೆಂಕಿ ಹಚ್ಚುವ ಜನ ಯಾವ ಕಾರಣಕ್ಕೂ ಕಾವೇರಿ ಹೋರಾಟದ ಜನರಲ್ಲ ಎಂಬುದು ಸಾಬೀತಾಗಿದೆ.

ಮೊದಲಿಂದಲೂ ಅಷ್ಟೆ, ಶಾಂತಿ ಸಮಿತಿಯ ಸದಸ್ಯರೇ ಬೇರೆ, ಕೋಮು ಗಲಭೆಯ ಲೀಡರುಗಳೇ ಬೇರೆ. ಹಾಗೇ ಕಾವೇರಿ ವಿಷಯದಲ್ಲೂ ನೀರಿನ ಬೇಡಿಕೆ ಇಟ್ಟ ರೈತರೇ ಬೇರೆ, ಸಿಟಿಯೊಳಗೆ ದಾಂಧಲೆ ಮಾಡಿ ಬೆಂಕಿ ಹಚ್ಚುವ ನೀಚರೇ ಬೇರೆ. ಲಾರಿ, ಬಸ್ಸು, ಕಾರುಗಳು ಸಂಬಂಧಪಟ್ಟ ಮಾಲೀಕರವಲ್ಲ; ಈ ನಾಡಿನ ಸಂಪತ್ತು ಎಂಬ ಅರಿವು ಬೆಂಕಿ ಹಚ್ಚಿದ ಜನರಿಗೆ ಎಂದೂ ಬರುವುದಿಲ್ಲ.

ಕರ್ನಾಟಕದಲ್ಲಿ ಈಗ ಆಗಿಹೋದ ಅನಾಹುತ ಗಮನಿಸಿದರೆ ಟಿ.ವಿ. ಚಾನಲ್‌ನವರು ಮತ್ತು ಗಲಭೆಗೆ ನುಸುಳಿದ ಭೂಗತ ಪಾತಕಿಗಳು ಒಂದೇ ತರ ವರ್ತಿಸಿದ್ದಾರೆ. ಟಿ.ವಿಯವರು ಎರಚಿದ ಸೀಮೆಎಣ್ಣೆಗೆ ಪಾತಕಿಗಳು ಬೆಂಕಿ ಹಚ್ಚಿದ್ದಾರೆ ಅಷ್ಟೆ. ದುರಂತವೆಂದರೆ, ಇವರಿಬ್ಬರಿಗೂ ಜ್ಞಾನೋದಯ ಕಷ್ಟ. ಏಕೆಂದರೆ ಅದವರ ಹಸಿವು. ಇದೇ ಈಗ ಕನ್ನಡಿಗರ ಮುಂದಿರುವ ಅಪಾಯಗಳು!

■ ಬಿ. ಚಂದ್ರೇಗೌಡ



ರಾಯಣ್ಣ ಬ್ರಿಗೇಡಿಗೂ, ಬಿಜೆಪಿಗೂ ಸಂಬಂಧ ಇಲ್ಲವಂತೆ!

ಥೂತ್ತೇರಿ

— ಯಾಹೂ

ಕಾವೇರಿ ವಿಷಯದಲ್ಲಿ ಇಬ್ಬರು ವಯೋವೃದ್ಧರ ನಡವಳಿಕೆ ತುಂಬ ಹಾಸ್ಯಾಸ್ಪದವಾಗಿದೆಯಲ್ಲಾ. ಮಂಡ್ಯದ ಮಾದೇಗೌಡರು ಕೂಡ ನೀರಾವರಿ ಮನುಷ್ಯ. ಅವರು ನೀರಾವರಿ ಸಚಿವರಾಗಿದ್ದಾಗ ನೀರು ಬಿಡದ ಇಂಜಿನಿಯರ್ ಕಪಾಳಕ್ಕೆ ಬಾರಿಸಿದ್ದರು. ಹೆದರಿದ ಆ ಭ್ರಷ್ಟ ಅಧಿಕಾರಿ "ನಾನು ದಲಿತ" ಎಂದು ಎಗರಾಡಿದಾಗ "ದಲಿತ್ನೊ ಬಲಿತ್ನೊ ನನಗೇನು ಗೊತ್ತಲೆ. ಬೆಳೆ ಒಣಗತಾಯಿರದು ಕಣ್ಣಿಗೆ ಕಾಣದಿಲವೆ. ಮದ್ಲು ನೀರು ಬುಡು. ಅಮ್ಯಾಲದ್ಯಂತ ಕೇಸು ಮಾಡ್ತಿಯೋ ಮಾಡು" ಎಂದಿದ್ದರು. ಆದರೀಗ ಅದೇ ಮಾದೇಗೌಡರು ಕಾವೇರಿ ವಿಷಯದಲ್ಲಿ "ಎಲ್ಲರೂ ಕೈಗೆ ಗನ್ ತೆಗೆದುಕೊಳ್ಳಿ" ಎಂದು ಬಿಟ್ಟಿದ್ದಾರೆ. ಆ ಗನ್ನಿನಿಂದ ಯಾರನ್ನು ಉಡಾಯಿಸಬೇಕೆಂದು ಮಾತ್ರ ಹೇಳಿಲ್ಲ. ಗನ್ನಿನ ವಿಶೇಷವೆಂದರೆ ಉಡಾಯಿಸುವವನ ಮನಸ್ಸನ್ನು ಅದೇ ಪ್ರಚೋದಿಸುತ್ತದೆ. ತಮಿಳರ ಬದಲಿಗೆ ಮಂಡ್ಯದ ಹಾದಿಹೋಕರೇ ಬಲಿಯಾಗಬಹುದು.

ಇನ್ನು ನಮ್ಮ ದಕ್ಷಿಣ ಕನ್ನಡದ ಪೂಜಾರಿಯ ತಲೆ ಸಂಪೂರ್ಣ ಕೆಟ್ಟುಹೋಗಿರುವ ಸುದ್ದಿ ಬಂದಿದೆಯಲ್ಲಾ. 'ಅಪರಾಧಿಯ ಆತ್ಮಹತ್ಯೆ' ಎಂಬ ನರಸಿಂಹಯ್ಯನ ಕಾದಂಬರಿಯ ನಾಯಕನಂತೆ ಗಣಪತಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಸರ್ಕಾರಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ ಬಗ್ಗೆ ಕೆರಳಿದ ಪೂಜಾರಿ "ಇದರಿಂದ ಕಾಂಗ್ರೆಸ್ ಸರ್ವನಾಶವಾಗಲಿದೆ" ಎಂದರಂತಲ್ಲಾ, ತನ್ನ ಪ್ರಾಂತ್ಯದಲ್ಲಿ ಕಾಂಗ್ರೆಸ್ ನಾಶ ಮಾಡಿಕೊಂಡು ಕಾವೇರಿ ತೀರ್ಪಿಗಾಗಿ ಉರುಳುಸೇವೆ ಮಾಡುತ್ತಿರುವ ಪೂಜಾರಿ ನಡವಳಿಕೆ ನೋಡಿದ ಸಿದ್ದರಾಮಯ್ಯ, ನಿಜವಾದ ಪ್ರತಿಕ್ರಿಯೆಯನ್ನೂ ನೀಡದೆ ಚಾಮುಂಡೇಶ್ವರಿಯ ಮಂಗಳಾರತಿ ತಟ್ಟೆಗೆ ಕಾಣಿಕೆ ಇಡುವರಂತಲ್ಲಾ, ಥೂತ್ತೇರಿ!!

****

ನಮ್ಮ ಕನ್ನಡದ ಸೂಪರ್‌ಸ್ಟಾರ್‌ಗಳು ಕಾವೇರಿ ವಿಷಯದಲ್ಲಿ ಬೀದಿಗಿಳಿದು ಪ್ರತಿಭಟಿಸಿದ್ದಕ್ಕೆ ತಮಿಳುನಾಡಿನ ಕೆಲವು ಕೊಂಗರು ಕೇಸು ಜಡಿದಿದ್ದಾರಂತಲ್ಲಾ. ಇವಂತೂ ಜಯಲಲಿತಳ ಕೊಂಗ ಸಂತಾನವೇ ಇರಬಹುದು. ಅವಳೂ ಕೂಡ ಟೀಕೆ ಮಾಡಿದವರ ಮೇಲೆಲ್ಲಾ ಕೇಸು ಜಡಿದು ಸುಪ್ರೀಂಕೋರ್ಟಿನಿಂದ ಉಗಿಸಿಕೊಂಡಿದ್ದ ಗಿರಾಕಿ. ನಮ್ಮ ನಾಡಿನಲ್ಲೂ ರಾಘವೇಶ್ವರನ ಕೂಟವೊಂದು ಮಾನ್ಯ ಶ್ರೀಗಳ ಲೈಂಗಿಕ ವಿಷಯ ಮಾತನಾಡಿದವರ ಮೇಲೆಲ್ಲಾ ಕೇಸಾಕುವ ಪದ್ಧತಿ ಜಾರಿಯಲ್ಲಿದೆ. ಆದ್ದರಿಂದ ನಮ್ಮ ಕೋರ್ಟುಗಳೂ ಕೇಸಾಕುವ ಜನರ ಅನುಕೂಲಕ್ಕೆಂದೇ ಇರುವಂತಿವೆಯಲ್ಲಾ.

ಅದೇನಾದರಾಗಲಿ ನಮ್ಮ ಸೂಪರ್ ಸ್ಟಾರ್‌ಗಳ ವಿಷಯಕ್ಕೆ ಬಂದರೆ, ಶಿವರಾಜ್‌ಕುಮಾರ್‌ರವರು ಕಾವೇರಿ ವಿಷಯದಲ್ಲಿ ಜನಪ್ರತಿನಿಧಿಗಳನ್ನು ಆರಿಸಬೇಕಾದರೆ, ತಾಕತ್ತು ಇರುವವರನ್ನು ಆರಿಸಬೇಕೆಂದಿದ್ದಾರಲ್ಲಾ! ಸದರಿ ನಟನ ತಾಕತ್ತಿನ ವಿಷಯ ಯಾವುದೆಂಬುದು ಚರ್ಚೆಗೊಳಗಾಗಿದೆಯಲ್ಲಾ. ತಾಕತ್ತು ಎಂದರೆ ಕಾವೇರಿ ವಿಷಯದಲ್ಲಿ ಹೋರಾಡುವ ತಾಕತ್ತೇ? ಜನ ಬೆಂಬಲದ ತಾಕತ್ತೇ? ಶ್ರೀಮಂತಿಕೆಯ ತಾಕತ್ತೇ? ತೋಳ್ಬಲದ ತಾಕತ್ತೇ? ಇದ್ಯಾವ ತಾಕತ್ತೂ ಕೋರ್ಟಿನ ಎದುರು ನಿಲ್ಲುವುದಿಲ್ಲವಂತಲ್ಲಾ. ರಾಜಕುಮಾರ್ ಮಗ ಎಂಬ ಕಾರಣಕ್ಕೆ ಎಲ್ಲಾ ಸವಲತ್ತುಗಳನ್ನೂ ಅನಾಯಾಸವಾಗಿ ಪಡೆದುಕೊಂಡ ಶಿವರಾಜ್‌ಕುಮಾರ್, ಯಾವ ತಾಕತ್ತೂ ಇಲ್ಲದ ಹೆಂಡತಿಯನ್ನು ಯಡಿಯೂರಪ್ಪನ ಎದುರು ನಿಲ್ಲಿಸಿ, ಹಾದಿಬೀದಿಯಲ್ಲಿ ಕುಣಿದು ಹಾಡೇಳಿದರೂ ಕೂಡ ಗೀತ ಯುದ್ಧ ಎದುರು ಮೂರನೇ ಸ್ಥಾನಕ್ಕೆ ಹೋದಾಗಲೇ ಚುನಾವಣೆಗೆ ತಾಕತ್ತಿರುವವರು ಮಾತ್ರ ನಿಲ್ಲಬೇಕೆಂಬ



ಜ್ಞಾನೋದಯ ಶಿವರಾಜನಿಗಾಗಿರಬಹುದಂತಲ್ಲಾ ಥೂತ್ತೇರಿ!!


****

ನಾಡಿನ ಜನಕ್ಕೆ ಕಾವೇರಿ ಚಿಂತೆಯಾದರೆ ನಮ್ಮ ಈಶ್ವರಪ್ಪನಿಗೆ ರಾಯಣ್ಣ ಬ್ರಿಗೇಡ್ ಚಿಂತೆಯಾಗಿದೆಯಲ್ಲಾ. 'ಅಹಿಂದ'ದಲ್ಲಿ 'ಅ' ತೆಗೆದು ಬರಿ 'ಹಿಂದ' ಮಾಡಿಕೊಂಡು ಹೊರಟಿರುವ ಈಶ್ವರಪ್ಪನವರು ಮುಂದೆ ಯಡಿಯೂರಪ್ಪನನ್ನು ಮುಖ್ಯಮಂತ್ರಿ ಮಾಡೇ ಮಾಡುತ್ತಾರಂತೆ. ಆದರೆ ಯಡಿಯೂರಪ್ಪನ ಬಗ್ಗೆ ಮೂಡಿರುವ ಸಿಟ್ಟು ಇನ್ನೂ ಇದೆಯಂತೆ. ಈ ವೈರುಧ್ಯ ಹೇಳಿಕೆಗಳನ್ನು ಧೈರ್ಯವಾಗಿಯೇ ಬಿತ್ತರಿಸುತ್ತಿರುವ ಈಶ್ವರಪ್ಪನನ್ನು ಕಂಡು ಬಿಜೆಪಿಗಳೇ ನಗುತ್ತಿವೆಯಂತಲ್ಲಾ. ಹಿಂದ ಮುಖಾಂತರ ಜನರನ್ನು ಸಂಘಟಿಸಿ ಈತ ಮಾಡಹೊರಟಿರುವುದು ಈಗಾಗಲೇ ಹಳೆ ಸುದ್ದಿಯಾಗಿರುವ ಮೇಲುಜಾತಿ ಯಡ್ಡಿಯನ್ನು. ವಾಸ್ತವವಾಗಿ ಹಿಂದುಳಿದವರನ್ನು ಸಂಘಟಿಸಿ ಹಿಂದುಳಿದವರನ್ನೇ ಮುಖ್ಯಮಂತ್ರಿ ಮಾಡುತ್ತೇನೆಂದು ಹೇಳಿದರೆ ಯಾರಾದರೂ ನಂಬಬಹುದಿತ್ತು. ಮುಂದುವರಿದ ಈಶ್ವರಪ್ಪ ತಾನು ಕಟ್ಟುವ ರಾಯಣ್ಣ ಬ್ರಿಗೇಡಿಗೂ, ಬಿಜೆಪಿಗೂ ಸಂಬಂಧವಿಲ್ಲವಂತೆ. ಸಂಬಂಧವಿಲ್ಲದ ಸಂಘಟನೆ ಏಕೆ ಎಂದರೆ "ಹೇಳಿದಷ್ಟು ಕೇಳ್ರಿ" ಎನ್ನುತ್ತಾರೆ. ಒಂದೆಡೆ ಹಿಂದ ಸಂಘಟನೆ, ಇನ್ನೊಂದೆಡೆ ರಾಯಣ್ಣ ಬ್ರಿಗೇಡ್, ಜೊತೆಗೆ ಆರೆಸ್ಸೆಸ್ ಮತ್ತು ಬಿಜೆಪಿಯನ್ನು ನಿಭಾಯಿಸ ಹೊರಟಿರುವ ಈಶ್ವರಪ್ಪನನ್ನು, ಕಾವೇರಿ ವಿಷಯವಾಗಿ ತಮಿಳು ಚಾನೆಲ್‌ಗಳೂ ತೋರುತ್ತಿರುವುದರಿಂದ, ಯಡ್ಡಿ ಹಿಂಬಾಲಕರು ಕೆಂಡಮಂಡಲವಾಗಿದ್ದಾರಂತಲ್ಲಾ. "ನಾನೂ ಕೂಡ ಮುಂದಿನ ಮುಖ್ಯಮಂತ್ರಿ ಪದವಿಯಾಕಾಂಕ್ಷಿ. ಕುಮಾರಣ್ಣನ ಬೆಂಬಲವೂ ಇದೆ. ಜೊತೆಗೆ ಹಿಂದ ಸಂಘಟನೆ, ರಾಯಣ್ಣ ಬ್ರಿಗೇಡುಗಳು ನನ್ನ ಬೆನ್ನಿಗಿವೆ" ಎಂದು ಒಬ್ಬರೇ ಇದ್ದಾಗ ಅಬ್ಬರಿಸುವ ಈಶ್ವರಪ್ಪನ ಗೋಸುಂಬೆತನ ಸದ್ಯ ಅನಂತೂಗೂ ಗೊತ್ತಿದೆಯಂತಲ್ಲಾ, ಥೂತ್ತೇರಿ!!!

■

ರಾಯಚೂರು ಬಿಜೆಪಿ ಶಾಸಕರ ಭಾನ್ಗಡಿಗಳು

ತಿಪ್ಪರಾಜನ ಗೂಂಡಾಗಿರಿ, ಶಿವನಗೌಡನ ಮೌಢ್ಯಾವತಾರ



ಹಿಂದುಳಿದ ಜಿಲ್ಲೆಯೆಂಬ ಹಣೆಪಟ್ಟಿ ಅಳಿಸಿ, ಅಭಿವೃದ್ಧಿ ಮಾಡುತ್ತೇವೆಂದು ಆಶ್ವಾಸನೆ ನೀಡಿ ಗೆದ್ದುಬಂದ ರಾಯಚೂರು ಜಿಲ್ಲೆಯ ಬಹುತೇಕ ಬಿಜೆಪಿ ಎಂಎಲ್ಎಗಳು ಜನಕಂಟಕರಾಗಿದ್ದಾರೆ. ಅವರ ನಂಬುಗೆಯ ಕಾರ್ಯಕರ್ತರು ಮತ್ತು ಒಂದಷ್ಟು ಚೇಲಾಗಳು ಉದ್ಧಾರ ಆದದ್ದು ಬಿಟ್ಟರೆ ಜಿಲ್ಲೆಗೆ ಇವರಿಂದ ನಯಾಪೈಸೆ ಲಾಭವಾಗುತ್ತಿಲ್ಲ. ದುರಂತವೆಂದರೆ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ 5 ಮೀಸಲು ಕ್ಷೇತ್ರಗಳಾಗಿದ್ದರೂ ಇಲ್ಲಿನ ದಲಿತ-ದಮನಿತರ ಬದುಕು ಮಾತ್ರ ಹಸನಾಗಿಲ್ಲ. ಬದಲಿಗೆ ದಲಿತ ಅಸ್ಮಿತೆಯಂತಿರುವ ಅಂಬೇಡ್ಕರ್‌ರ ಪ್ರತಿಮೆಗಳಿಗೆ ನಿತ್ಯವೂ ಅವಮಾನ ಮಾಡಲಾಗುತ್ತಿದೆ. ಇದಕ್ಕೆಲ್ಲ ಬಿಜೆಪಿ ಎಂಎಲ್ಎಗಳ ಕುಮ್ಮಕ್ಕಿದೆ ಅನ್ನೋ ಆರೋಪ ದಲಿತ ಸಂಘಟನೆಗಳಿಂದಲೇ ಕೇಳಿಬರುತ್ತಿದೆ.

ಹವಾಲ್ದಾರನ ಮಿತಿಮೀರಿದ ದರ್ಪ

ರಾಯಚೂರು ಗ್ರಾಮಾಂತರ ಕ್ಷೇತ್ರದ ಎಂಎಲ್ಎ ತಿಪ್ಪರಾಜು ಹವಾಲ್ದಾರ ರಾಜಕೀಯವಾಗಿ ಬೆಳೆದುಬಂದ ರೀತಿಯೇ ಅಚ್ಚರಿ ಹುಟ್ಟಿಸುವಂತದ್ದು. ಮಕ್ಕಳಿಗೆ ಪಾಠ ಹೇಳುವ ಶಿಕ್ಷಕ ವೃತ್ತಿಯ ತಿಪ್ಪರಾಜು ಮೇಷ್ಟ್ರ ಕೆಲಸಕ್ಕಿಂತ ಜಾತಿಬಲದ ನೆರಳಲ್ಲಿ ಬಿಜೆಪಿಯ ಶಿವನಗೌಡ ನಾಯಕನ ಚೇಲಾಗಾರಿಕೆ ಮಾಡಿದ್ದೇ ಹೆಚ್ಚು. ಶಿವನಗೌಡನ ಆಪ್ತ ಸಹಾಯಕನಾಗಿ ಸೇರಿಕೊಂಡ ತಿಪ್ಪರಾಜು ನಿಧಾನಕ್ಕೆ ರಾಜಕಾರಣದ ಗತ್ತುಗಳನ್ನು ಕಲಿತುಕೊಂಡ. ಶಿವನಗೌಡ ನಾಯಕ ಗ್ರಂಥಾಲಯ ಸಚಿವನಾಗಿದ್ದಾಗ ಒಂದಷ್ಟು ಕಾಸು ಮಾಡಿಕೊಂಡ ತಿಪ್ಪರಾಜು ತಾನೇ ಎಂಎಲ್ಎ ಆಗುವಷ್ಟು ದುಂಡಗಾದದ್ದು ಈಗ ಇತಿಹಾಸ. ಕಳೆದ ಎಲೆಕ್ಷನ್‌ನಲ್ಲಿ ಶಿವನಗೌಡ ನಾಯಕ ರಾಯಚೂರು ಗ್ರಾಮಾಂತರ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದ. ಆದರೆ ಸಾಲು ಸೋಲುಗಳಿಂದ ಕಂಗೆಟ್ಟ ಆತ ಅನಿವಾರ್ಯವಾಗಿ ಸ್ವಕ್ಷೇತ್ರ ದೇವದುರ್ಗಕ್ಕೆ ತೆರಳಬೇಕಾಯ್ತು. ಅದು ತಿಪ್ಪರಾಜನ ಅದೃಷ್ಟದ ಬಾಗಿಲು ತೆರೆಯಿತು. ರಾಯಚೂರು ಗ್ರಾಮಾಂತರ ಟಿಕೆಟ್ ಗಿಟ್ಟಿಸಿಕೊಂಡ ತಿಪ್ಪರಾಜು ಬಿಜೆಪಿ ಎಂಎಲ್ಎ ಆಗಿ ಠಳಾಯಿಸಿದ್ದಾನೆ. ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರವಾದ ಇಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ರಾಯಪ್ಪ ನಾಯಕ್ ಮತ್ತು ಜೆಡಿಎಸ್‌ನಿಂದ ಅಮರೇಶ್ವರ ನಾಯಕ್ ಎಂಬ ಅಣ್ಣತಮ್ಮಂದಿರು ಸ್ಪರ್ಧಿಸಿದ್ದರು. ಈ ದಾಯಾದಿ ಕಲಹದ ನಡುವೆ ಮತಗಳು ಡಿವೈಡ್ ಆದ ಪರಿಣಾಮವಾಗಿ ತಿಪ್ಪರಾಜನಿಗೆ ಗೆಲುವಿನ ಹಾದಿ ಸುಗಮವಾಗಿತ್ತು. ಹೀಗೆ ಅದೃಷ್ಟವಶಾತ್ ಗೆದ್ದುಬಂದಿರುವ ತಾನು ಮತ್ತೆ ಗೆಲ್ಲುತ್ತೇನೋ ಇಲ್ಲವೋ ಎಂಬ ಭರವಸೆಯಿಲ್ಲದ ಈಗ ಸಾಕಷ್ಟು ದುಡ್ಡು ಮಾಡಿಕೊಳ್ಳಲು ಮುಂದಾಗಿದ್ದಾನೆ.

ತಿಪ್ಪರಾಜು ಥೇಟ್ ತನ್ನ ರಾಜಕೀಯ ಗಾರುಡಿ ಶಿವನಗೌಡನ ತರಹದ ಆಕ್ರಮಣಕಾರಿ ದಬ್ಬಾಳಿಕೆಯ ಗುಣದವ. ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಈತನ ಅಧಿಕಾರದಾಹ ನೋಡಿ ಆತನ ಬೆಂಬಲಿಗ ಕಾರ್ಯಕರ್ತರೇ ಬೆಚ್ಚಿಬಿದ್ದಿದ್ದರು. ಯಾವುದೇ ರಾಜಕೀಯ ಅನುಭವವಿಲ್ಲದ ತನ್ನ ಹೆಂಡತಿಯನ್ನು ಕುರ್ಡಿ ಜಿಲ್ಲಾ ಪಂಚಾಯತಿ ಕ್ಷೇತ್ರದಿಂದ ನಿಲ್ಲಿಸಿ ಗೆಲ್ಲಿಸಿಕೊಂಡಿದ್ದಾನೆ.


ಎಂಜಿನಿಯರ್ ಮೇಲೆ ಹಲ್ಲೆ

ತಿಪ್ಪರಾಜುನ ದರ್ಪ ಅದೆಷ್ಟು ಹದ್ದುಮೀರಿ ಹೋಗಿದೆ ಎನ್ನುವುದಕ್ಕೆ ಮೊನ್ನೆ ನಡೆದ ಘಟನೆಯೇ ಸಾಕ್ಷಿ. ಈತನ ಬೆಂಬಲಿಗರು ಮೇನ್ಸ್‌ಗಳಿಗೆ ತಂತಿ ಸುತ್ತಿ ವಿದ್ಯುತ್ ಕಳ್ಳತನ ಮಾಡುತ್ತಿದ್ದರು. ಇದರ ಜಾಡು ಹಿಡಿದ ಜೆಸ್ಕಾಂ ಎಂಜಿನಿಯರ್ ಜಾವೇದ್ ಎಂಬಾತ ಅಂತಹ ಅಕ್ರಮ ಕನೆಕ್ಷನ್‌ಗಳನ್ನೆಲ್ಲ ಕತ್ತರಿಸಿ ಬಿಸಾಕಿದ್ದ. ಮೊನ್ನೆ ಚಂದ್ರಬುಂಡಾ ಎನ್ನುವ ಗ್ರಾಮದಲ್ಲೂ ಇಂತಹ ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಜಾವೇದ್ ಮತ್ತವರ ಸಹಾಯಕರು ಪತ್ತೆ ಹಚ್ಚಿ ಕಡಿತಗೊಳಿಸುವ ಕಾಯಕದಲ್ಲಿದ್ದರು. ಅದರಲ್ಲಿ ತಿಪ್ಪರಾಜು ಬೆಂಬಲಿಗರ ಅಕ್ರಮ ಸಂಪರ್ಕಗಳೇ ಹೆಚ್ಚಾಗಿದ್ದವು. ಅವರೆಲ್ಲ 'ನಾವು ಎಂಎಲ್ಎ ತಿಪ್ಪರಾಜು ಕಡೆಯವರು' ಎಂದು ಧಮಕಿ ಹಾಕಿದ್ದಲ್ಲದೆ ಜೆಸ್ಕಾಂ ಅಧಿಕಾರಿಗಳಿಗೆ ಕೆಲಸ ನಿಲ್ಲಿಸುವಂತೆ ಒತ್ತಡ ತಂದಿದ್ದರು. ಆದರೆ ಜೆಸ್ಕಾಂ ಸಿಬ್ಬಂದಿ ಅದಕ್ಕೆ ಕ್ಯಾರೇ ಅನ್ನಲಿಲ್ಲ. ಫೋನ್‌ನಲ್ಲೇ ಸಂಗತಿಯನ್ನು ಕೇಳಿಸಿಕೊಂಡ ತಿಪ್ಪರಾಜು, ಅದೇನೋ ಭಾರೀ ಜನಕಲ್ಯಾಣವೇ ನಿಂತುಹೋಗುತ್ತಿದೆಯೇನೋ ಎಂಬ ಧಾವಂತದಲ್ಲಿ ಸ್ಥಳಕ್ಕಾಗಮಿಸಿದ್ದ. ಹಾಗೆ ಬಂದವನು ಜೆಸ್ಕಾಂ ಅಧಿಕಾರಿಗಳಿಗೆ ಬಾಯಿಗೆ ಬಂದಂಗೆ ಬೈದಿದ್ದಲ್ಲದೇ ಅದನ್ನು ವಿರೋಧಿಸಿದ ಇಂಜಿನಿಯರ್ ಜಾವೇದ್ ಮೇಲೆ ಹಲ್ಲೆ ಕೂಡಾ ಮಾಡಿದ್ದ. ತಡೆಯಲು ಬಂದ ಇತರ ಸಹಾಯಕರಿಗೂ ಏಟುಗಳು ಬಿದ್ದಿದ್ದವು. ತನ್ನ ಪಾಲಿನ ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಅಧಿಕಾರಿ ಮೇಲೆಯೇ ಹಲ್ಲೆ ಮಾಡುತ್ತಾನೆಂದರೆ ಇವನ ದರ್ಪ ಅದಿನ್ನೆಂತದ್ದಿರಬೇಡ.

ಜೆಸ್ಕಾಂ ಅಧಿಕಾರಿಗಳು ಶಾಸಕನ ದುರ್ವರ್ತನೆ ವಿರುದ್ಧ



ಜೆಸ್ಕಾಂ ಅಧಿಕಾರಿಗಳ ಪ್ರತಿಭಟನೆ



ಯಾಪಲದಿನ್ನಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿ[...] ತಿಪ್ಪರಾಜು ಮತ್ತು ಅವನ ಬೆಂಬಲಿಗರು ಸೇರಿ ಒಟ್ಟು[...] ಜನರ ವಿರುದ್ಧ ಐಪಿಸಿ ಸೆಕ್ಷನ್ 143, 147, [...] ಹಾಗೂ 149 ರಡಿ ಪ್ರಕರಣ ದಾಖಲಾಗಿದೆ. ಈ ಕು[...] ತಿಪ್ಪರಾಜುಗೆ ಪೊಲೀಸರು ಕಳುಹಿಸಿದ ನೋಟಿಸ್[...] ಆತ ಕ್ಯಾರೇ ಅಂದಿಲ್ಲ. 'ಈ ಕೂಡಲೇ ಶಾಸಕ ತಿಪ್ಪರಾಜು[...] ದುರ್ವರ್ತನೆಗಳಿಗೆ ಕಡಿವಾಣ ಹಾಕಿ' ಅಂತ ಜೆ[...] ಅಧಿಕಾರಿಗಳು ರಾಯಚೂರಿನಲ್ಲಿ ಪ್ರತಿಭಟನೆ [...] ಜಿಲ್ಲಾಧಿಕಾರಿಗಳಿಗೆ ಮನವಿಯನ್ನೂ ಸಲ್ಲಿಸಿದ್ದಾರೆ. ಸ[...] ಅಧಿಕಾರಿಗಳಿಗೇ ಈ ಪರಿ ಗೋಳು ಹೊಯ್ದುಕೊ[...]ತ್ತಾನೆಂದರೆ ಇನ್ನು ಸಾಮಾನ್ಯ ಜನರ ಪಾಡೇನು?

ಆಶ್ರಯ ಸ್ಕೀಮಿನಲ್ಲಿ ಕಿಕ್‌ಬ್ಯಾಕ್

ಉತ್ತರ ಕರ್ನಾಟಕವನ್ನು ಅದರಲ್ಲೂ ರಾಯಚೂ[...] ಜಿಲ್ಲೆಯನ್ನು 2009ರ ನೆರೆಪ್ರವಾಹ ಬಾಧಿಸಿದ್ದು ಓದು[...] ನೆನಪಿರಬಹುದು. ಆಗ ಮನೆ ಕಳೆದುಕೊಂಡವರಿಗೆ [...] ಕಲ್ಪಿಸಲು ಆಶ್ರಯ ಯೋಜನೆಯಡಿ ಸಾಕಷ್ಟು ಮನೆ[...] ಮಂಜೂರಾಗಿದ್ದವು. ಆ ಆಶ್ರಯ ಸ್ಕೀಮಿನಲ್ಲಿ [...] ಬಹುತೇಕ ಜನಪ್ರತಿನಿಧಿಗಳು ಸಖತ್ತಾಗೇ ಕಮಿ[...] ಕಂಡಿದ್ದಾರೆ. ರಾಯಚೂರು ಗ್ರಾಮಾಂತರ ಕ್ಷೇ[...] ಮಂಜೂರಾಗಿದ್ದ ಭರಪೂರ ಮನೆಗಳ ಕಾರಣಕ್ಕಾಗಿ[...] ಈ ಕ್ಷೇತ್ರದಲ್ಲಿ ನಿಲ್ಲಲು ಶಿವನಗೌಡ ಮತ್ತು ತಿಪ್ಪರಾ[...] ನಡುವೆ ಒಮ್ಮೆ ದೊಡ್ಡ ಗಲಾಟೆಯೇ ನಡೆದಿತ್ತು. ನ[...] ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅದೆಲ್ಲ ತಣ್ಣಗಾ[...] ಮನೆ ಕೊಡಿಸುವ ನೆಪದಲ್ಲಿ ಫಲಾನುಭವಿಗಳಿಂದ ನೇರ[...]


ಮೈಸೂರು: ದಸರೆಗೆ ಡಿಸಿಯೇ ಪೂಜಾರಿ, ಕಮೀಷನರೇ ಪುರೋಹಿತ

ಅಕ್ಟೋಬರ್ ತಿಂಗಳೆಂದರೆ ಸಾಂಸ್ಕೃತಿಕ ನಗರಿ ಮೈಸೂರಿಗೆ ವಿಶೇಷ ಕಳೆ ಬಂದುಬಿಡುತ್ತದೆ. ಕಾರಣ ನಿಗೂಢವಾದದ್ದೇನಲ್ಲ. ಎಲ್ಲರಿಗೂ ತಿಳಿದಿರುವಂತೆ ವಿಶ್ವವಿಖ್ಯಾತ ದಸರಾ ಮಹೋತ್ಸವವೇ ಅದಕ್ಕೆ ಕಾರಣ. ಅರಮನೆಯ ಆವರಣದಲ್ಲಿ ನಡೆಯುವ ಪ್ರತಿದಿನದ ದಸರಾ ಕಾರ್ಯಕ್ರಮಗಳ ಮೇಲಂತೂ ಜನತೆಗೆ ಎಲ್ಲಿಲ್ಲದ ಆಕರ್ಷಣೆ. ಪೂಜೆ ಪುನಸ್ಕಾರಗಳು, ರಾಜಮನೆತನದವರ ಖಾಸಗಿ ದರ್ಬಾರ್‌ಗಳು, ಬಹುಪರಾಕ್‌ಗಳು ಮಳೇ ನಿಂತರೂ ಮರದ ಹನಿ ನಿಲ್ಲಲಿಲ್ಲ ಎಂಬಂತೆ ನಡೆಯುತ್ತಿರುತ್ತವೆ. ಜನತೆಯೂ ಕುತೂಹಲದ ಕಾರಣಕ್ಕಲ್ಲದಿದ್ದರೂ, ನಾವು ನೋಡಿದೆವು ಅಂತ ಹೇಳಿಕೊಳ್ಳುವ ಸಲುವಾಗಿಯಾದರೂ ಇಂತವುಗಳನ್ನು ನೋಡುತ್ತಿರುತ್ತಾರೆ.

ಮೈಸೂರಿನ ಪಾಲಿಗೆ ದಸರಾ ಅನ್ನೋದೆ ರಾಜ ಪರಂಪರೆಯ ಪಳೆಯುಳಿಕೆ. ಆದರೆ ಈಗ ಕಾಲ ಬದಲಾಗಿದೆ. ರಾಜ ಮಹಾರಾಜರಿಗೆ ಪರಾಕ್ ಹಾಕುವ ಆಲೋಚನೆಗಳಿಂದ ಜನ ದೂರ ಬಂದಿದ್ದಾರೆ. ಪಕ್ಕದ ಮನೆಯಲ್ಲಿ ನಡೆಯುವ ಘಟನೆಗಳ ಬಗ್ಗೆ ಯಾವ ಕುತೂಹಲವಿರುತ್ತದೆಯೋ ರಾಜಮನೆತನದಲ್ಲಿ ನಡೆಯುವ ಘಟನಾವಳಿಗಳ ಬಗ್ಗೆಯೂ ಅಂತದೆ ಮನುಷ್ಯ ಸಹಜ ಕುತೂಹಲದಿಂದ ದಸರಾ ಕಾರ್ಯಕ್ರಮ ನೋಡಲು ಜಮಾಯಿಸುತ್ತಾರೆ. ಅಲ್ಲದೇ ಮೈಸೂರು ದಸರಾಗೆ 'ವಿಶ್ವವಿಖ್ಯಾತ' ಅನ್ನೋ ಟ್ಯಾಗ್‌ಲೈನ್ ಅಂಟಿಸಿರುವುದು ಕೂಡಾ ಜನರನ್ನು ಇತ್ತ ಎಳೆದುತರುವಲ್ಲಿ ಯಶಸ್ವಿಯಾಗಿದೆ ಅನ್ನಬಹುದು. ಆದರೆ ವಿಪರ್ಯಾಸದ ಸಂಗತಿಯೆಂದರೆ ಆ ದಸರೆಯ ನೆಪದಲ್ಲಿ ಇವತ್ತಿನ ವಿದ್ಯಾವಂತ ಜವಾಬ್ದಾರಿಯುತ ಜನಸಮೂಹವೂ ಮೌಢ್ಯಗಳನ್ನು ಮುಂದುವರಿಸಿಕೊಂಡು ಬರುತ್ತಿದೆ. ಈಗ ಚಾಲ್ತಿಯಲ್ಲಿರುವ ಹಲವು ಕುರುಡು ಮೌಢ್ಯ ಆಚರಣೆಗಳು ನಡೆಯುತ್ತಿರುವುದು ಹೆಚ್ಚು ವಿದ್ಯಾವಂತರಿಂದಲೇ ಅನ್ನೋದು ದುರಂತ.

ವಿಶ್ವವಿಖ್ಯಾತ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಮೈಸೂರು ಜಿಲ್ಲಾಡಳಿತದಿಂದ ಪ್ರತಿದಿನವೂ ದಸರಾಗೆ ಸಂಬಂಧಪಟ್ಟಂತೆ ಒಂದಲ್ಲ ಒಂದು ಕಾರ್ಯಕ್ರಮ, ಸಭೆ, ಪತ್ರಿಕಾಗೋಷ್ಠಿ ದಸರಾ ತಯಾರಿ ನಡೆಯುತ್ತಲೇ ಇರುತ್ತವೆ. ಇದರ ಪ್ರಮುಖ ಭಾಗ ಅಂಬಾರಿ, ಫಿರಂಗಿ ಮುಂತಾದವುಗಳನ್ನು ಅರಮನೆ ಮಂಡಳಿಯಿಂದ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಗುತ್ತದೆ. ದಸರಾ ಮಹೋತ್ಸವದ ಪ್ರಮುಖ ಕಾರ್ಯಕ್ರಮ ಜಂಬೂ ಸವಾರಿ ದಿನದಂದು ಜಂಬೂ ಸವಾರಿ ಮೆರವಣಿಗೆ ಹೊರಡುವ ಸಂದರ್ಭದಲ್ಲಿ ಅರಮನೆಯ ಫಿರಂಗಿಗಳಿಂದ 21 ಕುಶಾಲತೋಪು ಸಿಡಿಸಲಾಗುತ್ತದೆ. ನಂತರ ಜಂಬೂ ಸವಾರಿ ಕೊನೆಗೊಳ್ಳುವ ಬನ್ನಿಮಂಟಪದಲ್ಲಿ ನಡೆಯುವ ಪಂಜಿನ ಕವಾಯತು ಸಂದರ್ಭದಲ್ಲೂ ಈ ಫಿರಂಗಿಗಳಿಂದ ಕುಶಾಲತೋಪು ಸಿಡಿಸಲಾಗುತ್ತದೆ. ದಸರಾ ಮಹೋತ್ಸವ ಮುಗಿದ ನಂತರ ಆ ಫಿರಂಗಿಗಳನ್ನು ಮತ್ತೆ ಅರಮನೆ ಮಂಡಳಿಯ ಸುಪರ್ದಿಗೆ ನೀಡಲಾಗುತ್ತದೆ.

ಅಂತಹದೊಂದು ಕಾರ್ಯಕ್ರಮ ಕಳೆದವಾರ ಮೈಸೂರಿನ ಅರಮನೆ ಆವರಣದಲ್ಲಿ ನಡೆದಿತ್ತು. ಅದು ಅರಮನೆಯ ಫಿರಂಗಿ ಬಂಡಿಗಳನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸುವ ಕಾರ್ಯಕ್ರಮ. ಇದರೊಂದಿಗೆ ಅರಮನೆ ಮಂಡಳಿ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜಿಸುವ ಕಾರ್ಯಕ್ರಮವೂ ಇತ್ತು. ಈ ಎರಡೂ ಕಾರ್ಯಕ್ರಮ ಒಟ್ಟಿಗೆ ನಡೆದ ಪರಿಣಾಮ ಈ ಸಮಯದಲ್ಲಿ ಪುರೋಹಿತರು, ಪೊಲೀಸ್ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿಗಳು, ಅರಮನೆ ಮಂಡಳಿ ಸಿಬ್ಬಂದಿ ಸೇರಿದಂತೆ ನೂರಾರು ಜನ ಅಲ್ಲಿ ಸೇರಿದ್ದರು. ಜಿಲ್ಲಾಧಿಕಾರಿ ಡಿ.ರಂದೀಪ್ ಮತ್ತು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಫಿರಂಗಿ



ಹಸ್ತಾಂತರದ ಕಾರ್ಯಕ್ರಮ ಔಪಚಾರಿಕವಾಗಿ ಮುಗಿದಿ[...] ಅಂದರೆ ಯಾರೋ ಪುರೋಹಿತರು ಫಿರಂಗಿಗಳಿ[...] ಸಂಪ್ರದಾಯದಂತೆ ಪೂಜೆ ಸಲ್ಲಿಸಿದ್ದರೆ ಹಿಂದಿನಿಂದ ನಡೆದುಕೊಂಡು ಬಂದಿದ್ದನ್ನು ಮಾಡುತ್ತಿ[...] ಎಂದುಕೊಳ್ಳಬಹುದಿತ್ತು. ಆದರೆ ಅಲ್ಲಿ ಆಗಿದ್ದೆ ಬೇ[...]

ಸ್ವತಃ ಜಿಲ್ಲಾಧಿಕಾರಿ ಡಿ.ರಂದೀಪ್, ನಗರ ಪೊ[...] ಆಯುಕ್ತ ಬಿ.ದಯಾನಂದ್ ಅ[...] ಪೂಜಾರಿಗಳಾಗಿಬಿಟ್ಟಿದ್ದರು!

ಜಿಲ್ಲಾಧಿಕಾರಿ ಡಿ.ರಂದೀಪ್ ಅವರು ಈಡುಗಾ[...] ಒಡೆದರೆ, ನಗರ ಪೊಲೀಸ್ ಆಯುಕ್ತ ಬಿ.ದಯಾನ[...] ಅವರು ತಾನೇನು ಕಮ್ಮಿ ಇಲ್ಲಾ ಎಂಬಂತೆ ಭಾರೀ ಗಾ[...] ಬೂದುಗುಂಬಳ ಕಾಯಿ ಒಡೆದು ದೇವರನ್ನು ಮೆಚ್ಚಿ[...] ಮೆಚ್ಚಿಸಿದ್ದು. ನಂತರ ಜಿಲ್ಲಾಧಿಕಾರಿ ರಂದೀಪ್ ಹಾ[...] ಪೊಲೀಸ್ ಆಯುಕ್ತ ದಯಾನಂದ್ ಇಬ್ಬರೂ [...] ಕರ್ಪೂರ ಹಚ್ಚಿದ್ದ ತಟ್ಟೆ ಹಿಡಿದು ದೇವರಿಗೆ ಮಂಗಳ[...] ಬೆಳಗಿದರು. ಇವರ ಈ ದೇವರ ಸೇವೆ ಅ[...] ಮುಗಿಯಲಿಲ್ಲ. ಅರಮನೆ ಮಂಡಳಿ ಪ್ರತಿಷ್ಠಾಪಿಸಿದ್ದ ಗ[...] ವಿಸರ್ಜನೆ ವೇಳೆ ಗಣಪತಿ ಮೂರ್ತಿ ಇರಿಸಿದ್ದ ಬಂ[...] ನೊಗವನ್ನು ಈ ಇಬ್ಬರು ಅಧಿಕಾರಿಗಳು ಹಿಡಿದು [...] ಹಿಗ್ಗಿದರು.

ರಂದೀಪ್ ಅಥವಾ ದಯಾನಂದ್ ವೈಯಕ್ತಿಕ[...] ಇಲ್ಲವೆ ಖಾಸಗಿಯಾಗಿ ಇಂತಹ ಕಾರ್ಯಗಳನ್ನು ಮಾ[...] ಏನೂ ಅನ್ನಿಸುತ್ತಿರಲಿಲ್ಲ. ಅದು ಅವರ ನಂಬಿಕೆ [...] ಅವರಿಗಿರುವ ಧಾರ್ಮಿಕ ಹಕ್ಕು, [...] ಸುಮ್ಮನಾಗಬಹುದಿತ್ತು. ಆದರೆ ಇವರೀ[...] ಪೂಜಾಕೈಂಕರ್ಯ ನಡೆದದ್ದು ಸರ್ಕಾರದ ಭಾಗ[...] ಜಿಲ್ಲಾಡಳಿತದ ಕಾರ್ಯಕ್ರಮದಲ್ಲಿ. ಹಾಗಾಗಿ [...] ಸಾರ್ವಜನಿಕ ಪ್ರಶ್ನೆಯಾಗಿಹೋಗಿದೆ.

ಅಂಧಾಚರಣೆ, ಮೌಢ್ಯಾಚರಣೆಗಳನ್ನು ತಡೆಯಬೇ[...] ಜಿಲ್ಲಾಧಿಕಾರಿ, ಅಂತಹ ಆಚರಣೆಗಳಿಗೆ ಶಿಕ್ಷೆ ವಿಧಿಸಬೇ[...]

5 ರಿಂದ 10 ಸಾವಿರದಷ್ಟು ಹಣ ವಸೂಲಿ ...ದಲಾಗುತ್ತಿದೆ. ಇದರಲ್ಲಿ ತಿಪ್ಪರಾಜುವಿನದು ಎತ್ತಿದ ...ಹಾವಿಲ್ಲದವರಿಗೆ ಮನೆಯೂ ಇಲ್ಲ!

...ಇಂಥ ತಿಪ್ಪರಾಜು ಪರಮ ಜಾತಿರಾಜಕಾರಣಿ. ತನ್ನ ...ಾತಿಯವರು ಏನೇ ತಪ್ಪು ಮಾಡಿದರೂ ...ಕಾರಣಕ್ಕಾಗಿಯೇ ಅವರು ಜೊತೆ ನಿಲ್ಲುವಂತಹ ಚೋರ ...ಕ್ತಿ ಇವನದು. ಒಮ್ಮೆ ಒಂದು ಹುಡುಗಿಯ ಮೇಲೆ ...್ಯಾಚಾರ ನಡೆದಿದ್ದಾಗಲೂ ಆರೋಪಿಯು ತನ್ನ ...ತಿಯವನೆಂಬ ಕಾರಣಕ್ಕೆ ಅತ್ಯಾಚಾರಿಯ ಪರವಾಗಿ ...ಬಿಟ್ಟಿದ್ದ. ಪೊಲೀಸ್ ಠಾಣೆಯಲ್ಲಿ ಆ ದೂರೇ ...ಲಾಗದಂತೆ ಒತ್ತಡ ತಂದಿದ್ದಲ್ಲದೆ ಸ್ಥಳೀಯ ದಲಿತ ...ಖಂಡರಿಗೆ ಹಣದ ಆಮಿಷವೊಡ್ಡಿ ರಾಜಿ ಮಾಡಿಸಿ ... ಮುಚ್ಚಿಹಾಕಿಸಲು ಹೊಂಚುಹಾಕಿದ್ದ. ಕೊನೆಗೆ ಕೇಸು ...ಲಾದ ಮೇಲೂ ಜಾತ್ಯಸ್ಥ ರೇಪಿಸ್ಟನನ್ನು ಬಚಾವು ...ಡಲು ಬೇಲ್‌ಗಾಗಿ ತನ್ನ ಹಿಂಬಾಲಕರನ್ನೇ ಬಿಟ್ಟಿದ್ದ ... ಶಾಸಕ ಮಹಾಶಯ. ಇಂತವನಿಂದ ದರ್ಪದ, ...ರ್ಜನ್ಯದ ಸ್ಯಾಂಪಲ್‌ಗಳಲ್ಲದೆ ಅಭಿವೃದ್ಧಿಯ ...ಹುಗಳನ್ನು ಕಾಣಲು ಸಾಧ್ಯವೇ.

ದೇವದುರ್ಗದ 'ಮೌಢ್ಯ ಗೌಡ

...ರಾಯಚೂರು ಜಿಲ್ಲೆಯ ಅತಿ ಹಿಂದುಳಿದ ತಾಲ್ಲೂಕು, ...ಾಕ್ಷಿಕತೆಯಲ್ಲಿ ರಾಜ್ಯಕ್ಕೆ ಮೊದಲನೇ ಸ್ಥಾನ ಎಂಬೆಲ್ಲ ...್ಯಾತಿಗೆ ಈಡಾಗಿರುವ ದೇವದುರ್ಗ, ರಾಜ್ಯದಲ್ಲಿಯೇ ...ಹೆಚ್ಚು ಉಪ ಚುನಾವಣೆಗಳನ್ನು ಎದುರಿಸಿದ ಕ್ಷೇತ್ರವೂ ...ದು. ಈ ಕ್ಷೇತ್ರದ ಹಾಲಿ ಶಾಸಕನೇ ಶಿವನಗೌಡ ...ಯಕ. ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ...ಡಳಿ, ಸಮಾಜ ಕಲ್ಯಾಣ ಇಲಾಖೆ, ಲೋಕೋಪಯೋಗಿ ...ಖೆ ಇತ್ಯಾದಿಗಳಿಂದ ದೇವದುರ್ಗಕ್ಕೆ ಬರುವ ಭರಪೂರ ...ದಾನವನ್ನು ತಿಂದು ಮುಕ್ಕಲು ಶಿವನಗೌಡ ನಾಯಕ ...ನೇ ಸಾಕು.

...ಅಧಿಕಾರಕ್ಕಾಗಿ ಏನೆಲ್ಲಾ ಮಾಡುವವರನ್ನು, ಎಂತಹವರ ...ಗೆ ಬೇಕಾದರು ಬೀಳುವವರನ್ನೂ ನೋಡಿದ್ದೇವೆ. ಆದರೆ ... ಕಾಲನ್ನೇ ಕಳೆದುಕೊಳ್ಳುವಂತಹ ಮೌಢ್ಯರ‍್ಯಾರಾದರು ...ರೆ ಅದು ಶಿವನಗೌಡ ನಾಯಕನೇ. ಈತನ ಕಥೆಯೇ ...ೆ. ಒಂದುಕಡೆ ಈತ ರಾಯಚೂರು ಎಂಪಿ ಎಲೆಕ್ಷನ್‌ಗೆ ...ಸಿದ್ದಾಗ ತೆಲುಗು ಚಿತ್ರನಟ ಪವನ್‌ಕಲ್ಯಾಣ್ ಕರೆತಂದು ...ಾರ ಮಾಡಿಸಿದ್ದ. ಇನ್ನೊಂದು ಕಡೆ ಜಿಲ್ಲೆಯ ಬಲಾಢ್ಯ ...ುದಾಯವಾದ ಕುರುಬರ ಪೀಠಾಧಿಪತಿ ಗುರುವಿನ್‌ರವರ ...ದಕ್ಕೆ ಬಿದ್ದು ಬೆಂಬಲ ಕೇಳಿದ್ದ. ಅಲ್ಲದೇ ಲಿಂಗಾಯತ ...ಠಕ್ಕೂ ಉರುಳುಸೇವೆ ಮಾಡಿ ಮತಗಳನ್ನು ಬುಟ್ಟಿಗೆ ...ಕೊಳ್ಳಲು ಹವಣಿಸಿದ್ದ. ಇಷ್ಟೇ ಆಗಿದ್ದರೆ ಸಮಸ್ಯೆ ...ಲ್ಲ. ಆದರೆ ಅವನ ಮೌಢ್ಯ ಮತ್ತೂ ಒಂದು ಹೆಜ್ಜೆ

▶▶ 19


...ಲೀಸ್ ಅಧಿಕಾರಿ ಯಾರದೋ ಮರ್ಜಿಗೆ ಒಳಗಾಗಿ ...್ಲಾಡಳಿತದ ಕಾರ್ಯಕ್ರಮದಲ್ಲಿ ಪೂಜೆ ಪುನಸ್ಕಾರ, ...ದುಗುಂಬಳ ಒಡೆಯುವುದು ಒಂದು ರೀತಿಯ ...ಧಾಚರಣೆಯಲ್ಲವೇ. ಸರ್ಕಾರ ಹಬ್ಬ-ಜಾತ್ರೆ ಸಮಯದಲ್ಲಿ ...ಮೂಹಿಕ ಪ್ರಾಣಿಬಲಿಯನ್ನು ನಿಷೇಧಿಸಿದ್ದರೂ ಅವು ...ನ್ಯಾಹತವಾಗಿ ಯಾಕೆ ನಡೆದುಕೊಂಡೇ ಬರುತ್ತಿವೆ ...ನ್ನುವುದಕ್ಕೆ ಮೈಸೂರಿನ ಡಿಸಿ ಮತ್ತು ಎಸ್ಪಿಯ ವರ್ತನೆ ...ತ್ತರದಂತಿತ್ತು.

ಇತ್ತೀಚೆಗೆ ಸರ್ಕಾರಿ ಅಧಿಕಾರಿಗಳೂ ರಾಜಕಾರಣಿಗಳಂತೆ ...ರ್ತಿಸಲು ಶುರು ಮಾಡಿದ್ದಾರೆ. ಕೆಲ ಅಧಿಕಾರಿಗಳು ಜಾತಿ ...ಘಟನೆಗಳೊಂದಿಗೆ ಗುರುತಿಸಿಕೊಂಡರೆ ಮತ್ತೆ ಕೆಲವರು ...ರ್ಮಾಂಧರೊಂದಿಗೆ ಕೈ ಮಿಲಾಯಿಸುತ್ತಿದ್ದಾರೆ. ...ದಾಹರಣೆಗೆ ಕೆಲದಿನಗಳ ಹಿಂದೆ ಮೈಸೂರಿನಲ್ಲಿ ನಡೆದ ...ರ್ಯಕ್ರಮವೊಂದರಲ್ಲಿ ಆಹಾರ ಮತ್ತು ನಾಗರಿಕ ...ಾಖೆಯ ಹಿರಿಯ ಉಪ ನಿರ್ದೇಶಕ ಡಾ.ಕಾ.ರಾಮೇಶ್ವರಪ್ಪ ...ದಿಕೆ ಮೇಲೆ ಹಾಡು ಹಾಡುತ್ತಾ ಕುಣಿಯುತ್ತಾ ...ುಖ್ಯಮಂತ್ರಿ ಸಿದ್ದರಾಮಯ್ಯನವರು ವೇದಿಕೆ ...ುತ್ತಿದ್ದಂತೆಯೇ ಅವರ ಕಾಲಿಗೆರಗಿದ್ದರು. ಹೀಗೆ ...ಧಿಕಾರಿಗಳು ವಿಚಿತ್ರ ಗೀಳು ಅಂಟಿಸಿಕೊಂಡುಬಿಟ್ಟಿದ್ದಾರೆ. ...ಾ ಸುದ್ದಿಯಾಗುವಂತೆ ನೋಡಿಕೊಳ್ಳುವುದು, ...ೀಟೋಗಳಿಗೆ ಪೋಜು ನೀಡುವುದು, ದಿನಪತ್ರಿಕೆ ಮತ್ತು ...ದ್ವಿ ಮಾಧ್ಯಮಗಳಲ್ಲಿ ತಮ್ಮನ್ನು ತಾವು ಬಿಂಬಿಸಿಕೊಳ್ಳುವುದು ...ಮಾನ್ಯವಾಗಿಬಿಟ್ಟಿದೆ.

ಹಾಗಂತ ರಂದೀಪ್ ಹಾಗೂ ದಯಾನಂದ್‌ರನ್ನೂ ...ಚಾರಪ್ರಿಯರು ಅಥವಾ ಅಂಧಾಚರಣೆಗೆ ಕಟ್ಟುಬಿದ್ದವರೂ ...ತ ಏಕಾಏಕಿ ವರ್ಗೀಕರಿಸಲಾಗುವುದಿಲ್ಲ, ಆದರೂ ಅವರು ...ರ್ವಜನಿಕ ಜೀವನದಲ್ಲಿ ತುಸು ಯೋಚಿಸಿ ನಡೆಯಬೇಕಿತ್ತು ...ಾಕೆಂದರೆ ಕೆಲವೊಮ್ಮೆ ನಮಗೇ ಗೊತ್ತಿಲ್ಲದಂತೆ ನಾವು ...ಕ್ಕೆ ಕೆಲಸಗಳಿಗೆ ಬ್ರಾಂಡ್ ಅಂಬಾಸಿಡರ್‌ಗಳಾಗುವ ...ಾಯವಿರುತ್ತದೆ. ಅಂತಹ ಅಪಾಯವನ್ನು ...ಾಬ್ದಾರಿಯುತ ಸ್ಥಾನದಲ್ಲಿರುವ ಅಧಿಕಾರಿ ವರ್ಗ ಅರ್ಥ ...ಾಡಿಕೊಳ್ಳಬೇಕೆನ್ನುವುದಷ್ಟೇ ಪತ್ರಿಕೆಯ ಕಾಳಜಿ.

■ ಶರ

ಗಣಪತಿ ಕುಟುಂಬಕ್ಕೆ ಕೈ ಕೊಟ್ಟ ಚೆಡ್ಡಿಗಳು



ಒಬ್ಬ ಅತೀ ಸಾಮಾನ್ಯ ವ್ಯಕ್ತಿಗೆ ಅರ್ಥವಾಗುವಂತಹ ವಿಚಾರ ಇನ್ನೂ ಕೂಡ ಬಿಜೆಪಿಯವರಿಗೆ ಮತ್ತು ರಾಜಕಾರಣಿಗಳಿಗೆ ಅರ್ಥವಾಗಿಲ್ಲ ಎಂದರೆ ಅದು ರಾಜ್ಯದ ದುರಂತ ಎಂದೇ ಹೇಳಬೇಕಾಗುತ್ತದೆ. ಕಳೆದ ಕೆಲವು ಸಮಯದ ಹಿಂದೆ ಮಂಗಳೂರು ಐಜಿಪಿ ಕಚೇರಿಯಲ್ಲಿ ಡಿವೈಎಸ್‌ಪಿ ಆಗಿದ್ದ ಗಣಪತಿ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಮಡಿಕೇರಿಯ ಖಾಸಗಿ ಚಾನಲ್‌ಗೆ ಸಂದರ್ಶನ ನೀಡಿದ್ದರು. ಈ ಸಂದರ್ಶನದಲ್ಲಿ ತನಗೇನಾದರೂ ಹೆಚ್ಚುಕಡಿಮೆಯಾದರೆ ಅದಕ್ಕೆ ಪೊಲೀಸ್ ಹಿರಿಯ ಅಧಿಕಾರಿಗಳಾದ ಪ್ರಣವ್ ಮೊಹಂತಿ, ಪ್ರಸಾದ್ ಜೊತೆಗೆ ಸಚಿವ ಕೆ.ಜೆ. ಜಾರ್ಜ್ ಕಾರಣ ಎಂದು ಹೇಳಿದ್ದರು. ಅಲ್ಲಿಂದ ಅವರು ಮಡಿಕೇರಿಯ ಲಾಡ್ಜ್‌ಗೆ ಬಂದು ನೇಣಿಗೆ ಶರಣಾಗಿದ್ದರು.


ಕಾವೇರಿ ವಿಚಾರದಲ್ಲಿ ಹೇಗೆ ತಮ್ಮ ಟಿಆರ್‌ಪಿಯನ್ನು ಹೆಚ್ಚಿಸಿಕೊಳ್ಳಲು ಖಾಸಗಿ ಚಾನೆಲ್‌ಗಳು ಕೊಳ್ಳಿ ಇಟ್ಟವೋ, ಅದೇ ರೀತಿಯಲ್ಲಿ ಗಣಪತಿ ಆತ್ಮಹತ್ಯೆ ಪ್ರಕರಣವನ್ನು ಕೂಡ ತಮ್ಮ ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಬಳಸಿಕೊಂಡರು. ಸುಮಾರು ಹದಿನೈದು ದಿನಗಳ ಕಾಲ ಸಾಕಷ್ಟು ಮಂದಿ ಕನ್ನಡ ಚಾನೆಲ್‌ಗಳನ್ನು ನೋಡುವುದನ್ನೇ ಬಿಟ್ಟಿದ್ದರು. ಇಂತಹ ಸುದ್ದಿಗಳನ್ನು ಬಿತ್ತರಿಸಿದರೆ ತಮ್ಮ ಟಿಆರ್‌ಪಿ ಹೆಚ್ಚುತ್ತದೆ ಎಂಬ ಭ್ರಮೆಯಲ್ಲಿ ಚಾನೆಲ್ ನಡೆಸುವವರು ಇದ್ದಾರೆ. ಚಾನೆಲ್‌ಗಳ ಬಗ್ಗೆ ಮತ್ತು ಚಾನೆಲ್‌ಗಳಲ್ಲಿ ಸುದ್ದಿ ಓದುವವರು, ಸುದ್ದಿ ವಿಶ್ಲೇಷಿಸುವವರು ಹಾಗೂ ತಾವೇ ಬೃಹಸ್ಪತಿಗಳು ಎಂದು ವರ್ತಿಸುವವರ ಬಗ್ಗೆ ಸಾಮಾನ್ಯ ಜನರಿಗೆ ರೇಜಿಗೆ ಹುಟ್ಟಿದೆ ಎಂಬುದು ಚಾನೆಲ್‌ನವರಿಗೂ ಅರ್ಥವಾಗಿಲ್ಲ. ಎಲ್ಲಾ ವಿಚಾರಗಳಲ್ಲಿ ತಾವೇ ಉದ್ಧಾಮ ಪಂಡಿತರು ಎನ್ನುವಂತೆ ವರ್ತಿಸುತ್ತಾರೆ.


ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿಯೂ ಇದೇರೀತಿ ವರ್ತಿಸಿದರು. ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಗಣಪತಿ ನೀಡಿದ ಸಂದರ್ಶನದಲ್ಲಿ "ಈ ಸರಕಾರವನ್ನು ಬದಲಾಯಿಸಬೇಕು" ಎಂದು ಹೇಳಿದ್ದು ದಾಖಲಾಗಿದೆ. ಸರಕಾರಿ ಅಧಿಕಾರಿಯೊಬ್ಬ ಸರಕಾರ ಬದಲಾಗಬೇಕು ಎಂದು ಹೇಳುವುದು ಅಪರಾಧ. ಗಣಪತಿ ಈ ವಿಚಾರದಲ್ಲಿ ತಪ್ಪನ್ನು ಎಸಗಿದ್ದರು. ಅವರು ಸಂಘ ಪರಿವಾರದ ಏಜೆಂಟರ ರೀತಿಯಲ್ಲಿ ದಕ್ಷಿಣ ಕನ್ನಡದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದಾಗ ಕಾರ್ಯ ನಿರ್ವಹಿಸಿದ್ದ ಬಗ್ಗೆ ದಾಖಲೆಗಳು ಧಾರಾಳವಾಗಿ ಸಿಗುತ್ತದೆ. ಈ ಹಿನ್ನೆಲೆಯುಳ್ಳ ಅಧಿಕಾರಿಯೊಬ್ಬರು ಸರಕಾರದ ವಿರುದ್ಧವೇ ಆರೋಪವನ್ನು ಮಾಡಿದ್ದು ಮಾತ್ರವಲ್ಲದೆ, ಸರಕಾರವನ್ನು ಬದಲಾಯಿಸಬೇಕು ಎಂದು ಹೇಳಿದ್ದು ಯಾವುದೇ ಮಾಧ್ಯಮಗಳಲ್ಲಿ ಚರ್ಚೆಯಾಗಲಿಲ್ಲ. ಚರ್ಚೆಯಾದದ್ದು ಗಣಪತಿಯ ಹೇಳಿಕೆಯಲ್ಲಿ ತನಗೆ ಮೊಹಂತಿ ಮತ್ತು ಪ್ರಸಾದ್ ಎಂಬ ಇಬ್ಬರು ಅಧಿಕಾರಿಗಳು ಕಿರುಕುಳ ನೀಡಿದ್ದಾರೆ ಎಂದ ವಿಚಾರ ಹಾಗೂ ಆ ಸಂದರ್ಭದಲ್ಲಿ ಕೆ.ಜೆ.ಜಾರ್ಜ್ ಗೃಹ ಸಚಿವರಾಗಿದ್ದರು ಎಂದು ಹೇಳಿದ್ದ ವಿಚಾರ.

ತನ್ನ ಹೇಳಿಕೆಯಲ್ಲಿ ಜಾರ್ಜ್‌ರವರ ಪಾತ್ರ ಏನು ಎಂಬುದನ್ನು ಎಲ್ಲಿಯೂ ಗಣಪತಿ ವಿವರಿಸಲಿಲ್ಲ, ಕೇವಲ ಜಾರ್ಜ್ ಆ ಸಂದರ್ಭದಲ್ಲಿ ಗೃಹ ಸಚಿವರಾಗಿದ್ದರು ಎಂದು ಮಾತ್ರ ಹೇಳಿದ್ದರು. ಜಾರ್ಜ್ ಸಚಿವರಾಗಿದ್ದು ತಪ್ಪೇ? ಅಥವ ಸಂಘ ಪರಿವಾರದ ಆಶಯಗಳಂತೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿಯೊಬ್ಬ ಸಚಿವರಾಗಿದ್ದು ತಪ್ಪೇ ಎಂಬುದು ಗಣಪತಿಯವರು ಹೇಳಿಲ್ಲ ಅಥವ ನಿರ್ದಿಷ್ಟವಾಗಿ ಜಾರ್ಜ್ ಯಾವ ರೀತಿಯಲ್ಲಿ ತನಗೆ ಕಿರುಕುಳ ನೀಡಿದ್ದಾರೆ ಎಂದು ಕೂಡ ಹೇಳಿಲ್ಲ, ಅಂದರೆ ಗಣಪತಿ ಯಾವುದೋ ಒಂದು ಒತ್ತಡಕ್ಕೆ ಸಿಲುಕಿ ಈ ರೀತಿಯಲ್ಲಿ ಹೇಳಿಕೆಯನ್ನು ನೀಡಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ದೃಶ್ಯ ಮಾಧ್ಯಮಗಳು ಯಾರೇ ನೀಡಿದ ಸಂದರ್ಶನ ಅಥವಾ ಹೇಳಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಪ್ರಕಟಪಡಿಸದೆ, ತಮಗೆ ಬೇಕಾದಂತಹ ಭಾಗಗಳನ್ನು ಮಾತ್ರ ಬಿತ್ತರಿಸುವ ಮೂಲಕ ಜನರಿಗೆ ತಪ್ಪು ಮಾಹಿತಿಯನ್ನು ನೀಡಿ ದಿಕ್ಕು ತಪ್ಪಿಸುತ್ತಿದ್ದಾರೆ. ಗಣಪತಿ ಹೇಳಿಕೆಯ ಆಧಾರದಲ್ಲಿ ಕೊಡಗೂ ಸೇರಿದಂತೆ ರಾಜ್ಯದ ಎಲ್ಲಾ ಭಾಗಗಳಲ್ಲಿ ಪ್ರತಿಭಟನೆಗಳು, ಬಂದ್ ಮುಂತಾದವು ನಡೆದವು. ಪ್ರತಿಪಕ್ಷಗಳು ಸರಕಾರದ ವಿರುದ್ಧ ಇದನ್ನು ಅಸ್ತ್ರವಾಗಿ ಬಳಸಿಕೊಂಡವು. ಕಾರಣ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಗೆ ಹತ್ತಿರದವರಾಗಿದ್ದ ಗಣಪತಿ ಆತ್ಮಹತ್ಯೆ ಪ್ರಕರಣವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಬಹುದು ಎಂದು ಅವರಿಗೆ ಅನಿಸಿತ್ತು, ಹಾಗಾಗಿ ರಾಜ್ಯದಾದ್ಯಂತ ಇದನ್ನು ಬಳಸಿಕೊಂಡರು. ಕೊಡಗು ಜಿಲ್ಲೆಯಲ್ಲಂತೂ ಇರುವ ಇಬ್ಬರೂ ಶಾಸಕರು ಬಿಜೆಪಿಯವರೇ ಆಗಿದ್ದು, ಜಾರ್ಜ್ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಮೊದಲನೇಯ ದಿನದಿಂದಲೇ ಅವರ ವಿರುದ್ಧ ಇಬ್ಬರೂ ಕತ್ತಿ ಮಸೆಯುತ್ತಲೇ ಬಂದಿದ್ದರು. ಜಾರ್ಜ್ ಇಂಥವರಿಗೆ ಸೊಪ್ಪು ಹಾಕಲೇ ಇಲ್ಲ.


ಸಿದ್ದರಾಮಯ್ಯ ಸರಕಾರವನ್ನು ಹೇಗಾದರೂ ಮಾಡಿ ಕೆಡವಲೇಬೇಕು ಎಂದು ಪ್ರಯತ್ನಿಸುತ್ತಾ ಸಾಫಲ್ಯವನ್ನು ಕಂಡುಕೊಳ್ಳುವಲ್ಲಿ ವಿಫಲವಾಗಿರುವ ಹೆಚ್.ಡಿ.ಕುಮಾರಸ್ವಾಮಿ ಗಣಪತಿ ಸಾವಿನಲ್ಲೂ ರಾಜಕೀಯವನ್ನು ಮಾಡಿ, ತಮ್ಮ ಬೆಂಬಲಿಗರ ಮೂಲಕ ಮಡಿಕೇರಿ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆಯೊಂದನ್ನು ಗಣಪತಿಯ ಪುತ್ರನ ಮೂಲಕ ದಾಖಲಿಸುವಲ್ಲಿ ಯಶಸ್ವಿಯಾದರು. ವಾಸ್ತವತೆಯ ಅರಿವು ಇದ್ದರೂ ಕೂಡ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಯತ್ನವನ್ನು ಕುಮಾರಸ್ವಾಮಿ ಮಾಡಿದ್ದರು.





ಈ ಖಾಸಗಿ ಮೊಕದ್ದಮೆಯನ್ನು ಸ್ವೀಕರಿಸಿದ್ದ ನ್ಯಾಯಾಲಯ, ಈ ಮೂವರ ವಿರುದ್ಧ ತನಿಖೆಗೆ ಆದೇಶವನ್ನು ನೀಡಿತ್ತು, ಮಡಿಕೇರಿಯ ನ್ಯಾಯಾಧೀಶರು ಎಫ್‌ಐಆರ್ ದಾಖಲಿಸಲು ಆದೇಶ ನೀಡಿದ್ದರು. ಎಫ್‌ಐಆರ್‌ನ್ನು ರದ್ದುಪಡಿಸುವಂತೆ ಪೊಲೀಸ್ ಅಧಿಕಾರಿಗಳು ರಾಜ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯ ವಿಚಾರಣೆ ನಡೆಯಲಿ ಎಂದು ಸೂಚಿಸಿತ್ತು ಮತ್ತು ತನಿಖೆಯನ್ನು ಡಿವೈಎಸ್‌ಪಿ ಮಟ್ಟದ ಅಧಿಕಾರಿಗಳು ನಡೆಸಬೇಕು ಎಂದಿತ್ತು. ಒಂದಷ್ಟು ಗೊಂದಲಗಳು ತನಿಖೆಯ ಬಗ್ಗೆ ಇದ್ದಾಗ, ಸಿಐಡಿ ಡಿಜಿಪಿ ಕಿಶೋರ್ ಚಂದ್ರ ಅವರ ನೇತೃತ್ವದಲ್ಲಿಯೇ ತನಿಖೆ ನಡೆಸುವಂತೆ ಸೂಚಿಸಲಾಗಿತ್ತು. ಈ ಆಧಾರದಲ್ಲಿ ತನಿಖೆಗಳು ನಡೆದು, ಈಗ ಮಡಿಕೇರಿ ನ್ಯಾಯಾಲಯಕ್ಕೆ 'ಬಿ' ವರದಿಯನ್ನು ಪೊಲೀಸರು ಸಲ್ಲಿಸಿದ್ದಾರೆ. ನ್ಯಾಯಾಲಯ ಆಕ್ಷೇಪಣೆಗಳು ಸಲ್ಲಿಸಲು 29ರವರೆಗೆ ಸಮಯವನ್ನು ನೀಡಿದ್ದಾರೆ.

ಸಂಘ ಪರಿವಾರಕ್ಕೆ ಮತ್ತು ಭಾರತೀಯ ಜನತಾ ಪಕ್ಷಕ್ಕೆ ಈ ವರದಿ ತೃಪ್ತಿಯನ್ನು ನೀಡಿಲ್ಲ, ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ "ಜಾರ್ಜ್‌ರವರನ್ನು ರಕ್ಷಿಸಲು ತರಾತುರಿಯಲ್ಲಿ 'ಬಿ' ವರದಿಯನ್ನು ಮಾಡಲಾಗಿದೆ" ಎಂದು ಆರೋಪಿಸಿದ್ದಾರೆ. ತಮ್ಮ ಮೂಗಿನ ನೇರಕ್ಕೆ ಅವರು ಪ್ರಕರಣವನ್ನು ವಿಶ್ಲೇಷಿಸಿದ್ದಾರೆ. "ಗಣಪತಿ ಪ್ರಕರಣದ ತನಿಖೆಯನ್ನು ಕೇವಲ ಒಂದುವರೆ ತಿಂಗಳಿನಲ್ಲಿ ಮುಗಿಸಿರುವುದೇ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ" ಎಂದು ಅವರು ಹೇಳಿದ್ದಾರೆ. ಮೊದಲ ದಿನವೇ ಈ ಆರೋಪಗಳಲ್ಲಿ ಹುರುಳಿಲ್ಲ ಎಂದು ಒಬ್ಬ ಶ್ರೀಸಾಮಾನ್ಯ ಕೂಡ ಹೇಳುತ್ತಿದ್ದ, ಆದರೆ ದೃಶ್ಯ ಮಾಧ್ಯಮದವರಿಗೆ ಮತ್ತು



ಮೊಸರಲ್ಲಿ ಕಲ್ಲು ಹುಡುಕುವ ರಾಜಕೀಯ ಪಕ್ಷಗಳಿಗೆ ಮಾತ್ರ ಇದು ತಿಳಿಯಲಿಲ್ಲ. ಇತ್ತೀಚೆಗೆ ಒಬ್ಬ ಸಾಮಾನ್ಯ ವ್ಯಕ್ತಿ ಈ ವರದಿ ಬಂದನಂತರ ಮಾತನಾಡುತ್ತಾ "ಅವರಿಗೆ ಅರ್ಥವಾಗಲಿಲ್ಲ ಎಂದೇನೂ ಅಲ್ಲ, ಅವರಿಗೆ ಹೆಚ್ಚು ಅರ್ಥವಾಗಿದ್ದೇ ಸಮಸ್ಯೆಗೆ ಕಾರಣ" ಎಂದು ಪ್ರತಿಕ್ರಿಯಿಸಿದ್ದರು. ಅಂದರೆ ಜನತೆಗೆ ಇವರೆಲ್ಲರ ನಾಟಕಗಳನ್ನು ನೋಡಿ ಜಿಗುಪ್ಸೆ ಆಗಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಗಣಪತಿಯವರ ಪುತ್ರ ನೇಹಾಲ್ ಸಿಬಿಐಗೆ ಈ ಪ್ರಕರಣವನ್ನು ಒಪ್ಪಿಸುವಂತೆ ಒತ್ತಾಯಿಸುವುದಿಲ್ಲ ಎಂದು ಹೇಳಿದ್ದಾರೆ. ಅವರಿಗೆ ತಮ್ಮನ್ನು ಬಳಸಿಕೊಳ್ಳಲಾಗಿದೆ ಎಂಬ ವಿಚಾರ ತಡವಾಗಿ ಅರ್ಥವಾಗಿದೆ. ಹಾಗಾಗಿ ಅವರು ಈ ರೀತಿ ಹೇಳಿದ್ದಾರೆ. ಅವರು ತಮ್ಮ ಹೇಳಿಕೆಯಲ್ಲಿ "ನಮ್ಮ ತಂದೆ ಜಾರ್ಜ್ ವಿರುದ್ಧ ಆರೋಪ ಮಾಡಿ ಆತ್ಮಹತ್ಯೆ ಮಾಡಿಕೊಂಡಾಗ ಎಲ್ಲರೂ ನಮ್ಮ ಜೊತೆ ಇದ್ದರು. ಅವರು ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿದ ಬಳಿಕ ಎಲ್ಲರೂ ನಮ್ಮ ಕೈಬಿಟ್ಟರು. ಹಾಗಾಗಿ ಸಿಬಿಐ ತನಿಖೆಯಾಗಬೇಕೆಂದು ಹೋರಾಟ ನಡೆಸಿದರೆ ನನ್ನ ಭವಿಷ್ಯ ಹಾಳಾಗಲಿದೆ" ಎಂದು ಹೇಳಿದ್ದಾರೆ.


ನೇಹಾಲ್‌ಗೆ ತಡವಾಗಿಯಾದರೂ ಸತ್ಯದ ಅರಿವು ಆಗಿದೆ. ರಾಜಕೀಯ ಪಕ್ಷಗಳಿಗೆ ಬೇಕಿದ್ದು ಜಾರ್ಜ್‌ರವರ ರಾಜಿನಾಮೆಯೇ ವಿನಹ ಬೇರೇನೂ ಅಲ್ಲ, ಅವರ ರಾಜಿನಾಮೆಯ ನಂತರ ಎಲ್ಲರೂ ಗಣಪತಿಯವರ ಕುಟುಂಬದ ಕೈಬಿಟ್ಟಿದ್ದಾರೆ ಎಂದರೆ, ರಾಜಕೀಯ ಪಕ್ಷಗಳ ಕಾರ್ಯಸೂಚಿ ಏನಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈಗ ಜೆಡಿಎಸ್‌ನ ಜಿಲ್ಲಾ ಕಾರ್ಯಾಧ್ಯಕ್ಷ ಸಂಕೇತ್ ಪೂವಯ್ಯ "ಕುಮಾರಸ್ವಾಮಿ ನೇತೃತ್ವದಲ್ಲಿ ಹೋರಾಟವನ್ನು ಮುಂದುವರೆಸುತ್ತೇವೆ" ಎಂದು ಹೇಳಿದ್ದಾರೆ. ಇದೊಂದು ತಮಾಷೆಯ ಸರಕಾಗಲಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಕೊಡಗು ಜಿಲ್ಲೆಯಲ್ಲಿ ಈ ಪ್ರಕರಣ ನಡೆದಾಗ ಎ.ಕೆ. ಸುಬ್ಬಯ್ಯ ಘಟನೆಯನ್ನು ವಿಶ್ಲೇಷಿಸಿದ್ದರು. ಆಗ 'ವಿಶ್ವವಾಣಿ'ಯ ವಿನಾಯಕ ಭಟ್ಟ "ಎ.ಕೆ. ಸುಬ್ಬಯ್ಯನವರಿಗೆ ಇದು ಬೇಕಿತ್ತೇ" ಎಂದು ಬರೆದಿದ್ದರು. ಈಗ ವಿನಾಯಕ ಭಟ್ಟ ಏನು ಹೇಳುತ್ತಾರೆ ಎಂದು ಪ್ರಶ್ನಿಸಬೇಕಾಗಿದೆ.

ಅನವಶ್ಯಕವಾಗಿ ಆರೋಪಗಳನ್ನು ಮಾಡಿ, ಇಬ್ಬರು ಅಧಿಕಾರಿಗಳು ರಜೆಯಲ್ಲಿ ಹೋಗುವಂತೆ ಆದದ್ದು ಮತ್ತು ಜಾರ್ಜ್ ರಾಜೀನಾಮೆ ನೀಡುವಂತೆ ಆದದ್ದು ಸರಿಪಡಿಸಲು ಸಾಧ್ಯವೇ? ಗಣಪತಿ ಆತ್ಮಹತ್ಯೆ ಸರಿಯಲ್ಲ ಎನ್ನುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಆದರೆ ಸ್ವಯಂಕೃತಾಪರಾಧಕ್ಕೆ ಪರಿಹಾರವಿದೆಯೇ?

■ ಬಿ.ಎಸ್.ಮನುಶೆಟ್ಟಿ

ಹೊಳಲ್ಕೆರೆ: ಆಸ್ತಿಗಾಗಿ ಬ್ರಹ್ಮಕುಮಾರಿಗಳ ಬೀದಿಕಾಳ


ಬಸವರಾಜ ರಾಜಋಷಿ

ಹೊಳಲ್ಕೆರೆಯ ಬ್ರಹ್ಮಕುಮಾರಿಗಳ ಬೀದಿ ರಂಪಾಟ ಬಲು ರೇಜಿಗೆ ಅನ್ನಿಸುತ್ತಿದೆ. ಧ್ಯಾನದ ಮೂಲಕ ಶಾಂತಿ, ನೆಮ್ಮದಿ ಹರಿದುಹಂಚಬಿಡುತ್ತೇವೆ ಮತ್ತು ಆ ಕೆಲಸಕ್ಕೆ ಖುದ್ದು ಬ್ರಹ್ಮನೇ ನಮ್ಮನ್ನು ಉದುರಿಸಿ ಕಳಿಸಿದ್ದಾನೆ ಅಂತೆಲ್ಲಾ ಪೋಜು ಕೊಡುವ ಶ್ವೇತವಸ್ತ್ರದ ಈಶ್ವರಿಗಳೂ ಅಟ್‌ಲಾಸ್ಟ್ ಅಂಡ್ ಫೈನಲಿ ನಮ್ಮನಿಮ್ಮಂತೆಯೇ ಸಹಜ ಆಸೆ, ಲಾಲಸೆಯ ಮನುಷ್ಯರು ಅನ್ನೋದನ್ನು ಸೆಪ್ಟೆಂಬರ್ 8ರಂದು ಹೊಳಲ್ಕೆರೆಯಲ್ಲಿ ನಡೆದ ಆ ರಾದ್ಧಾಂತ ಸಾಬೀತುಮಾಡಿದೆ.

ರಾಜಸ್ಥಾನದ ಮೌಂಟ್ ಅಬುವಿನಂತಹ ತಣ್ಣನೆಯ ತಾಣದಲ್ಲಿ ತನ್ನ ಕೇಂದ್ರಸ್ಥಾನವನ್ನು ಹೊಂದಿರುವ ಬ್ರಹ್ಮಕುಮಾರಿ ಈಶ್ವರಿಯ ಸಂಸ್ಥೆ ಏನಿಲ್ಲವೆಂದರೂ ಪ್ರಪಂಚದಾದ್ಯಂತ ಎಂಟತ್ತು ಸಾವಿರ ಶಾಖೆಗಳನ್ನು ತೆರೆದುಕೂತಿದೆ. ಜನರ ಆಸೆ, ಭೋಗಗಳನ್ನು ಬಿಡುಗಡೆಗೊಳಿಸಿ ಧ್ಯಾನದ ಮುಖೇನ ಜನರಿಗೆ ನೆಮ್ಮದಿಯ ಬದುಕು ಕಲಿಸಿಕೊಡುತ್ತೇವೆ ಅನ್ನೋದು ಅಖಂಡ ಈಶ್ವರಿ ಸಂಸ್ಥೆಯ ಒನ್‌ಲೈನ್ ಅಜೆಂಡಾ. ಇಲ್ಲಿ ಕರ್ನಾಟಕದಲ್ಲೂ ಅಂತಹ ನೂರಾರು ಶಾಖೆಗಳಿವೆ. ಅದನ್ನೆಲ್ಲ ನಿಯಂತ್ರಿಸಲು ಕರ್ನಾಟಕದ ಶಾಖೆಗಳನ್ನು ನಾಲ್ಕು ವಲಯಗಳಲ್ಲಿ ವಿಂಗಡಿಸಲಾಗಿದೆ. ಉಳಿದ ಮೂರು ವಲಯಗಳಲ್ಲಿ ಕತೆ ಹೇಗೋ ಏನೋ ಗೊತ್ತಿಲ್ಲ ಆದರೆ ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಹಾವೇರಿ, ಧಾರವಾಡ, ಕೊಪ್ಪಳ, ಗದಗ ಜಿಲ್ಲೆಗಳನ್ನು ತನ್ನ ತೆಕ್ಕೆಯಲ್ಲಿ ಇರಿಸಿಕೊಂಡಿರುವ ಹುಬ್ಬಳ್ಳಿ ವಲಯದ ಭಾನ್ಗಡಿಗಳು ಒಂದೆರಡಲ್ಲ, ಅದಕ್ಕೆ ಮುಖ್ಯ ಕಾರಣ, ಈ ವಲಯದ ಚುಕ್ಕಾಣಿ ಹಿಡಿದು ಕೂತಿರುವ ಬವರಾಜ ರಾಜಋಷಿ ಮತ್ತವನ 'ಪರಮಾಪ್ತೆ' ಭಕ್ತೆ ನಿರ್ಮಲಕ್ಕ! ಇಲ್ಲಿಗೆ ಎರಡು ವರ್ಷಗಳ ಹಿಂದೆಯೇ ಈ ಬಸವರಾಜ ರಾಜಋಷಿಯ ಭೂದಾಹ, ಅಕ್ರಮಗಳು, ಕಿರುಕುಳಗಳ ಬಗ್ಗೆ 'ಪತ್ರಿಕೆ' ವಿಸ್ತೃತ ವರದಿ ಮಾಡಿತ್ತು, ವೆರಿ ಸೇಮ್ ಓಲ್ಡ್ ಫೆಲೋ ಇದೀಗ ಮತ್ತೊಮ್ಮೆ ಪತ್ರಿಕೆಗೆ ಆಹಾರವಾಗುತ್ತಿದ್ದಾನೆ. ಅದಕ್ಕೆ ಕಾರಣವಾಗಿರೋದು ಹೊಳಲ್ಕೆರೆಯಲ್ಲಿ ಭವ್ಯವಾಗಿ ಎದ್ದು ನಿಂತಿರುವ, ಏನಿಲ್ಲವೆಂದರು ಐದಾರು ಕೋಟಿ ಬೆಲೆಬಾಳುವ ಈಶ್ವರಿ ಕಟ್ಟಡ!


ಸುಮಿತ್ರಕ್ಕ ವರ್ಸಸ್ ರಾಜಋಷಿ

ಆರಂಭದಲ್ಲಿ ಧ್ಯಾನ ಎನ್ನುತ್ತಿದ್ದ ಬ್ರಹ್ಮಕುಮಾರಿಯ ಬೈಲಾವೇ ಯಾವಾಗ ದಂಧೆಯಾಗಿ ಬದಲಾಯಿತೋ ಅವತ್ತಿಂದ ಬೀದಿಬೀದಿಗೊಂದು ಈಶ್ವರಿ ಕೇಂದ್ರಗಳು ತಲೆಎತ್ತಲು ಶುರುವಾಗಿವೆ. ದತ್ತಿ ಸಂಸ್ಥೆ ಅಂತ ಸರ್ಕಾರದಿಂದ ಒಂದಷ್ಟು ಜಾಗ ಮಂಜೂರು ಮಾಡಿಸಿಕೊಳ್ಳೋದು, ಶ್ರೀಮಂತ ಕುಳಗಳನ್ನು 'ಪರಿವಾರ'ದವರನ್ನಾಗಿಸಿಕೊಂಡು ದೇಣಿಗೆ ಸುಲಿದು ಕಟ್ಟಡ ಎಬ್ಬಿಸೋದು, ಆಮೇಲೆ ಆ ಕಟ್ಟಡವನ್ನು ತಾವೇ ಒಂದಷ್ಟು ಮಂದಿ ಸದಸ್ಯರಾದ ಬೇನಾಮಿ ಟ್ರಸ್ಟಿಗೆ ವರ್ಗಾಯಿಸಿಕೊಂಡು ಲಪಟಾಯಿಸೋದು; ಇದು ಹುಬ್ಬಳ್ಳಿಯ ಬಸವರಾಜ ರಾಜಋಷಿ ನಡೆಸಿಕೊಂಡು ಬಂದಿರುವ ಐನಾತಿ ಕಸುಬು. ಇದರ ಜೊತೆಗೆ ಪ್ರತಿ ಜಿಲ್ಲೆಯ ಪ್ರತಿ ಶಾಖೆಯಿಂದ ತಿಂಗಳಿಗೆ ಇಂತಿಷ್ಟು ಮಾಮೂಲಿಯೂ ಇವನ ಜೋಳಿಗೆ ಸೇರಬೇಕಂತೆ. ಇದಕ್ಕಾತ ಬಳಸಿಕೊಳ್ಳುತ್ತಿರೋದು ಬ್ರಹ್ಮಕುಮಾರಿಯ ಶ್ವೇತವಸ್ತ್ರವನ್ನು!

ಇಂತದ್ದೇ ತಂತ್ರದ ಭಾಗವಾಗಿ ಹದಿನೈದು ವರ್ಷಗಳ ಹಿಂದೆ ಚಿತ್ರದುರ್ಗದ ಹೊಳಲ್ಕೆರೆಗೂ ಬ್ರಹ್ಮಕುಮಾರಿ ಶಾಖೆ ಕಾಲಿಟ್ಟಿತ್ತು, ಆಗ ಅಲ್ಲಿಗೆ ಉಸ್ತುವಾರಿಗೆಂದು ನೇಮಕವಾಗಿ ಬಂದೋಳೇ ಸುಮಿತ್ರಕ್ಕ, ಮಂಗಳೂರು ಮೂಲದ ಈ ಹೆಂಗಸು ಇಲ್ಲಿಗೆ ಬಂದಾಗ ಸಂಸ್ಥೆಗೆ ಸ್ವಂತದ್ದೊಂದು ಕಟ್ಟಡವೂ ಗತಿಯಿರಲಿಲ್ಲ, ಬಾಡಿಗೆ ಜಾಗದಲ್ಲೇ ಸಣ್ಣದಾಗಿ ಧ್ಯಾನ ಶುರು ಮಾಡಿದ ಈಯಮ್ಮ ನಿಧಾನಕ್ಕೆ ತಾಲ್ಲೂಕು ಪಂಚಾಯ್ತಿಯಿಂದ ಜಾಗ ಮಂಜೂರು ಮಾಡಿಸಿಕೊಂಡಿದ್ದಲ್ಲದೆ ಶ್ರೀಮಂತ ದಾನಿಗಳನ್ನು ಹಿಡಿದು ಜಬರ್‌ದಸ್ತ್ ಕಟ್ಟಡವನ್ನೂ ಎಬ್ಬಿಸಿ ನಿಲ್ಲಿಸಿದ್ದಾರೆ. ಇಲ್ಲಿ ಬ್ರಹ್ಮಕುಮಾರಿ ಸಂಸ್ಥೆಯನ್ನು ಕಟ್ಟಿಬೆಳೆಸುವಲ್ಲಿ ಸುಮಿತ್ರಕ್ಕನ ಪಾತ್ರವೇ ದೊಡ್ಡದು. ಹೊಳಲ್ಕೆರೆಯ ಸಮಸ್ತ ಭಕ್ತರಿಗೆ ಇದು ಚೆನ್ನಾಗಿಯೇ ಗೊತ್ತಿದೆ. ಬಸವರಾಜ ರಾಜಋಷಿಯಾಗಲಿ ಅಥವಾ ಅವನ ಹುಬ್ಬಳ್ಳಿ ಹೆಡ್ಡಾಫೀಸಾಗಲಿ ಕಿಂಚಿತ್ತೂ ಸಹಾಯ ಮಾಡಿಲ್ಲ.


ಹೆದ್ದಾರಿ ಪಕ್ಕದಲ್ಲೇ ಎದ್ದು ನಿಂತಿರುವ ಈ ಬೃಹತ್ ಕಟ್ಟಡಕ್ಕೆ ಮತ್ತು ನಿವೇಶನಕ್ಕೆ ಇವತ್ತು ಕನಿಷ್ಠವೆಂದರೂ ಐದಾರು ಕೋಟಿ ರೂಪಾಯಿ ತಗುಲುತ್ತದೆ. ಈ ಸಂಗತಿ ಬಸವರಾಜ ರಾಜಋಷಿಯ ಗಮನಕ್ಕೆ ಬಂದದ್ದೇ ತಡ, ಆತ ಇದನ್ನು ಲಪಟಾಯಿಸಲು ಸ್ಕೆಚ್ ಹಾಕಿದ್ದ. ಹೊಳಲ್ಕೆರೆಯ ಆ ಕಟ್ಟಡವನ್ನು 'ವರ್ಲ್ಡ್ ರಿನೀವಲ್ ಸ್ಪಿರಿಚುಯಲ್ ಟ್ರಸ್ಟ್' (ಡಬ್ಲ್ಯುಆರ್.ಎಸ್.ಟಿ.) ಅನ್ನೋ ಟ್ರಸ್ಟ್‌ಗೆ ರಿಜಿಸ್ಟರ್ ಮಾಡಿಸಿದ್ದ. ಈ ಟ್ರಸ್ಟ್‌ಗೆ ಮುಂಬೈ ಮೂಲದ ರಮೇಶ್ ಷಾ ಎನ್ನುವ ಪಕ್ಕಾ ವ್ಯಾಪಾರಿಯೊಬ್ಬ ಅಧ್ಯಕ್ಷ. ಇನ್ನುಳಿದಂತೆ ರಾಜಋಷಿಯ ಪರಮಾಪ್ತ ಪಟಾಲಮ್ಮಿನ ನಿರ್ಮಲ, ಜಯಂತಿ, ರಶ್ಮಿ ಮೊದಲಾದ ಒಂಭತ್ತು ಅಕ್ಕಂದಿರೇ ಸದಸ್ಯರು. ವಿಪರ್ಯಾಸವೆಂದರೆ ಕರ್ನಾಟಕದಲ್ಲಿ, ಅದರಲ್ಲೂ ಹುಬ್ಬಳ್ಳಿ ವಲಯದಲ್ಲಿ, ಯಾವ್ಯಾವ ಬ್ರಹ್ಮಕುಮಾರಿ ಕಟ್ಟಡಗಳಿವೆಯೋ ಅವೆಲ್ಲಾ ಇದೇ ಮುಂಬೈವಾಲಾ ರಮೇಶ್ ಷಾ ಅಧ್ಯಕ್ಷಗಿರಿಯ ಟ್ರಸ್ಟ್‌ಗೆ ನೋಂದಾವಣೆಗೊಂಡಿವೆ!

ಬಸವರಾಜ ರಾಜಋಷಿಯ ಹಕೀಕತ್ತನ್ನು ಚೆನ್ನಾಗಿ ಮನಗಂಡಿದ್ದ ಸುಮಿತ್ರಕ್ಕ ಹುಬ್ಬಳ್ಳಿ ಹೆಡ್ಡಾಫೀಸು ನಡೆಸಿದ್ದ ಈ ಮಸಲತ್ತಿಗೆ ಪ್ರತಿರೋಧ ಒಡ್ಡಿದ್ದಳು. ಇಲ್ಲಿನ ಜನರ ದೇಣಿಗೆಯಿಂದ ರೂಪುಗೊಂಡ ಈ ಆಸ್ತಿ ಬೇರಾರದೋ ಸ್ವತ್ತಾಗಲು ಬಿಡುವುದಿಲ್ಲ ಅಂತ ಹಠ ಹಿಡಿದಿದ್ದಳು. ಇದೆಲ್ಲ ತಾನು ಕಷ್ಟಪಟ್ಟು ಕಟ್ಟಿ ಬೆಳೆಸಿದ ಸಂಸ್ಥೆಯ ಆಸ್ತಿ ಎನ್ನುವ ಸಣ್ಣದೊಂದು ಅಹಮ್ಮೂ ಸುಮಿತ್ರಕ್ಕನಲ್ಲಿತ್ತು. ಇದು ರಾಜಋಷಿ ಮತ್ತು ಸುಮಿತ್ರಕ್ಕನ ನಡುವೆ ದೊಡ್ಡ ಸಮರವನ್ನೇ ಸೃಷ್ಟಿಸಿತ್ತು. ಶತಾಯಗತಾಯ ಹೊಳಲ್ಕೆರೆ ಈಶ್ವರಿ ಕಟ್ಟಡ ಲಪಟಾಯಿಸಲೇಬೇಕು ಅಂತ ತೀರ್ಮಾನಿಸಿದ್ದ ರಾಜಋಷಿ, ಇತ್ತೀಚೆಗೆ ಸುಮಿತ್ರಕ್ಕನನ್ನು ರಾಯಚೂರಿಗೆ ಎತ್ತಂಗಡಿ ಮಾಡಿ ಆದೇಶ ಹೊರಡಿಸಿದ್ದ. ಇಂತಹ ಆದೇಶ ಹೊರಡಿಸುವುದರ ಹಿಂದೆ ಇನ್ನೂ ಒಂದು ಉದ್ದೇಶವಿತ್ತು, ಅದೇನೆಂದರೆ, ತನ್ನ ವ್ಯಾಪ್ತಿಗೆ ಬರುವ ಎಲ್ಲಾ ಈಶ್ವರಿ ಕೇಂದ್ರಗಳು ತಾವು ಸಂಗ್ರಹಿಸುವ ದೇಣಿಗೆಯಲ್ಲಿ ಇಂತಿಷ್ಟು ಪರ್ಸೆಂಟೇಜ್ ಅನ್ನು ತನಗೊಪ್ಪಿಸಬೇಕು ಎನ್ನುವ ಅಲಿಖಿತ ಕಾನೂನೊಂದನ್ನು ಈತ ರೂಪಿಸಿಕೊಂಡಿದ್ದಾನೆ. ಅದರಂತೆ ಎಲ್ಲಾ ಕಡೆಯಿಂದ ಮಾಮೂಲಿ ಸಂದಾಯವಾಗುತ್ತಲೇ ಬರುತ್ತಿದೆ. ಆದರೆ ಸುಮಿತ್ರಕ್ಕನ ಹೊಳಲ್ಕೆರೆ ಶಾಖೆಯಿಂದ ಅಂತಹ ಮಾಮೂಲಿಯೇ ಬರುತ್ತಿರಲಿಲ್ಲ, ಇದು ಇಲ್ಲಿನ ಭಕ್ತರ ದೇಣಿಗೆ, ಇಲ್ಲಿಗೇ ಖರ್ಚು ಮಾಡುತ್ತೇನೆ ಅನ್ನೋದು ಸುಮಿತ್ರಕ್ಕನ ವಾದ. ಇದು ಸಹ ಬಸವರಾಜನ ತಳ ಉರಿಸಿತ್ತು, ಸುಮಿತ್ರಕ್ಕನನ್ನು ರಾಯಚೂರಿಗೆ ಎತ್ತಂಗಡಿ ಮಾಡುವ ಮೂಲಕ ಅದೆಲ್ಲವನ್ನೂ ತೀರಿಸಿಕೊಂಡಿದ್ದ.


ರಶ್ಮಿ


ನಿರ್ಮಲಾ


ಜಯಂತಿ


ರಮೇಶ್ ಶಾ

ನಖೋ ಅಂದಳು ಅಕ್ಕ

ಇತ್ತ ರಾಜಋಷಿ ರಾಯಚೂರಿಗೆ ತನ್ನನ್ನು ವರ್ಗಾವಣೆ ಮಾಡಿದರೆ, ಅತ್ತ ಸುಮಿತ್ರಕ್ಕ ಹೊಳಲ್ಕೆರೆ ಬಿಟ್ಟು ನಾನು ಕದಲುವುದಿಲ್ಲ ಅಂತ ಪಟ್ಟು ಹಿಡಿದು ಕುಂತಳು. ಇಷ್ಟುದಿನ ನಾನು ಕಟ್ಟಿಬೆಳೆಸಿದ ಸಂಸ್ಥೆ ಈಗ ಇಲ್ಲಿಂದ ಹೋಗಲು ನಾನು ಸಿದ್ಧವಿಲ್ಲ ಅನ್ನೋ ಸುಮಿತ್ರಕ್ಕನ ವಾದಕ್ಕೆ ಹೊಳಲ್ಕೆರೆ ಸಮಸ್ತ ಬ್ರಹ್ಮಕುಮಾರ, ಬ್ರಹ್ಮಕುಮಾರಿಗಳ ಬೆಂಬಲವೂ ಇತ್ತು, ಹೊಳಲ್ಕೆರೆಯಲ್ಲಿ ಸುಮಿತ್ರಕ್ಕ ತನ್ನ ಪ್ರಭಾವ ಹಿಗ್ಗಿಸಿಕೊಳ್ಳುತ್ತಿರುವುದನ್ನು ಮತ್ತು ಆಕೆ ಕಟ್ಟಿಬೆಳೆಸಿದ ಕಟ್ಟಡ ಕಣ್ಣು ಕುಕ್ಕುವಂತಿರುವುದನ್ನು ರಾಜಋಷಿಗೆ ಇಂಚಿಂಚೂ ವರದಿ ಮಾಡುತ್ತಿದ್ದುದೇ ಚಿತ್ರದುರ್ಗ ಶಾಖೆಯಲ್ಲಿ ಠಳಾಯಿಸಿರುವ ಆತನ ಶಿಷ್ಯೆ ರಶ್ಮಿ.


ತನ್ನ ವರ್ಗಾವಣೆ ಆದೇಶಕ್ಕೂ ಕ್ಯಾರೇ ಅನ್ನದ ಸುಮಿತ್ರಳನ್ನು ಹೊಳಲ್ಕೆರೆಯಿಂದ ಖಾಲಿ ಮಾಡಿಸಲು ಬಸವರಾಜ ರಾಜಋಷಿ ರಶ್ಮಿ ನೇತೃತ್ವದಲ್ಲಿ ಕನಕ, ವೀಣಾ ಸಿರ್ಸಿ, ಸುಲೋಚನ ಗಂಗಾವತಿ, ಲೀಲಾ ಹಾವೇರಿ ತಂಡವನ್ನು ಸೆಪ್ಟೆಂಬರ್ 7ರಂದು ಹೊಳಲ್ಕೆರೆಗೆ ಅಟ್ಟಿದ್ದ, ಸುಮಿತ್ರಕ್ಕನ ಲಗೇಜನ್ನು ಕಟ್ಟಡದಿಂದ ಹೊರಹಾಕಿ ಬೀಗ ಜಡಿದು ಬರಬೇಕೆನ್ನುವುದು ಆ ತಂಡಕ್ಕೆ ಸಿಕ್ಕಿದ್ದ ಫರ್ಮಾನಾಗಿತ್ತು, ಆದರೆ ಅವತ್ತು ಹಲ್ಲಿನ ಚಿಕಿತ್ಸೆಗೆಂದು ಸುಮಿತ್ರಕ್ಕ ಮಂಗಳೂರಿಗೆ ಹೋಗಿದ್ದಳು. ಅದೇ ಸಮಯ ನೋಡಿಕೊಂಡು ಬೀಗ ಒಡೆದು ಕಟ್ಟಡಕ್ಕೆ ನುಗ್ಗಿದ ಈ ತಂಡ ಸುಮಿತ್ರಳ ವಸ್ತುಗಳನ್ನು ಹೊರಗೆಸೆದು ಬೀಗ ಜಡಿದು, ತಾವು ತಂಗಿದ್ದ ಐಬಿಗೆ ವಾಪಾಸಾಗಿತ್ತು.

ಮಾರನೇ ದಿನ ಹೊಳಲ್ಕೆರೆಗೆ ಬಂದ ಸುಮಿತ್ರಾಗೆ ಅಕ್ಷರಶಃ ಶಾಕ್! ಅಷ್ಟರಲ್ಲಾಗಲೇ ನಗರದ ಈಶ್ವರಿ ಭಕ್ತಗಣಕ್ಕೂ ರಾದ್ಧಾಂತದ ವಿಷಯ ತಲುಪಿಯಾಗಿತ್ತು, ನೂರಾರು ಸಂಖ್ಯೆಯಲ್ಲಿ ಸುಮಿತ್ರಳ ಪರವಾಗಿ ಜಮಾಯಿಸಿದ್ದರು. ತನ್ನ ಬೆಂಬಲಿಗರ ಸಮೇತ ರಶ್ಮಿ ನೇತೃತ್ವದ ತಂಡ ತಂಗಿದ್ದ ಐಬಿಗೆ ಬಂದ ಸುಮಿತ್ರ ವಾಗ್ವಾದಕ್ಕಿಳಿದಿದ್ದಳು. "ನಿನ್ನನ್ನು ರಾಯಚೂರಿಗೆ ವರ್ಗ ಮಾಡಲಾಗಿದೆ, ಅಲ್ಲದೇ ನಿನ್ನ ಮೇಲೆ ಹಲವಾರು ಆರೋಪಗಳಿವೆ. ಹಾಗಾಗಿ ಸಂಸ್ಥೆಯ ಕಟ್ಟಡದಿಂದ ತೆರವುಗೊಳಿಸಿದ್ದೇವೆ" ಅನ್ನೋ ಉತ್ತರ ಹೊರಬಿದ್ದಿತ್ತು, ಅದಕ್ಕೆ ಸುಮಿತ್ರ ಜಗ್ಗಲಿಲ್ಲ, "ಆರೋಪಗಳಿದ್ದರೆ ಸಾಬೀತು ಮಾಡಿ, ನಾನೇ ಇಲ್ಲಿಂದ ಹೊರಟುಹೋಗುತ್ತೇನೆ. ಇನ್ನು ನಮ್ಮದು ದತ್ತಿ ಸಂಸ್ಥೆಯಾಗಿರೋದರಿಂದ ಇಲ್ಲಿ ವರ್ಗ ಮಾಡುವ ಪ್ರಶ್ನೆಯೇ ಬರುವುದಿಲ್ಲ" ಅಂತ ತಗಾದೆ ತೆಗೆದಳು. ಕೊನೆಗೆ ವಿಪರೀತಕ್ಕೆ ಬಂದು ತಲುಪಿದ ರಾದ್ಧಾಂತ ಪೊಲೀಸ್ ಠಾಣೆಯ ಮೆಟ್ಟಿಲೇರಿತು. ಪೊಲೀಸ್ ಠಾಣೆಯಲ್ಲೂ ಆರಂಭದಲ್ಲಿ ಹುಬ್ಬಳ್ಳಿಯ ಬಸವರಾಜನ ಪ್ರಭಾವವೇ ಕೆಲಸ ಮಾಡಿತು. ಪೊಲೀಸರು ರಶ್ಮಿ ತಂಡದ ಪರವಾಗಿಯೇ ವಕಾಲತ್ತು ವಹಿಸಿದ್ದರು. ಆದರೆ ಯಾವಾಗ "ನಮ್ಮ ಸಂಸ್ಥೆಗೆ ಯಾವ ಬೈಲಾವೇ ಇಲ್ಲ, ಇನ್ನು ವರ್ಗಾವಣೆಯ ಮಾತೆಲ್ಲಿ" ಅಂತ ಸುಮಿತ್ರ ಸಂಗಡಿಗರು ಧ್ವನಿ ಎತ್ತಿದರೋ ಮತ್ತು ಸಾವಿರಾರು ಭಕ್ತರು ಬೀದಿಗಿಳಿದು ಬಸವರಾಜ ರಾಜಋಷಿಯ ವಿರುದ್ಧ ಧಿಕ್ಕಾರ ಕೂಗತೊಡಗಿದರೋ ಆಗ ಹೊಳಲ್ಕೆರೆ ಪೊಲೀಸರೂ ಇದು ಸಿವಿಲ್ ಕೇಸು, ಹಾಗಾಗಿ ಕೋರ್ಟ್‌ನಲ್ಲೇ ಬಗೆಹರಿಸಿಕೊಳ್ಳಿ ಅಂತ ಕೈತೊಳೆದುಕೊಂಡರು. ನ್ಯಾಯಾಲಯ ಸದ್ಯಕ್ಕೆ ಯಥಾಸ್ಥಿತಿ ಮುಂದುವರೆಸುವಂತೆ ಆದೇಶಿಸಿ ಕಟ್ಟಡವನ್ನು ಸುಮಿತ್ರ ವಶಕ್ಕೆ ಒಪ್ಪಿಸಿರುವುದಲ್ಲದೆ ಬಸವರಾಜ ರಾಜಋಷಿಯು ಸೇರಿದಂತೆ 9 ಜನರ ವಿರುದ್ಧ ಕ್ರಿಮಿನಲ್ ಸೂಟ್ ಫೈಲಾಗಿದೆ.

ಸುಮಿತ್ರಗೆ ಸಂಬಂಧ ಕಟ್ಟಿದರು

ಅಷ್ಟಕ್ಕೂ ಬಸವರಾಜ ರಾಜಋಷಿ ಡೀಲ್ ಮಾಡಿದ ಇಂತಹ ಪ್ರಕರಣಗಳು ಇದೇ ಮೊದಲಲ್ಲ, ಆದರೆ ಈ ಪರಿ ಬೀಗ ಜಡಿಸುವ ವಿಪರೀತಕ್ಕೆ ಹೋದದ್ದು ಮಾತ್ರ ಇದೇ ಮೊದಲು. ಇನ್ನುಳಿದ ಪ್ರಕರಣಗಳಲ್ಲಿ ಯಾರು ತನ್ನ ಮಾತನ್ನು ಕೇಳುವುದಿಲ್ಲವೋ ಅಂತವರ ಚಾರಿತ್ರ್ಯವಧೆ ಮಾಡಿ, ಅವರನ್ನು ಬೆದರಿಸಿ ಬ್ಲ್ಯಾಕ್‌ಮೇಲ್ ಮಾಡಿ ಕಾರ್ಯಸಾಧಿಸಿಕೊಳ್ಳುತ್ತಿದ್ದ. ಇದಕ್ಕೊಂದು ಉತ್ತಮ ಉದಾಹರಣೆಯೆಂದರೆ ಧಾರವಾಡ-ಹುಬ್ಬಳ್ಳಿಯ ಉಷಾಕಿರಣ ಎಂಬ ಬ್ರಹ್ಮಕುಮಾರಿಯ ಕಥನ. ಹುಬ್ಬಳ್ಳಿ ವಲಯದ ಈಶ್ವರಿ ವಿಶ್ವವಿದ್ಯಾಲಯದ ಆಸ್ತಿಯೇ 200 ಕೋಟಿ ಮೀರುವಂತಿದೆ. ಅಷ್ಟೂ ಆಸ್ತಿಯನ್ನು ಬಸವರಾಜ ರಾಜಋಷಿ 'ಅಕಾಡಮಿ ಫಾರ್ ಲೈಫ್ ಎಜುಕೇಷನ್' ಟ್ರಸ್ಟ್‌ಗೆ ಬರೆಸಿಕೊಂಡಿದ್ದ, ಆಗ ಉಷಾಕಿರಣ ಅದನ್ನು ಪ್ರಶ್ನಿಸಿ ಗಲಾಟೆ ಮಾಡಿದ್ದಳು. ಆಗ ಬಸವರಾಜ ತನ್ನ ಲಫಂಗ ಶಿಷ್ಯ ಮಾರುತಿ ಪುಂಜಾಲ ಎನ್ನುವನ ಜೊತೆ ಉಷಾಕಿರಣಗೆ ಅಕ್ರಮ ಸಂಬಂಧ ಇರುವುದಾಗಿ ಪುಕಾರು ಎಬ್ಬಿಸಿದ್ದಲ್ಲದೆ ಅವರಿಬ್ಬರೂ ಅಸಭ್ಯ ಭಂಗಿಯಲ್ಲಿರುವಂತೆ 'ಕಂಪ್ಯೂಟರ್ ಮಿಕ್ಸ್' ಫೋಟೊಗಳನ್ನು ಪ್ರಚಾರಕ್ಕೆ ಬಿಟ್ಟು ಆವಳ ತೇಜೋವಧೆಗೆ ಕೈಹಾಕಿದ್ದ. ಆಗ ಅಸಲಿ ಮತ್ತು ಮಿಕ್ಸ್ ಮಾಡಿದ ನಕಲಿ ಫೋಟೊಗಳ ಸಮೇತ 'ಪತ್ರಿಕೆ' ವರದಿ ಪ್ರಕಟಿಸಿತ್ತು, ಆ ಪ್ರಕರಣ ಬಸವರಾಜನನ್ನು ನ್ಯಾಯಾಲಯದ ಕಟಕಟೆಗೂ ತಂದು ನಿಲ್ಲಿಸಿತ್ತು.

ಹೊಳಲ್ಕೆರೆಯ ಸುಮಿತ್ರ ವಿಚಾರದಲ್ಲೂ ರಾಜಋಷಿ ಅಂತದ್ದೇ ಕುತಂತ್ರಕ್ಕೂ ಕೈಹಾಕಿದ್ದ. ಹೊಳಲ್ಕೆರೆಯಲ್ಲಿ ಈಶ್ವರಿ ಸಂಸ್ಥೆಗೆ ಜಾಗ ಮಂಜೂರು ಮಾಡಿಕೊಡುವಲ್ಲಿ ಆಗ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷನಾಗಿದ್ದವನೊಬ್ಬ ಸುಮಿತ್ರಗೆ


ಸುಮಿತ್ರ

ನೆರವಾಗಿದ್ದ, ಅಧಿಕಾರದಿಂದ ಮಾಜಿಯಾದ ಮ... ಈಶ್ವರಿ ಸಂಸ್ಥೆಯ ಪರಿವಾರ ಸೇರಿಕೊಂಡು ಈಶ್ವರ... ಕಾಣಿಸಿಕೊಳ್ಳುತ್ತಿದ್ದ. ಆತನಿಗೂ, ಸುಮಿತ್ರಾಗ... ಸಂಬಂಧವಿದೆ ಹಾಗಾಗಿಯೇ ಆತ ಸದಾಕಾ... ಕಟ್ಟಡದಲ್ಲೇ ಬಿದ್ದುಕೊಂಡಿರುತ್ತಾನೆ ... ಅಪಪ್ರಚಾರವನ್ನೂ ವ್ಯವಸ್ಥಿತವಾಗಿ ಹರಿಬಿಡಲಾಗಿ... ಕಳೆದ ಹದಿನೈದು ವರ್ಷದಿಂದ ಸುಮಿತ್ರರ ... ಗಮನಿಸುತ್ತಲೇ ಬಂದಿದ್ದ ಭಕ್ತಾದಿಗಳ್ಯಾರು ಅ... ಅನ್ನಲಿಲ್ಲ, ತನ್ನ ಆ ಅಸ್ತ್ರವೂ ಬರ್ಕತ್ತಾಗದಿರ... ಜಡಿಯುವ ಅನಿವಾರ್ಯ ಕಾಯಕಕ್ಕೆ ... ಕೈಹಾಕಿದ್ದು.

ಬಸವರಾಜನ ಭಾನ್ಗಡಿಗಳ...

ಬಸವರಾಜ ರಾಜಋಷಿ ಮೇಲ್ನೋಟಕ್ಕೆ ... ಬಿಳಿವಸ್ತ್ರದ ಶುಭ್ರ ಆಸಾಮಿಯೇನಲ್ಲ, ರಾಜ್ಯ... ರಾಜಕಾರಣಿಗಳು ಮತ್ತು ಐ.ಎ.ಎಸ್... ಅಧಿಕಾರಿಗಳ ಸಾಂಗತ್ಯ ಈತನಿಗಿದೆ. ಹಾ... ಬೆಂಗಳೂರಿನ ಬಸವನಗುಡಿಯಲ್ಲಿ... ಶಿಕ್ಷಣ ಇಲಾಖೆಯಿಂದ 'ರಾ... ಸಂಶೋಧನೆ ಮತ್ತು ತರಬೇತಿ ... ಹೆಸರಿನಲ್ಲಿ ಪ್ರತಿವರ್ಷ ಲಕ್ಷಾಂತರ ... ಸರ್ಕಾರದ ಹಣ ಲೂಟಿ ಹೊಡೆ... ಇಲ್ಲಿ ಯಾವ ನುರಿತ ತರಬೇತುದಾ... ಇದೇ ಈಶ್ವರೀಯ ವಿವಿಯ ಅ... ಬಂದು ಪಾಠ ಮಾಡುತ್ತಾರೆ. ಸರ್ಕಾರ... ಇವರಿಗೆಲ್ಲಾ ತಿಂಗಳ ಸಂಬಳ, ಮ... ಅಂತಾ ಬಿಲ್ ಜಡಾಯಿಸಿ ಸರ್ಕಾರದ... ಕೈಹಾಕುತ್ತಾನೆ.


ಇನ್ನು ಯಲ್ಲಾಪುರದಲ್ಲಿ 'ರಾಜಯೋಗ ಎ... ಅಂಡ್ ರಿಸರ್ಚ್ ಫೌಂಡೇಶನ್' ಅನ್ನೋ ... ಶಿಕ್ಷಕಿಯರ ತರಬೇತಿ ಸಂಸ್ಥೆ ತೆರೆದಿದ್ದಾನೆ. ಇದು... ಆಗಿರೋದು ದೆಹಲಿಯ ಬ್ರಿಜ್‌ಮೋಹನ... ಎಂಬುವವನ ಹೆಸರಿನಲ್ಲಿ, ಈ ಕೇಂದ್ರಕ್ಕೆ ... ರಾಜಋಷಿಯದೇ ಮೇಲುಸ್ತುವಾರಿ. ಈ ಸಂಸ್ಥೆ... ಪ್ರತಿವರ್ಷ 25 ಲಕ್ಷ ಎತ್ತುತ್ತಿದ್ದಾನೆ. ಹಾಗೇ ... ಶಿವ ರಿಲೀಜಿಯಸ್ ಮತ್ತು ಚಾರಿಟಬಲ್ ಟ್ರಸ್ಟ್... ಲಾಲ್ ಷಾ ಎಂಬ ಮುಂಬೈವಾಲಾನ ಹ... ಕರ್ನಾಟಕದ ಈಶ್ವರೀಯ ವಿವಿಯ ... ನೋಂದಣಿಯಾಗಿರೋದೇ ಈ ಟ್ರಸ್ಟ್‌ಗೆ.

ಹಾಗೆ ನೋಡಿದರೆ ಕರ್ನಾಟಕದ ಕೆ... ರೂಪಾಯಿಯ ಆಸ್ತಿ ಇಲ್ಲಿನ ಈಶ್ವರೀಯ... ದೇಣಿಗೆಯಿಂದ ಮೈದಳೆದಿರುವಂತವು. ಅವೆಲ್ಲ... ಮೂಲದ ವ್ಯಕ್ತಿಯ ಪಾಲಾಗುತ್ತಿರುವುದು ಅನು... ಎಡೆಮಾಡಿಕೊಡುವಂತದ್ದು, ಮುಂಬೈನ ರಮೇ... ಹಾಗೂ ಬಸವರಾಜ ರಾಜಋಷಿಗೂ ಏನು... ಎನ್ನುವುದೇ ಚಿದಂಬರ ರಹಸ್ಯ! ಅಂದಹಾಗೆ, ... ಹುಬ್ಬಳ್ಳಿ ಜಿಲ್ಲೆಯ ಬೈರದೇವರಕೊಪ್ಪ... ಡಬ್ಲ್ಯುಆರ್.ಎಸ್.ಟಿ. ಟ್ರಸ್ಟ್‌ನ ಬಿಲ್ಡಿಂಗ್‌ಗೆ (ಇದು ... ಮೂಲದ ವ್ಯಕ್ತಿಯ ಹೆಸರಲ್ಲಿ ನೋಂದಾವಣೆ... ಟ್ರಸ್ಟ್) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ... ಅನುದಾನ ಮಂಜೂರಾಗಿದೆ. ಈ ಅವ... ಬಸವರಾಜ ರಾಜಋಷಿಯೇ ಕೇರ್ ಆಫ್ ...

ಒಟ್ಟಿನಲ್ಲಿ ರಾಗ, ದ್ವೇಷ, ಆಸೆ, ಅಸೂ... ಕಿತ್ತೆಸೆದು ಮನುಷ್ಯ ಸಮೂಹಕ್ಕೆ ಶಾಂತಿ ... ದೊರಕಿಸಿಕೊಡುತ್ತೇವೆ ಅಂತ ಬೊಗಳೆ ... ಬ್ರಹ್ಮಕುಮಾರಿಗಳ ಭಾನ್ಗಡಿಗಳು ದಿನಕ್ಕೊಂದರಂ... ಬಿದ್ದು ಜನರ ವ್ಯಂಗ್ಯಕ್ಕೆ ಖಾದ್ಯವಾಗುತ್ತಿವೆ. ಆದು... ನಂಬಿಕೆ, ವಿಶ್ವಾಸಗಳನ್ನೇ ತಮ್ಮ ಬಂಡವಾಳ ಮ... ವಂತಹ ಬಸವರಾಜ ರಾಜಋಷಿಯಂತ ಧ... ಸಂಖ್ಯೆಯೇನೂ ಕಮ್ಮಿಯಾಗುತ್ತಿಲ್ಲ.

■ ಟಿ.ಎನ್. ಷಾ...

ಾವೇರಿ: ಅನ್ಯಾಯದ ಹಿಂದೆ ಆರೆಸ್ಸೆಸ್!



ನಾರಿಮನ್

ಸೆಪ್ಟೆಂಬರ್ 20 ರ ಮಂಗಳವಾರ ಕನ್ನಡಿಗರ ಪಾಲಿಗೆ ಂಗಳವನ್ನೇ ತರಲಿದೆಯೆಂಬ ನಿರೀಕ್ಷೆ ತಾನೇ ರಿಗಿರಲಿಲ್ಲ?

ಹಿಂದ್ಯಾವತ್ತೂ ಈ ಪಾಟ ಹತಾಶೆ, ಸಿಟ್ಟು, ್ರೋಶಭರಿತರಾಗಿ ನಾರಿಮನ್ ವಾದಿಸಿದ್ದನ್ನು ಕಂಡವರಿಲ್ಲ. ್ತ ಬದುಕಿನುದ್ದಕ್ಕೂ ಕಲಿತ ಸಕಲ ತಂತ್ರ, ಮಾತುಗಾರಿಕೆ, ದವೈಖರಿಯನ್ನೆಲ್ಲ ಬಳಸಿದ ನಾರಿಮನ್ ್ವೇಗದಿಂದಲೇ 'ನಾನೊಬ್ಬ ವಕೀಲನಾಗಿ ಈ ಮಾತು ುತ್ತಿಲ್ಲ. ನನ್ನ ಅನುಭವದ ಆಧಾರದ ಮೇಲೆ ುತ್ತಿದ್ದೇನೆ. ಕರ್ನಾಟಕ ಬೆಂಗಳೂರಿಗಾಗಿ ಕಾವೇರಿ ನೀರನ್ನೇ ಕೊಂಡಿದೆ. ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಿ. ಡಿಯಾಗಳ ಮುಂದೆ ನಾನ್ಯಾವತ್ತಿಗೂ ಬಾಯಿಬಿಟ್ಟವನಲ್ಲ. ೀಡಿಯಾಗಳು ಅದೆಷ್ಟೇ ಪೀಡಿಸಿದರೂ ನನ್ನ ಿಪ್ರಾಯವನ್ನು ಕೋರ್ಟ್ ಹೊರತುಪಡಿಸಿ ಹೊರಗೆಂದೂ ಳಿಕೊಂಡವನಲ್ಲ. ಕೃಷ್ಣಾ ನದಿಯ ಐದು ಟಿಎಂಸಿಯನ್ನು ಾರೂ ಕೇಳದಿದ್ದರೂ ಸ್ವಯಂಪ್ರೇರಣೆಯಿಂದಲೇ ಚೆನ್ನೈ ರದ ಸಂಕಟ ಅರಿತು ಬಿಟ್ಟ ನಮಗೆ ತಮಿಳುನಾಡಿನ ಸ್ಥಿತಿ ಅರ್ಥವಾಗಲ್ಲ ಅಂದುಕೊಂಡಿದ್ದೀರಾ....?' ಎಂದು ೀವಿನಿಂದಲೇ ನಾರಿಮನ್ ದುಃಖ ತೋಡಿಕೊಳ್ಳುತ್ತಿದ್ದರೆ ದನ್ನು ಕನಿಷ್ಠ ಕೇಳುವಷ್ಟು ತಾಳ್ಮೆಯು ಸುಪ್ರೀಂಕೋರ್ಟ್ ್ಯಯಮೂರ್ತಿಗಳಾದ ಉದಯ ಲಲಿತ್ ಮತ್ತು ದೀಪಕ್ ಶ್ರಾರಿಗಿರಲಿಲ್ಲ.

ಕರ್ನಾಟಕದ ಯಾವ ವಾದವನ್ನು ನ್ಯಾಯಮೂರ್ತಿ ಯರು ಕಿವಿಗೆ ಹಾಕಿಕೊಳ್ಳಲೂ ಇಲ್ಲ!

ಸೆಪ್ಟೆಂಬರ್ 20 ರ ಸುಪ್ರೀಂಕೋರ್ಟ್ ತೀರ್ಪು ಕೇವಲ ರಡು ವಾರಗಳ ಅವಧಿಯಲ್ಲಿ ಕರ್ನಾಟಕದ ಗಾಯದ ೀಲೆಳೆದ ಮೂರನೇ ಬರೆ. ಸೆಪ್ಟೆಂಬರ್ 21 ರಿಂದ 30 ವರೆಗೆ ತಮಿಳುನಾಡಿಗೆ ಪ್ರತಿನಿತ್ಯ 3 ಸಾವಿರ ಕ್ಯೂಸೆಕ್ಸ್ ೀರು ಹರಿಸಿದರೆ ಸಾಕೆಂದು 'ಕಾವೇರಿ ಮೇಲುಸ್ತುವಾರಿ ಮಿತಿ'ಯೇ ಸೂಚಿಸಿದಾಗಲೂ ಅದನ್ನೂ ಧಿಕ್ಕರಿಸಿ ಪ್ರತಿನಿತ್ಯ ಸಾವಿರ ಕ್ಯೂಸೆಕ್ಸ್ ಹರಿಸಲೇಬೇಕೆಂದು ಹಠಕ್ಕೆ ಬಿದ್ದಂತೆ ುಪ್ರೀಂಕೋರ್ಟ್ ಅನಗತ್ಯ ಆಸಕ್ತಿ ವಹಿಸಿದ್ದರ ರ್ಮವೇನು?

ಅರ್ಜಿದಾರ ತಮಿಳುನಾಡು ಸೇರಿದಂತೆ ಯಾರೂ ೇಳದೇ ಹೋದರೂ ಈ ಕೂಡಲೇ ಕಾವೇರಿ ನಿರ್ವಹಣಾ ಮಂಡಳಿಯನ್ನು ರಚಿಸುವಂತೆ ಕೇಂದ್ರಕ್ಕೆ ನಾಲ್ಕು ವಾರಗಳ ಗಡುವನ್ನೂ ನೀಡಿದ ಸುಪ್ರೀಂಕೋರ್ಟ್ ಅಧಿಕ ಪ್ರಸಂಗಿ ಅನ್ಯಾಯದ ಹಿಂದಿರುವ ಪಕ್ಷಪಾತದ ಮೂಲ ಯಾವುದು?

ಕೇಸರಿಯಾದ ಸುಪ್ರೀಂ....


ರಾಜ್ಯದ ಬಿಜೆಪಿ ನಾಯಕರುಗಳಾದ ಅನಂತ್, ಗೌಡ, ಶೋಭ, ಈಶ್ವರಪ್ಪ ಸೇರಿದಂತೆ ಪ್ರತಿಯೊಬ್ಬರೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂದು ಬೊಬ್ಬಿರಿದಿದ್ದಾರೆ. ನೀರಾವರಿ ಮಂತ್ರಿ ಎಂ.ಬಿ. ಪಾಟೀಲರೇ ಈ ಎಲ್ಲಾ ದುರವಸ್ಥೆಯ ಮೂಲವೆಂದು ಪ್ರಕರಣವನ್ನು ಅವರು ಸರಿಯಾಗಿ ನಿರ್ವಹಿಸದೇ ಬೇಜವಾಬ್ದಾರಿ ತೋರಿದ್ದೇ ಅನ್ಯಾಯಕ್ಕೆ ಕಾರಣವೆಂದೂ ದಿನಕ್ಕೊಂದು ಬೀದಿನಾಟಕ ಶುರುಪಿಟ್ಟಿದ್ದಾರೆ. ಕನ್ನಡಿಗರ ಮೂಲಕವೇ ಆಯ್ಕೆಯಾಗಿ ಕೇಂದ್ರ ಮಂತ್ರಿಯೂ ಆದ ನಿರ್ಮಲಾ ಸೀತಾರಾಮನ್ ಇದಕ್ಕೆ ಪ್ರಧಾನಿಯನ್ನೇಕೆ ಎಳೆಯುತ್ತೀರಿ? ಎಂದು ಸಿಡುಕಿದ್ದು ಆಗಿದೆ. ಮುಖ್ಯಮಂತ್ರಿ ಸಿದ್ದು ಕೈಗಡಿಯಾರದಂಥ ಕ್ಷುಲ್ಲಕ ವಿಷಯಕ್ಕೆ ಸಿಬಿಐ ತನಿಖೆಗೆ ಒತ್ತಾಯಿಸಿ ಪಾರ್ಲಿಮೆಂಟ್‌ನ ಮುಂದೆ ಪ್ರತಿಭಟಿಸಿದ ಬಿಜೆಪಿ ಸಂಸದರಿಗೆ, ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆಯನ್ನು ಸಿಬಿಐಗೆ ವಹಿಸುವಂತೆ ಅಹೋರಾತ್ರಿ ಸದನದಲ್ಲಿ ಧರಣಿ ಬಿದ್ದ ಬಿಜೆಪಿಗೆ ಇಡೀ ರಾಜ್ಯವನ್ನೇ ಅಲ್ಲಾಡಿಸಬಲ್ಲ ಕಾವೇರಿ ಅನ್ಯಾಯದ ವಿರುದ್ಧ ಮಧ್ಯಪ್ರವೇಶಿಸುವಂತೆ ತಮ್ಮದೇ ಪಕ್ಷದ ಅಧಿನಾಯಕನನ್ನು ಒತ್ತಾಯಿಸಲು ಮನಸ್ಸಿಲ್ಲ, ಧೈರ್ಯ ಸಾಲುತ್ತಿಲ್ಲ.

ಬಿಜೆಪಿಯವರ ವಾದವನ್ನೇ ಒಪ್ಪುವುದಾದರೆ:


ಸುಪ್ರೀಂಕೋರ್ಟ್‌ನಲ್ಲಿರುವ ಕಾವೇರಿ ವಿವಾದಕ್ಕೆ ಪ್ರಧಾನಿ ತಾನೇ ಏನು ಮಾಡಲು ಸಾಧ್ಯ? ಎಂಬ ಪ್ರಶ್ನೆಯ ಮೂಲವನ್ನೇ ಕೆದಕಿದರೆ ಅನ್ಯಾಯದ ತೀರ್ಪಿಗೂ ಬಿಜೆಪಿ, ಸಂಘ ಪರಿವಾರಗಳಿಗೂ ಯಾವುದೋ ಬಾದರಾಯಣ ಸಂಬಂಧದ ವಾಸನೆ ಹೊಡೆಯುತ್ತದೆ. ಸುಪ್ರೀಂಕೋರ್ಟ್ ದ್ವಿಪೀಠದ ಇಬ್ಬರು ನ್ಯಾಯಮೂರ್ತಿಗಳ ಪೈಕಿ ಒಬ್ಬರು ದೀಪಕ್ ಮಿಶ್ರಾ ಮತ್ತೊಬ್ಬರು ಉದಯ್ ಲಲಿತ್. ವಾರದ ಹಿಂದಷ್ಟೇ ಬೆಂಗಳೂರಿನ ವಕೀಲರ ಸಂಘದ ವಿಶೇಷ ಸಭೆಯಲ್ಲಿ ನ್ಯಾಯಮೂರ್ತಿ ಉದಯ್ ಲಲಿತ್ ವಿರುದ್ಧ ಸಾಮೂಹಿಕ ಆಕ್ರೋಶ ವ್ಯಕ್ತವಾಯಿತು. ಅದಕ್ಕೆ ಕಾರಣ ಉದಯ್ ಲಲಿತ್‌ರ ವಕೀಲಕೆಯ ಹಿನ್ನೆಲೆ ಮತ್ತು ಅವರಿಗೂ ಸಂಘ ಪರಿವಾರಕ್ಕೂ ಏರ್ಪಟ್ಟ ನಂಟು.

ತಂದೆ ಉಮೇಶ್ ಲಲಿತ್

ಜಸ್ಟೀಸ್ ಉದಯ್ ಲಲಿತ್ ಮೂಲತಃ ಮಹಾರಾಷ್ಟ್ರದ ಪುಣೆಯವರು. ಜಾತಿಯಿಂದ ದೇಶಸ್ಥ ಬ್ರಾಹ್ಮಣರು. ಇವರ ಪತ್ನಿ ಬೆಳಗಾವಿ ಪಕ್ಕದ ಚಿಕ್ಕೋಡಿಯ ಮರಾಠಿ ಕುಟುಂಬವೊಂದಕ್ಕೆ ಸಂಬಂಧಪಟ್ಟವರೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಬೆಳಗಾವಿಯ ಮರಾಠಿಗರ ಪರವಿರುವುದರಿಂದಲೇ ಅವರಿಗೆ ಕನ್ನಡಿಗರ ಮೇಲೆ ಸಿಟ್ಟೆಂದು ಭಾವಿಸಬೇಕಿಲ್ಲ. ಸುಪ್ರೀಂಕೋರ್ಟಿನ ವಕೀಲರಾಗಿದ್ದ ಉದಯ್ ಲಲಿತ್ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾಗಿದ್ದು 2014 ರ ಆಗಸ್ಟ್ 13 ರಂದು. ಅದಕ್ಕೂ ಮುನ್ನ 2 ಜಿ ಸ್ಪೆಕ್ಟ್ರಂ ಹಗರಣದಲ್ಲಿ ಸಿಬಿಐ ಪರ ವಕೀಲರಾಗಿ ಡಿಎಂಕೆ ನಾಯಕ ಕರುಣಾನಿಧಿ ಮಗಳು ಕನ್ನಿಮೋಳಿ ಮತ್ತು ಕೇಂದ್ರ ಮಂತ್ರಿಯಾಗಿದ್ದ ರಾಜಾರನ್ನು ಜೈಲುಪಾಲು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಇದೇ ಉದಯ್ ಲಲಿತ್.



ಉದಯ್ ಲಲಿತ್



ದೀಪಕ್ ಮಿಶ್ರಾ

ಇದಕ್ಕೂ ಮುನ್ನ ಕೃಷ್ಣಾ ನದಿ ನೀರಿನ ವಿವಾದದಲ್ಲಿ ಮಹಾರಾಷ್ಟ್ರದ ಪರ ಅಂದರೆ ಕರ್ನಾಟಕದ ವಿರುದ್ಧ ವಕಾಲತ್ತು ವಹಿಸಿದ್ದ ಉದಯ್ ಲಲಿತ್ ಸುಪ್ರೀಂಕೋರ್ಟ್‌ನಲ್ಲಿ ಜಯಲಲಿತಾ ಪಾಲಿನ ಖಾಯಂ ವಕೀಲರಾಗಿದ್ದವರು. ಅಕ್ರಮ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹಲವಾರು ಪ್ರಕರಣಗಳಲ್ಲಿ ಜಯಲಲಿತಾ ಪರ ವಹಿಸಿದ್ದ ಉದಯ್ ಲಲಿತ್ ಸಹಜವಾಗೇ ಕರ್ನಾಟಕದ ವಿರುದ್ಧ ಕಾವೇರಿ ವಿವಾದದ ಬಗ್ಗೆ ಹೇಗೆ ತಾನೇ ನಿಷ್ಪಕ್ಷಪಾತವಾಗಿರಲು ಸಾಧ್ಯ? ಇದು ಕರ್ನಾಟಕದ ಅನೇಕ ವಕೀಲರ ಪ್ರಶ್ನೆಯಷ್ಟೇ ಅಲ್ಲ; ನ್ಯಾಯಾಂಗ ವಲಯದಲ್ಲಿ ಪ್ರತಿಯೊಬ್ಬರನ್ನೂ ಕಾಡಲೇಬೇಕಾದ ಪ್ರಶ್ನೆ ಕೂಡ. ಉದಯ್ ಲಲಿತ್ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಾಗ ಬಹುತೇಕ ವಕೀಲರೆಲ್ಲ ಹುಬ್ಬೇರಿಸಿದ್ದು ಅವರ ಆರೆಸ್ಸೆಸ್ ನೆಂಟಸ್ತಿಕೆಯ ಬಗ್ಗೆಯೇ. ಅದಕ್ಕೆ ಮೂಲ ಕಾರಣ ಉದಯ್ ಲಲಿತ್‌ರ ತಂದೆ ಉಮೇಶ್ ಆರ್ ಲಲಿತ್‌ರ ಆರೆಸ್ಸೆಸ್ ನಂಟು.

ತಂದೆ ಉಮೇಶ್ ಲಲಿತ್ ಮುಂಬಯಿ ಹೈಕೋರ್ಟಿನಲ್ಲಿ ಹೆಚ್ಚುವರಿ ನ್ಯಾಯಮೂರ್ತಿಯಾಗಿದ್ದವರು. ನಿವೃತ್ತಿಯಾದ ಮೇಲೆ ಮತ್ತೆ ವಕೀಲಿಕೆಗಿಳಿದ ಉಮೇಶ್ ಲಲಿತ್ ಹೇಳಿಕೇಳಿ ಪಕ್ಕಾ ಆರೆಸ್ಸೆಸ್. ವಕೀಲರ ಮಟ್ಟಿಗೆ ಆರೆಸ್ಸೆಸ್‌ನ ವೇದಿಕೆಯಂತಿರುವ ಅಖಿಲ ಭಾರತೀಯ ಅಭಿಯೋಜಿತಾ ಪರಿಷತ್‌ನ ಮಂಚೂಣಿಯ ನಾಯಕರಲ್ಲೊಬ್ಬರಾದ ಉಮೇಶ್ ಲಲಿತ್ ಪ್ರತಿ ಗುರುಪೂರ್ಣಿಮೆಯೆಂದು ಸಂಘ ಪರಿವಾರದಲ್ಲಿ ನಡೆಯುವ 'ಗುರುದಕ್ಷಿಣಾ ಸಮಿತಿ' ಅಂದರೆ ಗುರುದಕ್ಷಿಣೆಯೆಂದು ಯಾರ್ಯಾರಿಂದ ಎಷ್ಟೆಷ್ಟು ನಿಧಿ ಪೀಕಬೇಕೆಂಬುದನ್ನು ನಿರ್ಧರಿಸುವ ಸಂಘ ಸಂಯೋಜಕ.

ಆರೆಸ್ಸೆಸ್ ಕಟ್ಟಾಳುಗಳು

ಮಹಾರಾಷ್ಟ್ರದ ನಾಗಪುರದಿಂದ ಹಿಡಿದು ಸೊಲ್ಲಾಪುರದವರೆಗಿನ ಆರೆಸ್ಸೆಸ್ ವಲಯದಲ್ಲಿ ಉದಯ್ ಲಲಿತ್‌ರ ತಂದೆ ಉಮೇಶ್ ಲಲಿತ್‌ಗೆ ದೊಡ್ಡ ಹೆಸರಿದೆ. ಆತ ಮಹಾರಾಷ್ಟ್ರದ ಸಂಘ ಪರಿವಾರದ ಪ್ರಭಾವಿ ನಾಯಕರಲ್ಲೊಬ್ಬ. ಈತ ಲಾಯರ್‌ಗಿರಿಯನ್ನು ಬಿಟ್ಟು ಹೆಚ್ಚೂಕಮ್ಮಿ ದಶಕವೇ ಕಳೆದಿರಬೇಕು. ವಿಪರ್ಯಾಸವೆಂದರೆ, ತೀರ ಇತ್ತೀಚೆಗೆ ರಾಹುಲ್ ಗಾಂಧಿ ಮಹಾತ್ಮ ಗಾಂಧೀಜಿಯವರನ್ನು ಕೊಂದಿದ್ದು ಆರೆಸ್ಸೆಸ್ಸೇ.... ಎಂದು ಕೊಟ್ಟ ಹೇಳಿಕೆಯ ವಿರುದ್ಧ ಸಂಘ ಪರಿವಾರ ಕೋರ್ಟ್ ಮೆಟ್ಟಿಲೇರಿತ್ತಲ್ಲ; ಆಗ ಆರೆಸ್ಸೆಸ್ ಪರವಾಗಿ ರಾಹುಲ್ ಗಾಂಧಿ ವಿರುದ್ಧ ವಕಾಲತ್ತು ಹಾಕಿದ್ದು ಇದೇ ಉಮೇಶ್ ಲಲಿತ್!

ಇದರರ್ಥ ಮಗ ವಕೀಲಿಕೆಗಿಳಿದ ನಂತರ ಹೆಚ್ಚೂಕಮ್ಮಿ ನಿವೃತ್ತಿ ಘೋಷಿಸಿ ಸಂಘ ಪರಿವಾರದ ವೇದಿಕೆಗಳಲ್ಲಷ್ಟೇ ಕಾಣಿಸಿಕೊಳ್ಳುತ್ತಿದ್ದ ಉಮೇಶ್ ಲಲಿತ್ ಗಾಂಧಿಯನ್ನು ಕೊಂದಿದ್ದೇ ಆರೆಸ್ಸೆಸ್ ಎಂಬ ರಾಹುಲ್ ಗಾಂಧಿಯ ಹೇಳಿಕೆಯ ವಿರುದ್ಧ ಈ ವಯಸ್ಸಲ್ಲಿ ಕರಿಕೋಟು ತೊಟ್ಟು ಕೋರ್ಟಿಗೆ ಹಾಜರಾಗುವಂಥ ಕಟ್ಟಾ ಸಂಘನಿಷ್ಠ. ಅಪ್ಪ ಉಮೇಶ್ ಲಲಿತ್ ಮತ್ತು ಮಗ ಉದಯ್ ಲಲಿತ್‌ರ ಹೆಸರು ಇದಕ್ಕಿಂತಲೂ ದೊಡ್ಡ ಮಟ್ಟದಲ್ಲಿ ಕೇಳಿಬಂದದ್ದು ಗುಜರಾತ್‌ನ ಸೊಹ್ರಾಬುದ್ದೀನ್ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ. ಆಗ ಮೋದಿ ಗುಜರಾತ್‌ನ ಮುಖ್ಯಮಂತ್ರಿ. ಸೊಹ್ರಾಬುದ್ದೀನ್ ಹತ್ಯೆ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಮೋದಿ ಬಲಗೈ ಬಂಟನಂತಿದ್ದ ಅಮಿತ್ ಷಾನನ್ನು ಪ್ರಮುಖ ಆರೋಪಿಯನ್ನಾಗಿಸಿ ಎಫ್‌ಐಆರ್ ದಾಖಲಿಸುವಂತೆ ಆದೇಶ ನೀಡಿದಾಗ ಅಮಿತ್ ಷಾ ಪರವಾಗಿ ವಕೀಲಿಕೆಗಿಳಿದವರು ಉದಯ್ ಲಲಿತ್.

ಅದೇನಾಯಿತೋ, ಒಂದು ಹಂತದವರೆಗೆ ಅಮಿತ್ ಷಾ ಪರವಾಗಿ ವಕಾಲತ್ತಿಗಿಳಿದಿದ್ದ ಉದಯ್ ಲಲಿತ್ ಕಾಲಕ್ರಮೇಣ ತನ್ನ ತಂದೆಯನ್ನು ಮುಂದೆ ಬಿಟ್ಟು ತಾವು ತೆರೆಮರೆಯಲ್ಲಿದ್ದು ಕೇಸಿಗೆ ನೆರವಾಗತೊಡಗಿದರು. ಅಂತಿಮವಾಗಿ ಬಿಜೆಪಿ ಅಧಿಕಾರಕ್ಕೆ ಬಂದನಂತರವೇ ಸೊಹ್ರಾಬುದ್ದೀನ್ ಹತ್ಯೆ ಪ್ರಕರಣದಿಂದ ಅಮಿತ್ ಷಾ ಖುಲಾಸೆಯಾಗಿದ್ದು, 2005 ರಲ್ಲಿ ಅಮಿತ್ ಷಾ ಮತ್ತು ಉದಯ್ ಲಲಿತ್ ಸೊಹ್ರಾಬುದ್ದೀನ್ ಕೊಲೆ ಕೇಸಿಗಾಗಿ ಹೆಣಗಾಡಿದ ಬಗ್ಗೆ ಇವತ್ತಿಗೂ ಸಾಕ್ಷ್ಯಾಧಾರಗಳು ಲಭ್ಯ.

ಇದು ಕಾವೇರಿ ಅನ್ಯಾಯಕ್ಕೆ ಕಾರಣರಾದ ನ್ಯಾಯಮೂರ್ತಿ ಉದಯ್ ಲಲಿತ್ ಮತ್ತವರ ತಂದೆ ಉಮೇಶ್ ಲಲಿತ್ ಹಾಗೂ ಆರೆಸ್ಸೆಸ್ ನೆಂಟಸ್ತಿಕೆಗೆ ಸ್ಯಾಂಪಲ್ಲು ಮಾತ್ರ. ಇದೇವೇಳೆ ಉದಯ್ ಲಲಿತ್ ಸುಪ್ರೀಂಕೋರ್ಟ್‌ನಲ್ಲಿ ಜಯಲಲಿತಾ ಪರವಾಗಿ ವಕಾಲತ್ತು ವಹಿಸಿದ ಅನೇಕ ನಿದರ್ಶನಗಳಿವೆ. ಇನ್ನೂ ವಿಶೇಷವೆಂದರೆ ನಮ್ಮ ಯಡಿಯೂರಪ್ಪ ಪರವಾಗಿ ಸುಪ್ರೀಂಕೋರ್ಟ್‌ಗೆ ಬರುತ್ತಿದ್ದದ್ದೂ ಇದೇ ಉದಯ್ ಲಲಿತ್. ಗಣಿಲಂಚದ ಆರೋಪ ಹೊತ್ತು ಯಡ್ಡಿ ಜೈಲುಪಾಲಾದಾಗ ಇದರ ವಿಚಾರಣೆಯನ್ನೇ squash ಮಾಡಲು ಕೋರಿ ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ್ದೂ ಇದೇ ಉದಯ್ ಲಲಿತ್.

ಬೆತ್ತಲಾದ ಚೆಡ್ಡಿ ತಂತ್ರ

ಅಂದರೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಉದಯ್ ಲಲಿತ್ ಹೇಳಿಕೇಳಿ ಬಿಜೆಪಿಯ ರಕ್ತಸಂಬಂಧಿ ಮತ್ತು ಜಯಲಲಿತಾ ಪಕ್ಷಪಾತಿಯೆಂಬ ಬಗ್ಗೆ ಪುರಾವೆಗಳಿಲ್ಲದಿಲ್ಲ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಮೋದಿ ಪ್ರಧಾನಿಯಾದ ಮೇಲಂತೂ ತೀರ ಅಪರೂಪದ ವಿಶೇಷ ಪ್ರಕರಣವೆಂಬಂತೆ, ಉದಯ್ ಲಲಿತ್‌ರನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿಸಲಾಯ್ತು. ಸಾಮಾನ್ಯವಾಗಿ ಆಯಾ ರಾಜ್ಯಗಳ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದವರನ್ನಷ್ಟೇ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸುವುದು ವಾಡಿಕೆ. ಆದರೆ ಮೋದಿ ಪ್ರಧಾನಿಯಾದ ಮೂರೇ ತಿಂಗಳಿಗೆ ಸುಪ್ರೀಂಕೋರ್ಟ್‌ನಲ್ಲಿ ವಕೀಲಿಕೆ ಮಾಡಿಕೊಂಡಿದ್ದ ಉದಯ್ ಲಲಿತ್‌ರನ್ನು special elevation ಅಂದರೆ ಅಪರೂಪವೆಂಬಂತೆ ಸುಪ್ರೀಂಕೋರ್ಟ್ ನ್ಯಾಮೂ. ಹುದ್ದೆಗೆ ಪರಿಗಣಿಸಲಾಯ್ತು.

ಉದಯ್ ಲಲಿತ್‌ರ ಆರೆಸ್ಸೆಸ್ ರಕ್ತಸಂಬಂಧ ಬಯಲಾಗಿದ್ದೇ ಆಗ. ರಾಜ್ಯ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳನ್ನೆಲ್ಲ ಬದಿಗಿಟ್ಟು ವಕೀಲರೊಬ್ಬರನ್ನು ಸುಪ್ರೀಂಕೋರ್ಟ್ ನ್ಯಾಮೂ. ಮಾಡಬೇಕೆಂದರೆ ಆತ ರಾಮ್‌ಜೇಠ್ಮಲಾನಿ, ಸೋಲಿ ಸೊರಾಬ್ಜಿ, ಫಾಲಿ ನಾರಿಮನ್... ಸಾಲಿಗೆ ಸೇರಬಲ್ಲ ಅಪ್ರತಿಮ ಪ್ರತಿಭಾವಂತನಾಗಿರಬೇಕು. ಪಕ್ಷಾತೀತನಾಗಿರಬೇಕು, ಅಸಾಧಾರಣ ಕಾನೂನು ಪಾಂಡಿತ್ಯವಿರಬೇಕು. ಇದ್ಯಾವುದೂ ಇಲ್ಲದ ಉದಯ್ ಲಲಿತ್‌ಗೆ ಇದ್ದ ಏಕೈಕ ಅರ್ಹತೆಯೇ ತಂದೆ ಉಮೇಶ್ ಲಲಿತ್‌ರ ಆರೆಸ್ಸೆಸ್ ನೆಂಟಸ್ತಿಕೆಯಷ್ಟೇ. ಮೊದಲೇ ಸಂಗಿ ಎಂದಮೇಲೆ ಸಹಜವಾಗೇ ಕಾಂಗ್ರೆಸ್ ವಿರುದ್ಧ ಅಸಹನೆಯಿರಲೇಬೇಕಲ್ಲವೇ?


ಒಂದೆಡೆ ಜಯಲಲಿತಾ ಜೊತೆ ವಕಾಲತ್ತು ನಂಟು ಮತ್ತೊಂದೆಡೆ ಬಿಜೆಪಿ, ಆರೆಸ್ಸೆಸ್ ಋಣಭಾರ್ಯ. ಕಾವೇರಿ ಮೇಲುಸ್ತುವಾರಿ ಸಮಿತಿಯೇ ಮೂರು ಸಾವಿರ ಕ್ಯೂಸೆಕ್ಸ್ ಸಾಕೆಂದು ವರದಿ ಕೊಟ್ಟರೆ ಸುಪ್ರೀಂಕೋರ್ಟ್ ಹಠಕ್ಕೆ ಬಿದ್ದಂತೆ ಪ್ರತಿನಿತ್ಯ ಆರು ಸಾವಿರ ಕ್ಯೂಸೆಕ್ಸ್ ಕೊಡಲೇಬೇಕೆಂದು ಮಕ್ಕಳಾಟಿಕೆ ಮಾಡುತ್ತದೆಯೆಂದರೆ, ತಮಿಳುನಾಡಿನ ಹೊರತಾಗಿ ಕೇರಳ, ಕರ್ನಾಟಕ, ಪುದುಚೇರಿ ರಾಜ್ಯಗಳ್ಯಾರೂ ಕೇಳದೇಹೋದರೂ ಏಕಪಕ್ಷೀಯವಾಗಿ ಕಾವೇರಿ ನಿರ್ವಹಣಾ ಮಂಡಳಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಗಡುವು ನೀಡುತ್ತದೆಯೆಂದರೆ; ಅದಕ್ಕಿರುವ ಕಾರಣ ಕಾಂಗ್ರೆಸ್ ಸರ್ಕಾರವೊಂದರ ವಿರುದ್ಧ ಬಿಜೆಪಿಗಿರುವ ಅಸೂಯೆ, ಮೋದಿ ಜೊತೆಗಿನ ಜಯಲಲಿತಾ ದೋಸ್ತಿ. ಅಂದರೆ ಬಿಜೆಪಿ ಮತ್ತು ಅಣ್ಣಾಡಿಎಂಕೆಗಳ ರಾಜಕೀಯ ಕಣ್ಣಾಮುಚ್ಚಾಲೆಯೇ ಹೊರತು ಬೇರೇನಲ್ಲ.

ಕಾವೇರಿ ಅನ್ಯಾಯದ ಹಿಂದಿರುವುದು ಬಿಜೆಪಿಯ ಕಾಂಗ್ರೆಸ್ ವೈಷಮ್ಯವೆಂಬುದಕ್ಕೆ ಇದಕ್ಕಿಂತ ಬೇಕೇ? ದುರಂತವೆಂದರೆ ಕ್ಷುಲ್ಲಕ ವಿಷಯಗಳಿಗೆ ಬೀದಿಗಿಳಿದು ಬೊಬ್ಬೆ ಹಾಕುವ ಬಿಜೆಪಿಗೆ ಕಾವೇರಿ ಅನ್ಯಾಯವೊಂದು ರಾಜಕೀಯದ ಆಟಿಕೆಯಷ್ಟೇ. ಪ್ರಧಾನಿ ಮೋದಿಯೇಕೆ ಮಧ್ಯಪ್ರವೇಶಿಸಬೇಕೆಂದು ಇವರೇ ಕನ್ನಡಿಗರ ವಿರುದ್ಧ ಕತ್ತಿ ಮಸೆಯುತ್ತಾರೆ. ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲರೇ ಸರ್ವಪಕ್ಷಗಳ ಸಮನ್ವಯ ಸಮಿತಿ ರಚಿಸಹೊರಟರೆ ಅದಕ್ಕೆ ಬಹಿಷ್ಕಾರ ಹಾಕುತ್ತಾರೆ. ಏಕೆಂದರೆ ಕಾವೇರಿ ಜಲಾನಯನದ ಪ್ರದೇಶದಲ್ಲೆಲ್ಲೂ ಬಿಜೆಪಿಗೆ ಜನ ಓಟು ಕೊಡುವುದಿಲ್ಲವಲ್ಲ! ಊರ ಮೇಲೆ ಊರು ಬಿದ್ದರೆ ಶಾನುಭೋಗನ..... ಕ್ಯೇನೆಂಬಂತೆ ಬಿಜೆಪಿಗೆ ಬೇಕಿರುವುದು ಟಿಪ್ಪು, ವಾಚು, ಗಣಪತಿ ಆತ್ಮಹತ್ಯೆಯಂಥ ಚಿಲ್ಲರೆ ವಿಷಯಗಳೇ ಹೊರತು ಕನ್ನಡಿಗರ ಜೀವನಾಡಿ ಕಾವೇರಿಯಲ್ಲ!

■ ರಾ.ಸೋಮನಾಥ್

ಆಂಧ್ರಾ- ತೆಲಂಗಾಣ ಸಿಎಂಗಳ ಸಭೆ ಕರೆಯಬಹುದಾದರೆ

ಕಾವೇರಿಗೇಕೆ ಮೋದಿ ಅಸಡ್ಡೆ?



ಕಾವೇರಿ ಅನ್ಯಾಯದ ವಿರುದ್ಧ ಮೋದಿ ಸರ್ಕಾರಕ್ಕಿರುವ ಕಾಳಜಿ ಮತ್ತು ಜವಾಬ್ದಾರಿ ಎಂಥಾ ಮೋಸದ್ದೆಂಬುದಕ್ಕೆ ಆಂಧ್ರ ಮತ್ತು ತೆಲಂಗಾಣಗಳ ನಡುವಿನ ಕೃಷ್ಣಾ ಜಲವಿವಾದದಲ್ಲಿ ಕೇಂದ್ರ ಜಲಸಂಪನ್ಮೂಲ ಸಚಿವೆ ಉಮಾಭಾರತಿ ಅತೀವ ಆಸಕ್ತಿಯೇ ಪುರಾವೆಯಂತಿದೆ.

ಸೆಪ್ಟೆಂಬರ್ 21 ಕ್ಕೆ ಆಂಧ್ರಾ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ತೆಲಂಗಾಣದ ಸಿಎಂ ಚಂದ್ರಶೇಖರ್ ರಾವ್‌ರನ್ನು ಕೂರಿಸಿಕೊಂಡು ಕೇಂದ್ರ ಜಲಸಂಪನ್ಮೂಲ ಸಚಿವೆ ಉಮಾಭಾರತಿ ಹೈದರಾಬಾದಿನಲ್ಲಿ ತುರ್ತು ಸಭೆ ನಿಗದಿಪಡಿಸಿದ್ದರು. ತೆಲಂಗಾಣ ಮತ್ತು ಆಂಧ್ರಾಗಳ ನಡುವೆ ಕಾವೇರಿಯಂತೆ ಕೃಷ್ಣಾ ನೀರು ಹಂಚಿಕೆ ವಿವಾದವಿದೆ. ಕಳೆದ ವರ್ಷವಷ್ಟೇ ನಾಗಾರ್ಜುನ ಸಾಗರ ಅಣೆಕಟ್ಟೆಯ ಗೇಟುಗಳನ್ನು ತೆರೆಯುವ ವಿಷಯವಾಗಿ ಆಂಧ್ರಾ ಹಾಗೂ ತೆಲಂಗಾಣ ಪೊಲೀಸರ ಮಧ್ಯೆ ಹೊಡೆದಾಟವೇ ನಡೆಯಿತು. ಇದನ್ನು ಪರಿಗಣಿಸಿಯೇ ಸುಪ್ರೀಂಕೋರ್ಟ್ ಪ್ರಕರಣ ಹಿಂಸಾತ್ಮಕ ಹಂತ ತಲುಪುವ ಮೊದಲೇ ಮಧ್ಯಸ್ಥಿಕೆ ವಹಿಸಿ ಬಗೆಹರಿಸುವಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಿತ್ತು.

ಕರ್ನಾಟಕ ಮತ್ತು ತಮಿಳುನಾಡಿನದ್ದು ಇದಕ್ಕಿಂತಲೂ ಗಂಭೀರವಾದ, ತೀವ್ರವಾದ ಉದ್ವಿಗ್ನ ಸ್ಥಿತಿ. ರಾಜ್ಯಗಳೇ ಹೊತ್ತಿ ಉರಿಯುತ್ತಿದ್ದರೂ ಕಾವೇರಿ ಬಗ್ಗೆ ಕೇಂದ್ರ ಸರ್ಕಾರಕ್ಕಿಲ್ಲದ ಮುತುವರ್ಜಿ ಅಷ್ಟೇನೂ ಗಂಭೀರವಲ್ಲದ ಕೃಷ್ಣಾ ನದಿಯ ಹಂಚಿಕೆ ವಿಷಯದಲ್ಲಿ ವಿಶಾಪಕಿ ಸಲ್ಲದ ಮಹತ್ವ ಪಡೆದುಕೊಳ್ಳುತ್ತದೆ. ಸೆಪ್ಟೆಂಬರ್ 20ರ ಸೋಮವಾರವೂ ಕರ್ನಾಟಕ ಹೊತ್ತಿ ಉರಿಯುವ ಸಾಧ್ಯತೆಯಿತ್ತಲ್ಲವೇ? ಉಮಾ ಭಾರತಿಗೇಕೆ ಇದು ಮುಖ್ಯವಾಗಲಿಲ್ಲ? ಆಂಧ್ರಾ ಮತ್ತು ತೆಲಂಗಾಣದ ಮುಖ್ಯಮಂತ್ರಿಗಳಿಬ್ಬರನ್ನೂ ಒಟ್ಟಿಗೆ ಕೂರಿಸಬಲ್ಲ ಉಮಾಭಾರತಿಗೆ ತಮಿಳುನಾಡು -ಕರ್ನಾಟಕದ ಮುಖ್ಯಮಂತ್ರಿಗಳನ್ನು ಮುಖಾಮುಖಿಯಾಗಿಸುವುದೇನೂ ಕಷ್ಟವಿರಲಿಲ್ಲವೇ?

ಹಾಗೆಯೇ ಛತ್ತೀಸ್‌ಗಢ ಮತ್ತು ಜಾರ್ಖಂಡ್ ಮುಖ್ಯಮಂತ್ರಿಗಳನ್ನು ಕೂರಿಸಿ ಉಮಾಭಾರತಿ ವಿವಾದ ಬಗೆಹರಿಸುತ್ತಾರೆಂದರೆ ಕಾವೇರಿ ವಿಷಯದಲ್ಲಿ ಮಾತ್ರ ಜಾಣನಿದ್ರೆಯೇ ಅಥವಾ ಮೋದಿ ತಂತ್ರವೇ? ಪ್ರಧಾನಿ ಮಧ್ಯಸ್ಥಿಕೆ ಬೇಕಿಲ್ಲವೆನ್ನುವ ರಾಜ್ಯ ಬಿಜೆಪಿ ನಾಯಕರಿಗಿದು ಗೊತ್ತಾಗುತ್ತಿಲ್ಲವೋ ಅಥವಾ ಬೇಕಿಲ್ಲವೋ?

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಕಾವೇರಿ ತೀರ್ಪು
ಗಾಯದ ಮೇಲೆ ಬರೆ

ಡಾ. ಎಚ್.ವಿ. ವಾಸು




ಕಾವೇರಿ ವಿಚಾರದಲ್ಲಿ ಬೀದಿಯಲ್ಲಿ ಹತ್ತು ಹಲವು ಬಗೆಯಲ್ಲಿ ಪ್ರತಿಭಟನೆ ಮಾಡುತ್ತಿರುವವರು ಒಂದು ವೇಳೆ ಅಪ್ರಬುದ್ಧತೆಯಿಂದ ವರ್ತಿಸಿದರೆ ಅದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತವರು ಬೇಜವಾಬ್ದಾರಿಯಿಂದಲೂ, ನ್ಯಾಯಬಾಹಿರವಾಗಿಯೂ, ಸಂವಿಧಾನಬಾಹಿರವಾಗಿಯೂ ನಡೆದುಕೊಂಡರೆ ಅದನ್ನು ತಿರಸ್ಕರಿಸದೇ ಬೇರೆ ದಾರಿಯಿಲ್ಲ. ಪರಿಸ್ಥಿತಿ ಹೀಗಿರುವಾಗ ಮಧ್ಯಪ್ರವೇಶಿಸಿ ಬಗೆಹರಿಸಲು ಮುಂದಾಗಬೇಕಾದ ಕೇಂದ್ರ ಸರ್ಕಾರವು ಬೆಂಕಿ ಹತ್ತಿಕೊಂಡಷ್ಟೂ ಒಳ್ಳೆಯದು ಎಂದು ಭಾವಿಸಿದಂತಿದೆ. ಹೀಗಾಗಿ ಜನಪರವಾಗಿ ಆಲೋಚಿಸುವ, ಹೋರಾಡುವ ಎಲ್ಲರೂ ಸುಪ್ರೀಂಕೋರ್ಟಿನ ನಡೆಯನ್ನು ತಾರ್ಕಿಕವಾಗಿ ಒರೆಹಚ್ಚಿ ನೋಡುವ ಮತ್ತು ಮುಂದೇನು ಎಂಬುದರ ಕುರಿತು ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆಯಿದೆ.

ಈ ಸಾರಿಯ ಬೀದಿ ಹೋರಾಟದ ಪ್ರಯೋಜನ ಆಗುವುದು ನಗರಗಳ ಜನರಿಗೇ ಹೊರತು ರೈತರಿಗಲ್ಲ

ಮಂಡ್ಯ, ಬೆಂಗಳೂರು, ಮೈಸೂರು ಮತ್ತಿತರೆಡೆ ಜನರು ತಮಗೆ ತೋಚಿದ ರೀತಿಯಲ್ಲಿ ಪ್ರತಿಭಟಿಸುತ್ತಿದ್ದಾರೆ. ಇದನ್ನು ಕೇವಲ ಮನರಂಜನೆ ಎಂಬಂತೆ ನೋಡುತ್ತಿರುವವರು ಒಂದು ವಿಷಯವನ್ನು ಮರೆಯುತ್ತಿದ್ದಾರೆ. ಸೆ.2ರಂದು 'ನೀವೂ ಬದುಕಿ, ಬದುಕಲು ಬಿಡಿ' ಎಂದು ಸುಪ್ರೀಂಕೋರ್ಟಿನ ನ್ಯಾಯಾಧೀಶರು ಹೇಳಿದ ದಿನವೇ ಒಂದು ವಿಚಾರ ಸ್ಪಷ್ಟವಿತ್ತು, 'ಇನ್ನು ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರಿಗೆ ಈ ಸಾರಿಯ ಬೆಳೆಗೆ ನೀರಿಲ್ಲ' ಎಂದು. ಹಾಗಾಗಿ ಈ ಇಡೀ ಅವಧಿಯಲ್ಲಿ ನಡೆದ, ನಡೆಯುತ್ತಿರುವ ಹೋರಾಟ ಏನಿದ್ದರೂ, ಅದು ಬೆಂಗಳೂರು ಮತ್ತಿತರ ನಗರಗಳಿಗೆ 'ಕುಡಿಯುವ ನೀರ'ನ್ನು ಉಳಿಸಿಕೊಳ್ಳಲು ನಡೆಯುತ್ತಿರುವ ಹೋರಾಟವೇ ಆಗಿದೆ. ಈ ನೀರು ಸಾಮಾನ್ಯ ನಾಗರಿಕರು ಕುಡಿಯಲು ಬಳಸುವ ನೀರು ಮಾತ್ರ ಅಲ್ಲ, ಈ ನಗರಗಳಲ್ಲಿರುವ ಹಲವು ಕೈಗಾರಿಕೆಗಳಿಗೆ ಜೀವಜಲವೂ ಆಗಿದೆ, ಅವುಗಳ ಮಾಲೀಕರ ಲಾಭ ಹೆಚ್ಚಿಸಲೂ ನೀರು ಬೇಕು. ಅಂತಹ ಉದ್ದಿಮೆಗಳು ಮತ್ತಿತರ ಸಂಸ್ಥೆಗಳ ಸಿಬ್ಬಂದಿ ವರ್ಗವೂ ಇದರಿಂದ ಉಪಕೃತವಾಗುತ್ತಿದೆ.

ಬೀದಿಯಲ್ಲಿ ಚಿತ್ರವಿಚಿತ್ರವಾಗಿ ಕಾಣುತ್ತಿರುವ 'ಹೋರಾಟಗಾರ'ರಿಗೆ ಸ್ವಹಿತಾಸಕ್ತಿ ಇದೆ ಎಂದೇ ಇಟ್ಟುಕೊಳ್ಳೋಣ. ಆದರ ಫಲಾನುಭವಿಗಳು ಮಾತ್ರ ಈ ಎಲ್ಲಾ ಜನವರ್ಗಗಳೂ ಆಗಿವೆ. ಹಾಗಾಗಿ ಈ



ಹೋರಾಟಗಾರರ ಚಳವಳಿಯ ರೂಪ ಏನೇ ಇದ್ದರೂ, ಅದು ನಾಡಿನ ಹಿತಾಸಕ್ತಿಯ ಅಭಿವ್ಯಕ್ತಿಯೇ ಆಗಿದೆ. ಇಂತಹ ಹೋರಾಟದಿಂದ ಏನು ಸಾಧನೆಯಾಗುತ್ತದೆ ಎಂದು ಕೇಳುವವರೂ ಇದ್ದಾರೆ. ಹೌದು, ಸುಪ್ರೀಂಕೋರ್ಟಿನಲ್ಲಿ ವಾದ ಮಂಡಿಸುವುದೂ ಸೇರಿ ಹಲವು ಬಗೆಯ ನ್ಯಾಯಿಕ, ಸಾಂವಿಧಾನಿಕ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳೇ ಅಂತಿಮವಾಗಿ ಬೇಕಾದ್ದೋ, ಬೇಡವಾದ್ದೋ ಫಲಿತಾಂಶಗಳನ್ನು ತರುತ್ತವೆ. ಆದರೆ, ಜನಸಮುದಾಯಗಳ ಬೀದಿ ಹೋರಾಟದ ಒತ್ತಡ ಮತ್ತು ಒತ್ತಾಸೆ ಇಲ್ಲದೇ ಏನನ್ನಾದರೂ ಮಾಡುವಷ್ಟು ಸಂವೇದನಾಶೀಲವಾಗಿ ಮತ್ತು ಜನಪರವಾಗಿ ನಮ್ಮ ಸರ್ಕಾರಗಳೂ ಇಲ್ಲ; ನ್ಯಾಯಾಲಯಗಳೂ ಇಲ್ಲ, ಇದು ಪದೇಪದೇ ಸಾಬೀತಾಗಿದೆ. ಹಾಗಾಗಿ ಬೀದಿ ಹೋರಾಟಕ್ಕೆ ಎಲ್ಲರೂ ಕೃತಜ್ಞರಾಗಿರುವ ಅಗತ್ಯವಿದೆ. ತಮ್ಮದೇ ರೀತಿಯಲ್ಲಿ ಅದಕ್ಕೆ ಪೂರಕವಾಗಿ ಕೆಲಸ ಮಾಡುವುದು ಎಲ್ಲರ ಕರ್ತವ್ಯವೂ ಆಗಿದೆ. ಒಂದು ವೇಳೆ ಆ ಹೋರಾಟದ ರೂಪಗಳು ಸೂಕ್ತವಲ್ಲ ಎನಿಸಿದರೆ, ಅದಕ್ಕೆ ಪರ್ಯಾಯ ರೂಪಗಳನ್ನು ಸೂಚಿಸಿ, ತಾವೂ ಪಾಲ್ಗೊಳ್ಳುವುದೂ ಈ ಕರ್ತವ್ಯದ ಭಾಗವಾಗಿರುತ್ತದೆ.

ಇದು ಕೃಷಿ ಬಿಕ್ಕಟ್ಟಿನ ಅಭಿವ್ಯಕ್ತಿಯೂ ಹೌದು

ಸುದೀರ್ಘ ಕಾಲದಿಂದಲೂ ಬೇಸಾಯದ ಪಡಿಪಾಟಲುಗಳು ಮತ್ತು ಜಾಗತೀಕರಣ ತಂದ ಬಿಕ್ಕಟ್ಟು ಹೇಗೂ ರೈತಾಪಿಯನ್ನು ಹಿಂಡಿ ಹಾಕಿತ್ತು. ಕಳೆದ 6-7 ವರ್ಷಗಳಲ್ಲಿ ಇದು ಇನ್ನೂ ತೀವ್ರವಾಗಿದೆ. ಕಳೆದ ವರ್ಷ ರಾಜ್ಯದಲ್ಲಿ ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಅವರಲ್ಲಿ 102 ಜನರು 'ಸಮೃದ್ಧವೆಂದು ಭಾವಿಸಲಾಗುವ' ಮಂಡ್ಯ ಜಿಲ್ಲೆಯಲ್ಲೇ ಜೀವ ತೆಗೆದುಕೊಂಡದ್ದು ಈ ಬಿಕ್ಕಟ್ಟಿನ ಅಭಿವ್ಯಕ್ತಿಯಾಗಿದೆ. ಕಳೆದ ವರ್ಷವೂ ಬರವಿತ್ತು, ಅಣೆಕಟ್ಟಿನಿಂದ ಸಾಮಾನ್ಯವಾಗಿ ಹರಿಸಲಾಗುವಷ್ಟು ನೀರನ್ನೂ ಕಳೆದ ಸಾರಿ ನೀಡಿರಲಿಲ್ಲ, ಕಬ್ಬೂ ಒಣಗಿತ್ತು, ಸಕ್ಕರೆ ಕಾರ್ಖಾನೆಗಳು 2-3 ತಿಂಗಳು ತಡವಾಗಿ ಆರಂಭವಾದವು. ಮೈಷುಗರ್ ಆರಂಭವಾಗಲೇ ಇಲ್ಲ, ರೇಷ್ಮೆ, ತರಕಾರಿ, ಬಾಳೆಹಣ್ಣು ಎಲ್ಲವೂ ಬೆಲೆ ಕಳೆದುಕೊಂಡಿದ್ದವು. ಮನ್‌ಮುಲ್‌ನಿಂದ ರೈತರಿಗೆ ನೀಡುತ್ತಿದ್ದ ಹಾಲಿನ ದರವನ್ನೂ ಕಡಿಮೆ ಮಾಡಲಾಗಿತ್ತು. ಇವೆಲ್ಲದರ ಫಲವಾಗಿ ಶೇ.80ರಷ್ಟು ರೈತರು ಸಾಲ ಮಾಡಿಕೊಂಡಿದ್ದಾರೆ ಮತ್ತು ಕಳೆದೆರಡು ವರ್ಷಗಳಲ್ಲಿ ಕೃಷಿ ಆದಾಯದಿಂದ ಅದನ್ನು ತೀರಿಸಲಾಗಲಿಲ್ಲ; ಬದಲಿಗೆ ಹೊಸ ಸಾಲ ಮಾಡಿಕೊಂಡಿದ್ದಾರೆ. ಗ್ರಾಮೀಣ ಭಾಗದ ಹೋರಾಟದಲ್ಲಿ ಈ 'ಕೃಷಿ ಸಂಕಟ'ವೂ ಕಾಣುತ್ತಿದೆ.

ಅದೇ ಹೊತ್ತಿನಲ್ಲಿ ಈ ಕಾಲದ ಕೃಷಿ ಬಿಕ್ಕಟ್ಟಿನ ಇನ್ನೊಂದು ಅಂಶದ ಅಭಿವ್ಯಕ್ತಿಯನ್ನೂ ನೋಡಬಹುದು. ಅದೇನೆಂದರೆ, ಈ ಬಿಕ್ಕಟ್ಟು ಯಾವ ಮಟ್ಟಗಿನ ಸಂಕಷ್ಟವನ್ನು ರೈತರಿಗೆ ತಂದಿದೆಯೋ, ಆ ಪ್ರಮಾಣದ ಹೋರಾಟವಾಗಲೀ, ಆಕ್ರೋಶವಾಗಲೀ ನಿಜವಾಗಲೂ ಕಾಣುತ್ತಿಲ್ಲ. ಅಂದರೆ, 'ಕಾವೇರಿ ಹೋರಾಟ'ದಲ್ಲಿ ರೈತರ ಸಂಕಟವೂ ಕಾಣುತ್ತಿದೆ, ಅವರ ಅನಾಸಕ್ತಿಯೂ ಕಾಣುತ್ತಿದೆ. ಏನು ಮಾಡಿದರೂ ಏನೂ ಪ್ರಯೋಜನವಾಗದು ಎಂಬ ಭಾವ ವ್ಯಾಪಕವಾಗಿದೆ. ಕೆಲವು ಸಾರಿ ಅವರ ಸಿಟ್ಟು ಹೋರಾಟಗಾರರ ಮೇಲೂ ಹರಿಯುತ್ತದೆ. ತಮ್ಮ ಅಸಲೀ ಸಮಸ್ಯೆಗಳನ್ನೂ, ಅದಕ್ಕೆ ಅಸಲೀ ಪರಿಹಾರಗಳನ್ನೂ, ಅದನ್ನು ಕಲ್ಪಿಸಿಕೊಡಬೇಕಾದ ಜನಪ್ರತಿನಿಧಿಗಳನ್ನೂ ಗುರಿ ಮಾಡಿಕೊಳ್ಳದೇ ಅದು ಎಲ್ಲೆಲ್ಲೋ ಹರಿಯುತ್ತದೆ. ಬರ್ಮಾದಲ್ಲಿ ಹುಟ್ಟಿ ಮುಂಬೈ ಮತ್ತಿತರೆಡೆ ಬೆಳೆದ ನಾರಿಮನ್ ಎಂಬ ವಯೋವೃದ್ಧ ವಕೀಲರು, ತಮಿಳುನಾಡಿನವರು ಎಂಬ ಸುಳ್ಳನ್ನು ನಂಬುವಂತೆ ಅದು ಪ್ರೇರೇಪಿಸುತ್ತದೆ. ಬಳೆ ತೊಡುವುದು, ತೊಡಿಸುವಂತಹ ಮಹಿಳಾ ವಿರೋಧಿ ರೂಪಗಳನ್ನೂ ಪಡೆದುಕೊಳ್ಳುತ್ತದೆ. ಇವೆಲ್ಲವನ್ನೂ ಸರಿಯಾದ ದಾರಿಗೆ ಕೊಂಡೊಯ್ಯಬೇಕಾದ ಸಂಘಟನೆಗಳೂ ಸಹ ಕಾವೇರಿ ಕಿಚ್ಚು ಎದ್ದಾಗ ತಾವೂ ಇದ್ದು, ನಂತರ ತಮ್ಮ ನಿತ್ಯದ ಇತರ ಚಟುವಟಿಕೆಗಳಲ್ಲಿ ಮಗ್ನರಾಗುತ್ತಾರೆ. ಇದೂ ಸಹ ಅನೂಚಾನವಾಗಿ ನಡೆಯುತ್ತಾ ಬಂದಿದೆ. ಕಳೆದ ಕೆಲವು ವರ್ಷಗಳಿಂದ ಇನ್ನೂ ಒಂದು ಟ್ರೆಂಡ್ ಶುರುವಾಗಿದೆ. ಅದು ಶಾಶ್ವತ ಪರಿಹಾರದ ಕುರಿತು ಮಾತನಾಡುವುದು! ಇದೂ ಸಹ ಹೋರಾಟದ ಬಿಸಿಯ ತಾತ್ಕಾಲಿಕ ಮಾತೇ ಆಗಿರುತ್ತದೆ. ಆ ನಂತರ ಅದನ್ನೂ ಮರೆಯಲಾಗುತ್ತದೆ!! ಇದಕ್ಕೆ ಯಾರೂ ಹೊರತಾಗಿಲ್ಲ.

ನೀರನ್ನು ಹಂಚಿಕೊಳ್ಳುವುದರ ಜೊತೆಗೆ ಅದರ ನಿರ್ವಹಣೆ, ನೀರಿನ ಬಳಕೆಯ ಸ್ವರೂಪದಲ್ಲಿ ತರಬೇಕಿರುವ ಬದಲಾವಣೆಗಳಂತೆಯೇ ಬೆಳೆಯ ಸ್ವರೂಪದಲ್ಲಿ ಮತ್ತು ಬೆಳೆಯ ವಿಧಾನದಲ್ಲಿ ಬರಬೇಕಾದ ಬದಲಾವಣೆ ಇವೆಲ್ಲದರ ವಿಚಾರದಲ್ಲಿ ಸಮಗ್ರ ಪ್ರಯತ್ನ ಆಗಲೇಬೇಕಿದೆ. ಇಲ್ಲದಿದ್ದರೆ, ಕೃಷಿ ಬಿಕ್ಕಟ್ಟು ರೈತಾಪಿಯನ್ನೂ ಹಿಂಡುತ್ತದೆ; ಸಮಾಜವನ್ನೂ ಹಿಂಡುತ್ತದೆ.

ಅಂತಹ ಸಮಗ್ರ ಪ್ರಯತ್ನವು ಸದ್ಯದ ಸಮಸ್ಯೆಗಳ ಪರಿಹಾರದೊಂದಿಗೇ ಆರಂಭವಾಗಬೇಕಿದೆ. ಹಾಗಾಗಿ ನಿನ್ನೆ ಬಂದ ಕೋರ್ಟ್ ತೀರ್ಪಿನ ವಿಶ್ಲೇಷಣೆ ಮತ್ತು ಈಗ ತುರ್ತಾಗಿ ಗಮನ ಹರಿಸಬೇಕಾದ ಎರಡು ಅಂಶಗಳ ಬಗ್ಗೆ ಮಾತ್ರ ಇಲ್ಲಿ ಚರ್ಚಿಸಲಾಗಿದೆ.

ಸೆ.20ರಂದು ಹೊರಬಿದ್ದ ತೀರ್ಪು ಸಂವಿಧಾನಬಾಹಿರ ಮತ್ತು ನ್ಯಾಯಬಾಹಿರವಾದದ್ದು


ಕಾವೇರಿ ವಿವಾದದ ಬಗ್ಗೆ ನಿನ್ನೆ ಸುಪ್ರೀಂ ಕೋಟ[illegible] ನೀಡಿರುವ ತೀರ್ಮಾನ ಕರ್ನಾಟಕದ ಹಿತಾಸಕ್[illegible] ವಿರುದ್ಧವಾಗಿರುವುದು ಸ್ಪಷ್ಟ. ಅಷ್ಟು ಮಾತ್ರವಲ್ಲ, ಅದ[illegible] ಅಸಾಂವಿಧಾನಿಕವೂ, ನ್ಯಾಯಬಾಹಿರವೂ ಆಗಿದೆ ಹಾಗ[illegible] ಇದು ಒಕ್ಕೂಟ ವ್ಯವಸ್ಥೆಯಲ್ಲೂ ತಿರಸ್ಕರಿಸಲ[illegible] ಯೋಗ್ಯವಾಗಿದೆ. ತಿರಸ್ಕರಿಸುವುದರ ಜೊತೆಗೆ ನ್ಯಾಯಬ[illegible] ತೀರ್ಮಾನವನ್ನು ಕೊಡಲು ಆಗ್ರಹಿಸಿ ಇತರ ಉನ್[illegible] ಸಾಂವಿಧಾನಿಕ ಮತ್ತು ರಾಜಕೀಯ ಪರಿಹಾರದ ಹಾಗ[illegible] ಹೋರಾಟದ ಮಾರ್ಗಗಳನ್ನು ತುರ್ತಾಗಿ ಅನುಸರಿಸಬೇಕಿ[illegible]

ನಿನ್ನೆಯ ತೀರ್ಪಿನ ಪ್ರಮುಖ ಅಂಶಗಳು–ಅ) 27ರ[illegible] ತಾರೀಕಿನ ತನಕ ದಿನಕ್ಕೆ 6000 ಕ್ಯೂಸೆಕ್ಸ್‌ನಂತೆ 4200[illegible] ಕ್ಯುಸೆಕ್ಸ್ ನೀರು ಬಿಡಬೇಕು ಆ) ಅತ್ಯಂತ ಮುಖ್ಯವಾ[illegible] ಇನ್ನು ನಾಲ್ಕು ವಾರಗಳಲ್ಲಿ ಕೇಂದ್ರ ಸರ್ಕಾರ ಕಾವೇ[illegible] ನಿರ್ವಹಣಾ ಮಂಡಳಿ- **Cauvery Managemen[illegible] Board (CMB)** ಯನ್ನು ಸ್ಥಾಪಿಸಲು ಕ್ರಮ[illegible] ತೆಗೆದುಕೊಳ್ಳತಕ್ಕದ್ದು, ಇ) ಕಾವೇರಿ ಮೇಲುಸ್ತುವಾರಿ ಮಂಡ[illegible] ಕೊಟ್ಟ ತೀರ್ಪಿನ ಬಗ್ಗೆ ಇನ್ನು ಮೂರು ದಿನಗಳಲ್ಲಿ ಎರ[illegible] ರಾಜ್ಯಗಳು ಆಕ್ಷೇಪಣೆ ಸಲ್ಲಿಸತಕ್ಕದ್ದು.

ತೀರ್ಪಿನ ಈ ಎಲ್ಲಾ ಅಂಶಗಳೂ ಅನ್ಯಾಯಯು[illegible] ಮತ್ತು ಅಸಾಂವಿಧಾನಿಕ ಏಕೆಂದರೆ


ಅ) ಕಾವೇರಿ ಮೇಲುಸ್ತುವಾರಿ ಮಂಡಳಿ ಮ[illegible] ಪ್ರಮಾಣ, ಡ್ಯಾಂಗಳ ನೀರಿನ ಮಟ್ಟ, ನೀರಿನ ಹರಿ[illegible]

⏭ 12





ವಿಶೇಷ ಲೇಖನ: ಜಿ.ಎನ್. ನಾಗರಾಜ್



ಕಾವೇರಿ ವಿವಾದ

ಪ್ರಜಾಪ್ರಭುತ್ವದ ಅಗ್ನಿಪರೀಕ್ಷೆ

...ವೇರಿ ಜಲವಿವಾದ ತಾರಕಕ್ಕೇರಿದೆ. ಇದು ನಮ್ಮ ...ಪ್ರಜಾಪ್ರಭುತ್ವದ ಮೂರೂ ಸ್ತಂಭಗಳಾದ ಶಾಸಕಾಂಗ, ...ಗ, ನ್ಯಾಯಾಂಗಗಳು– ಅದರ ಅಂಗಭಾಗಗಳಾದ ...ಯ ಪಕ್ಷಗಳು, ಜನಪ್ರತಿನಿಧಿಗಳು, ವಿವಿಧ ಜನ ...ಗಳು, ಸ್ತರಗಳು, ಸಚಿವ ಸಂಪುಟಗಳು, ಅಧಿಕಾರ ...ವಕೀಲರು, ನ್ಯಾಯಾಧೀಶರು, ನ್ಯಾಯಾಧಿಕರಣಗಳು ... ಇತ್ಯಾದಿಗಳನ್ನು ಕಠಿಣ ಪರೀಕ್ಷೆಗೊಡ್ಡಿದೆ. ...ಭುತ್ವದ ನಾಲ್ಕನೇ ಆಧಾರ ಸ್ತಂಭವೆಂದು ...ಸಿಕೊಳ್ಳುವ ಪತ್ರಿಕೆ–ಮಾಧ್ಯಮ ರಂಗ ಮತ್ತು ಅದರ ...ಕತ್ವ, ಪತ್ರಕರ್ತರುಗಳೂ, ಅವರ ಪಾತ್ರವೂ ಕೂಡ ...ದೂ ಇಲ್ಲದಂತೆ ಕಟು ಟೀಕೆಗೊಳಗಾಗಿದೆ.

... ವಿವಾದವನ್ನು ನೈಜ ಪ್ರಜಾಪ್ರಭುತ್ವದ ...ಯವಾದ ವಸ್ತುನಿಷ್ಠತೆ, ವೈಚಾರಿಕತೆ, ವೈಜ್ಞಾನಿಕತೆಗಳ ...ದ ಮೇಲೆ ಸೂಕ್ತ ಪರಿಹಾರವನ್ನು ಕಂಡುಕೊಂಡು ...ಪ್ರಭುತ್ವವನ್ನು ಬಲಪಡಿಸುತ್ತೇವೆಯೋ ಅಥವಾ ...ವರ ಪಟ್ಟಭದ್ರ ಹಿತಗಳು, ಅಧಿಕಾರ ಲಾಲಸೆಗಳು ... ಪೋಷಿಸಲು ಅವರು ವಿವಿಧ ಸಾಧನಗಳ ಮೂಲಕ ...ವ ಅವೈಚಾರಿಕತೆ, ಪೊಳ್ಳು ಭಾವೋದ್ರೇಕಗಳಿಗೆ ...ರಾಗಿ ಪ್ರಜಾಪ್ರಭುತ್ವವನ್ನು ಮತ್ತಷ್ಟು ...ಲಗೊಳಿಸುತ್ತೇವೆಯೋ ಎಂಬುದು ಕೂಡ ಈ ...ದದ ಹೃದಯವಾಗಿದೆ. ಪ್ರಜಾಪ್ರಭುತ್ವದ ಸ್ಥಾಪನೆಯ ...ರದ ದಿನಗಳಲ್ಲಿ 1974ರಿಂದ ಈ ವಿವಾದ ...ವಾದಂದಿನಿಂದ ಹಿಡಿದು ಇತ್ತೀಚಿನ ಸಂಕಷ್ಟದ ...ರ್ಭದಲ್ಲಿಯೂ ಘಟಿಸಿದ ಬೆಳವಣಿಗೆಗಳು ...ಪ್ರಭುತ್ವವನ್ನು ದುರ್ಬಲಗೊಳಿಸುತ್ತಲೇ ಸಾಗುತ್ತಿರುವುದು ...ದಕರ. ಇದನ್ನು ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲರೂ ...ರವಾಗಿ ತೆಗೆದುಕೊಳ್ಳಬೇಕಾಗಿದೆ.

... ಕಾವೇರಿಯ ನೀರಿನ ಹಂಚಿಕೆಯ ಈ ವಿವಾದ ... ರಾಜ್ಯದ ಜನಜೀವನದ ಎಲ್ಲ ರಂಗಗಳಲ್ಲಿಯೂ ...ರಿಸಿದೆ. ಸಾವು ನೋವುಗಳಿಗೂ ಕಾರಣವಾಗಿದೆ. ...ಬರ್ 20 ರಂದು ಸುಪ್ರೀಂಕೋರ್ಟ್ ನೀಡಿದ ...ಂತೂ ರಾಜ್ಯದ ಜನತೆಯಲ್ಲಿ ತಳಮಳಕ್ಕೆ ...ವಾಗುತ್ತಿದೆ. ಜನತೆಯಲ್ಲಿ ಆಗಲೇ ಮೂಡಿದ್ದ ...ವನ್ನು, ತಳಮಳವನ್ನು ಉತ್ತುಂಗಕ್ಕೇರಿಸಿದೆ. ರಾಜ್ಯ ...ರ ಮತ್ತು ಮೂರೂ ಆಳುವ ರಾಜಕೀಯ ಪಕ್ಷಗಳು ...ದುಗಾಣದಂತಾಗಿವೆ. ಬೇಯುತ್ತಿರುವ ಮನೆಯಲ್ಲಿ ... ಗಳ ಹಿರಿಯುವುದೆಂಬ ಬಗ್ಗೆ ಅವುಗಳು ಮಾಡಿದ್ದ ...ಚಾರಗಳು ತಲೆಕೆಳಕಾಗುತ್ತಿವೆ.

...ಈಗಿನ ವಿವಾದ ಮತ್ತು ಅದು ಸೃಷ್ಟಿಸಿದ ತಳಮಳಗಳ ...ಲದಲ್ಲಿರುವುದು ಮಳೆ ಬಾರದ ಸಂಕಷ್ಟ ಸಮಯದಲ್ಲಿ ...ನ ಹಂಚಿಕೆ ಸೂತ್ರದ ಬಗೆಗೆ ಎರಡು ರಾಜ್ಯಗಳ ...ವಣ ತೀವ್ರ ಭಿನ್ನಾಭಿಪ್ರಾಯ. ಈ ಭಿನ್ನಾಭಿಪ್ರಾಯ ...ಗಳ ನಡುವೆ ವ್ಯಾಜ್ಯವಾಗಿದೆ. ಕದನವೆಂದು, ...ದ್ಧವೆಂದು ಕೂಡ ಮಾಧ್ಯಮಗಳು ಬಿಂಬಿಸಿವೆ. ...ಟಕದ ಕಾವೇರಿ ಬಯಲಿನ ಜನತೆಯಲ್ಲಿ ತಮಗೆ ...ತರವಾಗಿ ಅನ್ಯಾಯವಾಗುತ್ತಿದೆಯೆಂಬ ಭಾವನೆ ಬಲಿತು ...ನ್ನು ರೊಚ್ಚಿಗೇಳುವಂತೆ ಮಾಡಿದೆ. ಇದು ಎರಡು ...ಗಳ ಜನತೆಯ ನಡುವೆ ದ್ವೇಷವನ್ನು ಹಬ್ಬಿಸುವ ...ಕ್ಕೆ ಮುಟ್ಟಿದೆ.

... ಎರಡೂ ರಾಜ್ಯಗಳ ದುಡಿಯುವ ಜನತೆಯ ಬಾಂಧವ್ಯಕ್ಕೆ ...ಸಲಾರದ ಹಾನಿಯಾಗುವ, ಭಾರತವೆಂಬ ದೇಶದ ...ಟ ಸ್ವರೂಪಕ್ಕೆ ಧಕ್ಕೆಯಾಗುವ ಸ್ಥಿತಿ ತಲುಪಿದೆ. ಇಂತಹ ...ವುದೇ ಸಂದರ್ಭದಲ್ಲಿ ಒಕ್ಕೂಟದ ಆಡಳಿತಕ್ಕೆ ಬಾಧ್ಯವಾದ ...ದ್ರ ಸರ್ಕಾರ ಅದರ ಮುಖ್ಯಸ್ಥರಾದ ಪ್ರಧಾನಿ ಕೂಡಲೇ ...ಶೀಲರಾಗಬೇಕು. ನದೀ ನೀರಿನ ನಿರ್ವಹಣೆ ಮತ್ತು ...ಚಿಕೆ ಇತರನೇಕ ವಿಷಯುಗಳಂತೆ ಕಾರ್ಯಾಂಗದ ...ಬ್ದಾರಿಯೇ ಹೊರತು ಶಾಸಕಾಂಗ, ನ್ಯಾಯಾಂಗಗಳ ...ವಲ್ಲ. ಏಕೆಂದರೆ ಕಾರ್ಯಾಂಗದ ಪ್ರತಿ ವಿಭಾಗಗಳೂ ...ಬದ್ಧ ವರದಿಗಳನ್ನು ತಮ್ಮ ಅಧೀನ ವಿಭಾಗಗಳಿಂದ ...ಯುವ, ಪರಿಶೀಲಿಸುವ ರೂಢಿಗತ ಪದ್ಧತಿಗಳು ...ಸ್ತಿಯುಲ್ಲಿರುತ್ತವೆ. ಆದ್ದರಿಂದ ಪರಿಸ್ಥಿತಿಯ ಮುನ್ಸೂಚನೆ ...ಲಾರಂಭಿಸಿದ ಕೂಡಲೇ ಕೇಂದ್ರ ಸರ್ಕಾರದ ...ಬಂಧಪಟ್ಟ ಸಂಸ್ಥೆಗಳು, ವಿಭಾಗಗಳು, ಅದರ ...ಕಾರಿಗಳು, ತಂತ್ರಜ್ಞರು ಕಾರ್ಯಾಂಗದ ಅಧಿಕಾರಸ್ಥರ ...ನಕ್ಕೆ ಈ ಪರಿಸ್ಥಿತಿಯ ಕಾಲ ಕಾಲದ ಬೆಳವಣಿಗೆಗಳನ್ನು ...ಸಕ್ಕೆ ತರುವ ಸುಸಂಬದ್ಧ ಪ್ರಕ್ರಿಯೆಗಳು ...ಚಿತವಾಗಿರಬೇಕು.

... ನೂರಾರು ವರ್ಷಗಳ ಹಿಂದೆ ಈ ಪದ್ಧತಿಗಳಿಗೆ ...ಚೆಯ ಮೂಲಕ ತಿಂಗಳುಗಟ್ಟಲೆ, ವಾರಗಟ್ಟಲೇ ಸಮಯ ...ಯುವಂತಹ ಪರಿಸ್ಥಿತಿ ಇಂದಿಲ್ಲ, ಕೇವಲ ಸಂವಹನ ...ಜ್ಞಾನ ಮಾತ್ರವೆ ಅಲ್ಲದೆ ವಿವಿಧ ಅನೇಕ ತಂತ್ರಜ್ಞಾನಗಳೂ ...ದು ವೇಗವಾಗಿ ತೀರ್ಮಾನವನ್ನು ಕೈಗೊಳ್ಳುವ ...ಅವಕಾಶವನ್ನು ಕಲ್ಪಿಸಿವೆ. ಅದರಲ್ಲಿ ಉಪಗ್ರಹಗಳ ಮೂಲಕ ...ಸಿಗುವ ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನವೂ ಒಂದು. ... ಸೆಕೆಂಡಿಗೆ, ಸಾವಿರಾರು ಚಿತ್ರಗಳನ್ನು ತೆಗೆದು ತಮ್ಮ ...ಲೋಕದ ಮುಂದಿಡುವ ಉಪಗ್ರಹಗಳು ಕಾವೇರಿ ನದೀ ಬಯಲಿನ ಪ್ರದೇಶದ ಪ್ರತಿ ಸೂಕ್ಷ್ಮ ಅಂಶಗಳನ್ನು ಸಂಗ್ರಹಿಸಿರುತ್ತವೆ ಮತ್ತು ಭಾರತ ಸರ್ಕಾರದ ಬಳಿ ಮಾತ್ರವಲ್ಲ ಅಮೆರಿಕ ಮೊದಲಾದ ಉಪಗ್ರಹ ಮಾಲೀಕರಾದ ಸರ್ಕಾರಗಳ ಬಳಿಯೂ ಈ ಮಾಹಿತಿ ಲಭ್ಯವಿರುತ್ತದೆ.

ಭಾರತ ಸರ್ಕಾರಕ್ಕೆ ಉಪಗ್ರಹಗಳು ನದಿಯಲ್ಲಿ ನಿಮಿಷಕ್ಕೆ ಬದಲಾಗುತ್ತಿರುವ ನೀರಿನ ಹರಿವು, ಮಳೆಯ ಪ್ರಮಾಣ, ಅಣೆಕಟ್ಟುಗಳ ನೀರಿನ ಸಂಗ್ರಹದ ಪ್ರಮಾಣ, ಅಚ್ಚುಕಟ್ಟುಗಳಲ್ಲಿ ಬೆಳೆಯ ಪ್ರಮಾಣ ಇತ್ಯಾದಿ ಅವಶ್ಯ ವಿಷಯಗಳ ಬಗ್ಗೆ ಅಂಕಿ ಅಂಶಗಳನ್ನು ಕ್ಷಣಕಣಕ್ಕೂ ಒದಗಿಸುತ್ತಿರುತ್ತವೆ. ಇವುಗಳನ್ನು ಕಾಲಕಾಲಕ್ಕೆ ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ವಿಭಾಗಗಳು, ರಾಜ್ಯಗಳು ನೀಡುವ ಮಾಹಿತಿಗಳ ಜೊತೆಗೆ ತುಲನೆ ಮಾಡಿ ಸರಿಸುಮಾರು ಕರಾರುವಾಕ್ಕಾದ ಮಾಹಿತಿ ಪಡೆಯುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಹೀಗಿರುವಾಗ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಬಹಳ ಮೊದಲೇ ಮಾಹಿತಿಯಂತೂ ಲಭ್ಯ. ಈ ಬಗ್ಗೆ ತಕ್ಷಣವೇ ಕಾರ್ಯಪ್ರವೃತ್ತವಾಗಲು ಅಡ್ಡಿಯಾಗಿರುವುದು ಕೇಂದ್ರ ಸರ್ಕಾರದ ರಾಜಕೀಯ ಇಚ್ಛೆಯಷ್ಟೆ.

ಇಂತಹ ಕ್ಷಣಕ್ಷಣದ ಮಾಹಿತಿ ಮತ್ತು ನೀರಿನ ನಿರ್ವಹಣೆ ಮಾಡುವ ಆಡಳಿತ ಯಂತ್ರ ನ್ಯಾಯಾಂಗಕ್ಕೆ ಲಭ್ಯವಿಲ್ಲ. ಆದ್ದರಿಂದಲೇ ನ್ಯಾಯಾಂಗ ನದಿ ನೀರಿನ ಹಂಚಿಕೆಯಲ್ಲಿ ಮಧ್ಯ ಪ್ರವೇಶಿಸಬಾರದು ಎಂದು ಸಂವಿಧಾನ ವಿಧಿಸಿರುವುದು. ಕಾವೇರಿ ನ್ಯಾಯಾಧಿಕರಣದ ಮಧ್ಯಂತರ ತೀರ್ಪನ್ನು ನಿರ್ವಹಿಸುವ ಪ್ರಶ್ನೆ ಪದೇಪದೇ ಸುಪ್ರೀಂ ಕೋರ್ಟ್ ಮೆಟ್ಟಲು ಹತ್ತಿದಾಗ ಅಂದಿನ ಪೀಠ ತನ್ನ ಬುದ್ಧಿಯನ್ನು ಸರಿಯಾಗಿ ಬಳಸಿ ಅಧಿಕಾರಿಗಳ ಮಟ್ಟದಲ್ಲಿ ಉಸ್ತುವಾರಿ ಸಮಿತಿ ಮತ್ತು ರಾಜಕೀಯ ಮುಖ್ಯಸ್ಥರಾದ ಪ್ರಧಾನಿ ಮತ್ತು ಮುಖ್ಯಮಂತ್ರಿಗಳನ್ನು ಒಳಗೊಂಡು ಪ್ರಾಧಿಕಾರವನ್ನು ರಚಿಸಿತ್ತು, ಅವುಗಳು ಕಾರ್ಯ ನಿರ್ವಹಿಸುವಂತೆ ನಿರ್ದೇಶನ ನೀಡಿತ್ತು. ಹಿಂದಿನ ಬಿಜೆಪಿ ಪಕ್ಷದವರೇ ಆದ ಪ್ರಧಾನಿ ವಾಜಪೇಯಿಯವರು ಇಂತಹ ಪ್ರಾಧಿಕಾರದ ಅಧ್ಯಕ್ಷರಾಗಿ ತೀರ್ಪು ನೀಡಿದ್ದರು. ಈ ಪ್ರಸಂಗಗಳು ಕೇಂದ್ರ ಸರ್ಕಾರದ ಪಾತ್ರವನ್ನು ಒತ್ತಿ ಹೇಳುತ್ತವೆ.

ಈ ಬಗ್ಗೆ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಸಚಿವರು ಮತ್ತು ಕರ್ನಾಟಕದಿಂದ ರಾಜ್ಯಸಭೆಯ ಸದಸ್ಯೆಯಾಗಿರುವ ಕೇಂದ್ರ ಮಂತ್ರಿ ನಿರ್ಮಲಾ ಸೀತಾರಾಮ್ ಅವರು, ಯೆಡಿಯೂರಪ್ಪನವರೂ ಸೇರಿ ರಾಜ್ಯದ ಜನರಿಂದ ಆಯ್ಕೆಯಾದ ಬಿಜೆಪಿ ಸಂಸದರುಗಳು ಸುಪ್ರೀಂ ಕೋರ್ಟ್‌ನಲ್ಲಿ ಕೇಸುಗಳು ಇರುವುದರಿಂದ ಪ್ರಧಾನಿ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲ ಎಂಬ ಸಬೂಬು ಹೇಳುತ್ತಿರುವುದು ಹಾಸ್ಯಾಸ್ಪದ, ಮಾತ್ರವಲ್ಲ ಹೊಣೆಗಾರಿಕೆಯ ಅಸಫಲ ಪ್ರಯತ್ನವಷ್ಟೇ. ತಮ್ಮ ಪಾತ್ರದಿಂದಾಗಿ ಕರ್ನಾಟಕದಲ್ಲಿ ತಮ್ಮ ನೆಲೆಯನ್ನು ಕಳೆದುಕೊಳ್ಳುವ ಭಯವಲ್ಲದೇ ಇಂತಹ ವರ್ತನೆಗೆ ಮತ್ತಾವ ಕಾರಣವೂ ಇಲ್ಲ. ಸ್ವಾತಂತ್ರ್ಯಾನಂತರ ದೇವೇಗೌಡರು ಸೇರಿದಂತೆ ಪ್ರಧಾನಿ ಮತ್ತು ಕೇಂದ್ರ ಸರ್ಕಾರದ ಮಧ್ಯ ಪ್ರವೇಶದ ಹಲವು ಉದಾಹರಣೆಗಳು ನಮ್ಮ ಮುಂದಿವೆ.

ಅಷ್ಟು ಮಾತ್ರವೇ ಅಲ್ಲ ಪ್ರಧಾನಿ ಒಂದು ಒಮ್ಮತ ತೀರ್ಮಾನಕ್ಕೆ ಬರುವಂತೆ ಮಾಡಿ ಎರಡೂ ರಾಜ್ಯಗಳು ಸುಪ್ರೀಂ ಕೋರ್ಟ್ ಮುಂದೆ ಆ ಬಗ್ಗೆ ಅರ್ಜಿ ಸಲ್ಲಿಸಿದರೆ ಕೋರ್ಟ್ ಆ ಬಗ್ಗೆ ಸಂತೋಷ ಪಡುತ್ತದೆಯೇ ಹೊರತು ತಳ್ಳಿ ಹಾಕಲಾಗುವುದಿಲ್ಲ.

ಅಷ್ಟೇ ಅಲ್ಲದೆ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳೂ ಪ್ರಧಾನಿಗೆ ಪತ್ರ ಬರೆದಿದ್ದಾರೆ. ಕರ್ನಾಟಕದಿಂದ ಎಂಟು ಪತ್ರಗಳಂತೆ. ಒಬ್ಬ ಮುಖ್ಯಮಂತ್ರಿಯ ತುರ್ತು ಪತ್ರಗಳಿಗೆ ಉತ್ತರಿಸದಿರುವುದು ಒಕ್ಕೂಟದ ಮುಖ್ಯಸ್ಥನ ವಿಷಯದಲ್ಲಿ ಗಂಭೀರ ಕರ್ತವ್ಯ ಚ್ಯುತಿಯೇ ಹೌದು. ಆದ್ದರಿಂದ ಸಮಸ್ಯೆ ತೀವ್ರವಾಗುವ ಮೊದಲೇ, ಭಾವೋದ್ರೇಕಗಳು ಬಲಿಯುವ ಮೊದಲೇ ಕೇಂದ್ರ ಸರ್ಕಾರ ಪ್ರಕ್ರಿಯೆ ಆರಂಭಿಸದಿರುವುದು, ಸಮಸ್ಯೆಯನ್ನು ಬಗೆಹರಿಸಲು ಯಾವುದೇ ಪ್ರಯತ್ನ ನಡೆಸದಿರುವುದು, ಒಕ್ಕೂಟದ ಮುಖ್ಯಸ್ಥನಾಗಿ ತನ್ನ ರಾಜಕೀಯ ಹೊಣೆಗಾರಿಕೆಯನ್ನು ನಿರ್ವಹಿಸದಿರುವುದೇ ಇಂದಿನ ಸಮಸ್ಯೆಯ ಮೂಲ. ಈಗಲೂ ತಕ್ಷಣವೇ ಮೋದಿಯವರು ಈ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಸಂಧಾನ ಸಭೆ ನಡೆಸಬೇಕು.

ಅದೇ ಸಮಯದಲ್ಲಿ ಈಗಿನ ಸುಪ್ರೀಂಕೋರ್ಟ್ ಕೂಡ ಕಾರ್ಯಾಂಗ ತನ್ನ ಕಾರ್ಯವನ್ನು ನಿರ್ವಹಿಸುವಂತೆ ಚಾಟಿ ಬೀಸಿ ನ್ಯಾಯಾಧಿಕರಣದ ಹಂಚಿಕೆಯ ಬಗ್ಗೆ ತನ್ನ ತೀರ್ಪು ಕೊಡುವವರೆಗೆ ಅಂತಹ ಸಾಂಸ್ಥಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಬದಲಾಗಿ ಆ ಹೊಣೆಯನ್ನು ತನ್ನ ಮೇಲೆ ಹಾಕಿಕೊಂಡದ್ದು ಕೂಡ ಇಂದಿನ ತೀರ್ಪುಗಳಿಗೆ ಕಾರಣವಾಗಿದೆ.

ನಮ್ಮ ಸಂವಿಧಾನದಲ್ಲಿ ಭಾರತವೊಂದು ಒಕ್ಕೂಟ ಎಂದು ಹೇಳಲಾಗಿದ್ದರೂ ಅತಿ ಕೇಂದ್ರೀಕೃತ ವ್ಯವಸ್ಥೆಯನ್ನೇ ರೂಪಿಸಿದೆ. ಸ್ವಾತಂತ್ರ್ಯಾನಂತರ ಆಳಿದ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸಿವೆ. ಈಗಿನ ಮೋದಿ ಸರ್ಕಾರವಂತೂ ರಾಜ್ಯ ಸರ್ಕಾರಗಳನ್ನು ಕೇಂದ್ರದ ಬಾಲಂಗೋಚಿಯಾಗಿಸ ಬಯಸುತ್ತಿದೆ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು ಆದರೆ ಇಲ್ಲಿ ಅದಕ್ಕೆ ಅವಕಾಶವಿಲ್ಲ. ಆದರೆ ಸಂವಿಧಾನ ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಕಾಯ್ದುಕೊಳ್ಳಲು ರೂಪಿಸಿದ ಕೆಲ ಸಾಂವಿಧಾನಿಕ ಸಂಸ್ಥೆಗಳಿವೆ. ರಾಜ್ಯ ಸಭೆಯೆ ಅಂತಹದೊಂದು ಸಂಸ್ಥೆ ಅಂತರರಾಜ್ಯ ಪರಿಷತ್ತು (ಸಂವಿಧಾನ ಬದ್ಧವಾದ ಇಂಟರ್ ಸ್ಟೇಟ್ ಕೌನ್ಸಿಲ್), ರಾಷ್ಟ್ರೀಯ ಸಮಗ್ರತಾ ಪರಿಷತ್ತು, ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಇಂತಹವು. ಇದರಲ್ಲಿ ಮುಖ್ಯವಾ... ...ಪರಿಷತ್ತು ರಾಜ್ಯಗಳ ನಡುವಣ ವಿವಾದಗಳನ್ನು ನಿರ್ವಹಿಸ... ಕರ್ತವ್ಯಬದ್ಧವಾದ ಸಂಸ್ಥೆ. ಆದರೆ ಇದನ್ನು ಕಾಂಗ್ರೆಸ್, ಬಿಜೆಪಿ ಎರಡೂ ನಿಷ್ಕ್ರಿಯಗೊಳಿಸಿವೆ. ಅಂತಹುದೊಂದು ಇದೆಯೆ ಎಂದು ಕೇಳುವಂತಾಗಿದೆ. ಇಂತಹ ಸಂಸ್ಥೆಗಳನ್ನು ಕ್ರಿಯಾಶೀಲಗೊಳಿಸಬೇಕು. ಇವುಗಳಿಗೆ ಖಾಯಂರೂಪ ನೀಡಿ ಅದರ ಅಡಿಯಲ್ಲಿ ನದಿ ವಿವಾದಗಳಿಗೆ ಸಂಬಂಧಿಸಿದ ನ್ಯಾಯಾಂಗ ಸಮಿತಿಯನ್ನು ರಚಿಸಬೇಕು.

ಸುಪ್ರೀಂ ಕೋರ್ಟ್ ತೀರ್ಪುಗಳ ಹಿನ್ನೆಲೆಯಲ್ಲಿ ಅದರಲ್ಲಿಯೂ ನಿನ್ನೆಯ ಕಾವೇರಿ ನಿರ್ವಹಣಾ ಸಮಿತಿಯ ಬಗೆಗಿನ ತೀರ್ಪು ಕೆಲವರಲ್ಲಿ ಕರ್ನಾಟಕ ರಾಜ ಒಕ್ಕೂಟದಿಂದಲೇ ಹೊರಬರಬೇಕೆನ್ನುವ ಮಾತುಗಳು ಬರಲು ಕಾರಣವಾಗಿದೆ. ಅಧರಿಂದ ಅಂತರರಾಜ್ಯ ಸಮಸ್ಯೆ ಅಂತರರಾಷ್ಟ್ರೀಯ ಸಮಸ್ಯೆಯಾಗಿ ಪರಿವರ್ತನೆಯಾಗಿ ಮತ್ತಷ್ಟು ಬಿಗಡಾಯಿಸುತ್ತದೆ ಮತ್ತು ವಿಶ್ವ ಸಂಸ್ಥೆಯ ಭದ್ರತಾ ಸಂಸ್ಥೆಯ ಅಜೆಂಡಾ ಆಗುತ್ತದೆಯಷ್ಟೇ. ಅದರ ಪರಿಣಾಮಗಳನ್ನು ಇಲ್ಲಿ ವಿವರಿಸಬೇಕಾಗಿಲ್ಲ.

ಇವು ತಕ್ಷಣದ ಸಮಸ್ಯೆಯ ಬಗೆಗಿನ ವಿಷಯಗಳಾದರೆ ಹಲವು ದೀರ್ಘ ಕಾಲೀನ ವಿಷಯಗಳು ಈ ಸಮಸ್ಯೆಯ ಮೂಲದಲ್ಲಿವೆ. ನ್ಯಾಯಾಧಿಕರಣಗಳ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳ ಸರಮಾಲೆಗಳು ಯಾಕೆ ಯಾವಾಗಲೂ ಕರ್ನಾಟಕದ ವಿರುದ್ಧವಾಗಿಯೇ ಬರುತ್ತಿವೆ ಎಂಬ ಬಗ್ಗೆ ಸಾರ್ವತ್ರಿಕ ಆಕ್ರೋಶ ವ್ಯಕ್ತವಾಗುತ್ತಿದೆ. ಇದಕ್ಕೆ ಇಂದು ನಮ್ಮ ದೇಶದಲ್ಲಿ ಕೋರ್ಟ್‌ಗಳು ಅನುಸರಿಸುತ್ತಿರುವ ನೀರಿನ ಬಗೆಗಿನ ನ್ಯಾಯಶಾಸ್ತ್ರ ತತ್ವಗಳು ಮತ್ತು ಕಾನೂನಿನ ಚೌಕಟ್ಟುಗಳು ಕಾರಣವಾಗಿವೆ. ಅದಕ್ಕೆ ನಾವು ಸಿಂಧೂ ನದಿಯ ವಿಷಯದಲ್ಲಿ ಭಾರತ–ಪಾಕ್ ನಡುವೆ, ಗಂಗಾ ನದಿಯ ವಿಷಯದಲ್ಲಿ ಭಾರತ–ಬಂಗ್ಲಾದೇಶಗಳ ನಡುವೆ, ಬ್ರಹ್ಮಪುತ್ರ ನದಿಯ ಬಗ್ಗೆ ಚೀನಾ, ಭಾರತ, ಬಂಗ್ಲಾ ದೇಶಗಳ ನಡುವಣ ವಿವಾದ ಮತ್ತು ಒಪ್ಪಂದಗಳು, ಈ ಬಗೆಗಿನ ಅಂತರರಾಷ್ಟ್ರೀಯ ನ್ಯಾಯಶಾಸ್ತ್ರಗಳ ವಿವೇಚನೆ ಮಾಡಬೇಕಾಗುತ್ತದೆ. ಇಲ್ಲಿ ಅದಕ್ಕೆ ಸ್ಥಳಾವಕಾಶವಿಲ್ಲದಿರುವುದರಿಂದ ಅದನ್ನು ವಿವರಿಸುವುದು ಬೇರೆಯೇ ಲೇಖನದ ವಿಷಯ. ಆದರೆ ಈ ತೀರ್ಪುಗಳ ಹಿನ್ನೆಲೆ ಮತ್ತು ಮುಖ್ಯವಾಗಿ ಸಿಎಂಸಿ ಸ್ಥಾಪನೆಯ ನಿರ್ದೇಶನದ ಬಗ್ಗೆ ಕೆಲ ಮಾತುಗಳನ್ನು ಹೇಳಲೇಬೇಕಾಗಿದೆ.

ನದಿ ನೀರಿನ ಬಳಕೆಯ ವಿಷಯದಲ್ಲಿ ಹಿಂದಿನ ಕಾಲದಿಂದ ನದಿ ನೀರನ್ನು ಬಳಸುತ್ತಿರುವ ಪ್ರದೇಶಗಳು ಮತ್ತು ಇತ್ತೀಚೆಗೆ ಬಳಸುತ್ತಿರುವ ಪ್ರದೇಶಗಳ ನಡುವೆ ಹಿಂದಿನಿಂದ ಬಳಸುತ್ತಿರುವ ಪ್ರದೇಶಗಳಿಗೆ ನೀರಿನ ಹಂಚಿಕೆಯಲ್ಲಿ ಆದ್ಯತೆ ನೀಡಲಾಗುತ್ತಿದೆ. ಕರ್ನಾಟಕ ಕೆಆರ್‌ಎಸ್ ನಿರ್ಮಾಣದ ನಂತರ ಮಾತ್ರವೇ ಗಣನೀಯವಾಗಿ ನೀರಿನ ಉಪಯೋಗ ಆರಂಭಿಸಿದ್ದು. ಹಾರಂಗಿ, ಹೇಮಾವತಿಯಂತೂ ಕೇವಲ ಮೂರು–ನಾಲ್ಕು ದಶಕಗಳ ಈಚಿಗಿನದು. ಆದ್ದರಿಂದ ಈ ಪ್ರದೇಶಗಳ ಉಪಯೋಗಕ್ಕೆ ಎರಡನೇ ಆದ್ಯತೆ. ತಮಿಳುನಾಡಿನ ನದೀ ಮುಖಜ ಪ್ರದೇಶಗಳದ್ದು ಸಾವಿರಾರು ವರ್ಷಗಳ ಹಿಂದಿನ ಉಪಯೋಗ. ಚೋಳ ಸಾಮ್ರಾಜ್ಯಗಳಿಗಿಂತ ಹಿಂದಿನದು. ನದಿ ಅಲ್ಲಿ ಸಮತಲವಾಗಿ, ಅನೇಕ ಕವಲುಗಳಾಗಿ ಹರಿಯುವುದರಿಂದ ಅಣೆಕಟ್ಟುಗಳಿಲ್ಲದೇ ಕಾಲುವೆಗಳ ಮೂಲಕ ನೀರಾವರಿ ಮಾಡಬಹುದಾದ ಅನುಕೂಲವಿತ್ತು. ಆದರೆ ಕರ್ನಾಟಕದ ಮೇಲ್ಕಣಿವೆಯಲ್ಲಿ ನೀರು ನೆಲಮಟ್ಟದಿಂದ ಹಲವು ಹತ್ತು ಅಡಿಗಳ ಆಳದಲ್ಲಿ ಹರಿಯುವುದರಿಂದ ತಲಕಾಡಿನಂತಹ ಕೆಲಭಾಗ ಬಿಟ್ಟರೆ ನೀರಾವರಿ ಬಹಳ ಕಡಿಮೆ. ದೊಡ್ಡ ಅಣೆಕಟ್ಟುಗಳನ್ನು ಕಟ್ಟುವ ತಂತ್ರಜ್ಞಾನ ಇತ್ತೀಚೆಗೆ ಲಭ್ಯವಾದ ಮೇಲೆಯೆ ಇಲ್ಲಿ ನೀರಾವರಿ ಸಾಧ್ಯವಾಗಿದ್ದು. ಇದೇ ಎಲ್ಲ ನ್ಯಾಯಾಂಗದ ತೀರ್ಪುಗಳಲ್ಲಿ ಕರ್ನಾಟಕದ ನೀರಿನ ಪಾಲಿನ ಬಗ್ಗೆ ಬರುವ ನಿರ್ದೇಶಗಳ ಮೂಲ. ಈ ನ್ಯಾಯಶಾಸ್ತ್ರದ ಮತ್ತು ಅದನ್ನು ಆಧರಿಸಿದ ಕಾನೂನುಗಳಲ್ಲಿಯೆ ಮೂಲಭೂತ ಬದಲಾವಣೆಯಾಗಬೇಕು. ಅದು ನಮ್ಮೆಲ್ಲರ ಒತ್ತಾಯವಾಗಬೇಕು. ಅದನ್ನು ಬಿಟ್ಟು ವಕೀಲರುಗಳನ್ನು ದೂರಿ ಪ್ರಯೋಜನವಿಲ್ಲ. ಈ ತತ್ವದ ಆಧಾರದಲ್ಲಿಯೇ ಕಾವೇರಿ ನದಿ ನಿರ್ವಹಣಾ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರುವ ತೀರ್ಪು ಬಂದಿದೆ. ಹುತ್ತವ ಬಡಿದರೆ ಹಾವು ಸಾಯುವುದಿಲ್ಲ ಎಂಬುದನ್ನು ಅರಿಯಬೇಕು.

ಅದೇ ಸಮಯದಲ್ಲಿ ಕರ್ನಾಟಕದಲ್ಲಿ ಉಂಟಾದ ಭಾವೋದ್ರೇಕಗಳು, ಗಲಭೆಯೂ ಇದಕ್ಕೆ ಭಾಗಶಃ ಕಾರಣ ಎಂಬುದನ್ನು ಮರೆಯಲಾಗದು. ಈ ಭಾವೋದ್ರೇಕಕ್ಕೆ ನಮ್ಮ ಮಾಧ್ಯಮಗಳು ಈ ವಿವಾದದ ಬಗ್ಗೆ ಮೂಲಭೂತ ತಿಳಿವಳಿಕೆಯಿಲ್ಲದೆ ಅರೆ ಸತ್ಯಗಳು ಅರೆ ಸುಳ್ಳುಗಳ ಮೂಲಕ ಜನರ ಮುಂದಿಡುತ್ತಿರುವ ರೀತಿ, ಉಪಯೋಗಿಸುತ್ತಿರುವ ಉದ್ರೇಕದ ಕಿಚ್ಚು ಹತ್ತಿಸುವ ಭಾಷೆಯೂ ಕಾರಣ. ಈ ಸಮಸ್ಯೆ ಉಲ್ಬಣಗೊಳ್ಳಲು ತಮಿಳುನಾಡಿನ ಎಐಡಿಎಂಕೆಯಂತಹ ಆಳುವ ಪಕ್ಷಗಳು ಕಾರಣ. ಅದೇ ಸಮಯದಲ್ಲಿ ಕನ್ನಡ ನಾಡಿನ ಆಳುವ ಪಕ್ಷಗಳು ಮೂಲಭೂತ ವಿಷಯಗಳನ್ನು ಜನರ ಮುಂದಿಟ್ಟು ಅದರ ಆಧಾರದ ಮೇಲೆ ಸೂಕ್ತ ಒತ್ತಾಯಗಳನ್ನು ರೂಪಿಸದೇ ಭಾವೋದ್ರೇಕಗಳಿಗೆ ಎಡೆಮಾಡಿಕೊಟ್ಟಿವೆ. ತಮ್ಮ ಕುರ್ಚಿಯ ರಾಜಕಾರಣವೇ ಅವುಗಳಿಗೆ ಮುಖ್ಯವಾಗಿದೆ.

ಈಗಲಾದರೂ ಜನತೆ ಹಿಂದಿನ ಮತ್ತು ಇತ್ತೀಚಿನ ಬಳಕೆದಾರರ ನಡುವೆ ಸಮಾನ ಹಂಚಿಕೆಯ ಜಲನೀತಿಗಾಗಿ ಮತ್ತು ಕಾನೂನಿಗಾಗಿ ಒತ್ತಾಯಿಸಬೇಕು. ■

ಗಾಯದ ಮೇಲೆ ಬರೆ

10 ⏮

ಆವಿಯಾಗುವ ಪ್ರಮಾಣ, ಅಗತ್ಯ ಇತ್ಯಾದಿಗಳೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಅಂಕಿಅಂಶಗಳ ಸಮೇತ ದಿನವಿಡೀ ಕೂತುಕೊಂಡು ಚರ್ಚೆ ಮಾಡಿ ಒಂದು ಸೂತ್ರ ಮತ್ತು ಆಧಾರದನ್ವಯ ದಿನಕ್ಕೆ 3,000 ಕ್ಯೂಸೆಕ್ಸ್ ಬಿಡಬೇಕೆಂದು ತೀರ್ಮಾನ ಕೊಟ್ಟಿತು. ಇದು ಸಹ ಸರಿಯಲ್ಲ ಎಂದು ಅದಕ್ಕೆ ಬೇಕಾದ ವೈಜ್ಞಾನಿಕ ತರ್ಕ ಮತ್ತು ಅಂಕಿಅಂಶಗಳನ್ನು ಕೊಟ್ಟು, ಎರಡೂ ರಾಜ್ಯಗಳು ವಾದಿಸಬಹುದು. ಅವುಗಳಲ್ಲಿರುವ ಅಂಶಗಳು ಮನವರಿಕೆಯಾಗುವಂತೆ ಇದ್ದರೆ ಮೇಲುಸ್ತುವಾರಿ ಸಮಿತಿ ಕೊಟ್ಟ ತೀರ್ಮಾನವನ್ನೂ ಉನ್ನತ ನ್ಯಾಯಸ್ಥಾನವಾದ ಸುಪ್ರೀಂಕೋರ್ಟ್ ಬದಲಿಸುವ ಅಧಿಕಾರವನ್ನು ಹೊಂದಿದೆ ಎಂಬುದೇನೋ ನಿಜ.

ಆದರೆ ಇಂದು ಸುಪ್ರೀಂಕೋರ್ಟ್ ಮೇಲುಸ್ತುವಾರಿ ಸಮಿತಿ ಹೇಳಿದ 3000 ಕ್ಯುಸೆಕ್ಸ್ ಪ್ರಮಾಣವನ್ನು 6000 ಎಂದು ಬದಲಿಸಿರುವುದಕ್ಕೆ ಏನು ತರ್ಕ ಎಂಬುದರ ಬಗ್ಗೆ ಸುಪ್ರೀಂಕೋರ್ಟ್ ಒಂದೇ ಒಂದು ಅಂಶವನ್ನೂ ಹೇಳಿಲ್ಲ. ಅಂದರೆ ಅದಕ್ಕೆ ಯಾವುದೇ ವೈಜ್ಞಾನಿಕ ತರ್ಕ ಇಲ್ಲ, ಕಾನೂನು ಅಥವಾ ನ್ಯಾಯಿಕ ಅಂಶಗಳು ಇಲ್ಲ, ಇದು ಏಕಪಕ್ಷೀಯವಾದದ್ದು ಹಾಗೂ ಅವೈಜ್ಞಾನಿಕ ಖಾಜಿ ನ್ಯಾಯದ ಸ್ವರೂಪದ್ದು. ಏಕೆಂದರೆ ಸೆಪ್ಟೆಂಬರ್ 5ರಂದು ತಮಿಳುನಾಡು 20000 ಕ್ಯುಸೆಕ್ಸ್ ಕೇಳಿದ್ದರು. ಕರ್ನಾಟಕ 10000 ಬಿಡುತ್ತೇವೆಂದು ಹೇಳಿತ್ತು. ಆಗಲೂ ಸುಪ್ರೀಂಕೋರ್ಟ್ ಯಾವುದೇ ತರ್ಕವಿಲ್ಲದೆ ಅವೆರಡರ ಮಧ್ಯದ ಪ್ರಮಾಣ 15,000 ಎಂದು ನಿಗದಿ ಮಾಡಿತು. ನಂತರ ಸೆಪ್ಟೆಂಬರ್ 12 ರಂದು ಕರ್ನಾಟಕ 9,000 ಎಂದರೆ ತಮಿಳುನಾಡು 15,000 ಕ್ಕಿಳಿಯಿತು. ಆಗ ಕೋರ್ಟ್ ಅದರ ಮಧ್ಯದ 12,000 ಕ್ಯುಸೆಕ್ಸ್ ಎಂದು ಹೇಳಿತು. ಇಂದು ತಮಿಳುನಾಡು 9000 ಕೇಳಿತು. ಮೇಲುಸ್ತುವಾರಿ ಸಮಿತಿ 3000 ಎಂದು ಹೇಳಿತ್ತು. ಕೋರ್ಟ್ ಅದರ ಮಧ್ಯದ ಪ್ರಮಾಣ 6000 ಎಂದು ನಿಗದಿ ಮಾಡಿದೆ. ಆದರೆ ಕರ್ನಾಟಕವು ನ್ಯಾಯಾಲಯದ ಮುಂದಿಟ್ಟ ಅತ್ಯಂತ ಬವಣೆಯ ಕಥೆಯನ್ನಾಗಲೀ, ಇನ್ನಿತರ ಯಾವುದೇ ವಾದವನ್ನಾಗಲೀ ಪರಿಗಣಿಸಿಯೇ ಇಲ್ಲ.

ಮೇಲಾಗಿ ನೀರಿನ ಪ್ರಮಾಣ ನಿಗದಿ ಮಾಡುವ ಜವಾಬ್ದಾರಿ ನ್ಯಾಯಮಂಡಳಿಯ ತೀರ್ಮಾನದಂತೆ ಮತ್ತು ಈ ಹಿಂದಿನ ಸುಪ್ರೀಂಕೋರ್ಟಿನ ತೀರ್ಮಾನದಂತೆ, ಮೇಲುಸ್ತುವಾರಿ ಸಮಿತಿಯದ್ದೇ ವಿನಃ ಸುಪ್ರೀಂಕೋರ್ಟಿನದ್ದಲ್ಲ. ಸೆಪ್ಟೆಂಬರ್ 5 ರಂದು ಇದೇ ಪೀಠ ಕೊಟ್ಟ ಆದೇಶದಲ್ಲೂ ಇದು ಸ್ಪಷ್ಟವಾಗಿದೆ. ಹೀಗಾಗಿ ಇದು ಅನ್ಯಾಯಯುತ ಮತ್ತು ಅವೈಜ್ಞಾನಿಕವಾದ ಮತ್ತು ಅನುಷ್ಠಾನ ಮಾಡಲು ಅಸಾಧ್ಯವಾದ ಆದೇಶವಾಗಿದೆ. ತಾನೇ ಎರಡೆರಡು ಬಾರಿ ಕೊಟ್ಟ ತೀರ್ಮಾನವನ್ನು ತಾನೇ ಮೀರುವುದೆಂದರೆ, ಸುಪ್ರೀಂಕೋರ್ಟಿನಂತಹ ಸ್ಥಾನದ ಘನತೆಯನ್ನು ಅದೇ ಕಳೆದುಹಾಕಿದೆ.

ಆ) ಕಾವೇರಿ ನಿರ್ವಹಣಾ ಮಂಡಳಿ: ಈ ತೀರ್ಪಿನಲ್ಲಿ ಎಲ್ಲಕ್ಕಿಂತ ಅಸಾಂವಿಧಾನಿಕ ಮತ್ತು ಅನ್ಯಾಯಯುತವಾದ ಆದೇಶ ನಾಲ್ಕು ವಾರಗಳಲ್ಲಿ ಕಾವೇರಿ ನಿರ್ವಹಣಾ ಮಂಡಲಿ ರಚಿಸಬೇಕೆಂದಿರುವುದು. ಏಕೆಂದರೆ:

ಕಾವೇರಿ ನಿರ್ವಹಣಾ ಮಂಡಳಿಯನ್ನು ರಚಿಸಬೇಕು ಎನ್ನುವುದು ನ್ಯಾಯಮಂಡಲಿಯ ಅಂತಿಮ ಆದೇಶಗಳಲ್ಲಿ ಒಂದು. ಕರ್ನಾಟಕ ಮತ್ತು ತಮಿಳುನಾಡು ಎರಡೂ ಕೂಡ ಇಡೀ ಈ ಅಂತಿಮ ಆದೇಶವನ್ನೇ ಸುಪ್ರೀಂಕೋರ್ಟಿನಲ್ಲಿ ಪ್ರಶ್ನಿಸಿವೆ. ಸುಪ್ರೀಂಕೋರ್ಟ್ ಮೇಲ್ಮನವಿಯನ್ನು ಅಂಗೀಕರಿಸಿರುವುದಲ್ಲದೆ ಈ ಅರ್ಜಿಯಲ್ಲಿ ಹಲವು ಸಾಂವಿಧಾನಿಕ ಅಂಶಗಳಿರುವುದರಿಂದ ಅದನ್ನು ತ್ರಿಸದಸ್ಯ ಪೀಠಕ್ಕೆ ವರ್ಗಾಯಿಸಿದೆ. ಹೀಗಾಗಿ ಕಾವೇರಿ ನಿರ್ವಹಣಾ ಮಂಡಳಿಯ ರಚನೆಯೂ ಒಳಗೊಂಡಂತೆ ಇಡೀ ಅಂತಿಮ ಆದೇಶ ಈಗ ದ್ವಿಸದಸ್ಯ ಪೀಠಕ್ಕಿಂತ ಉನ್ನತವಾದ ತ್ರಿಸದಸ್ಯ ಪೀಠದ ಮುಂದಿದೆ. ಹೀಗಿರುವಾಗ ಕಾವೇರಿ ಮಂಡಲಿ ರಚಿಸಲು ದ್ವಿಸದಸ್ಯ ಪೀಠ ತೀರ್ಮಾನ ಕೊಟ್ಟಿರುವುದೇ ಅಸಾಂವಿಧಾನಿಕ.

ಅಲ್ಲದೇ ಈ ನಿರ್ವಹಣಾ ಮಂಡಳಿ ನ್ಯಾಯಮಂಡಲಿ ಕೊಟ್ಟ ತೀರ್ಮಾನವನ್ನು ಅನುಷ್ಠಾನಕ್ಕೆ ತರುವ **implementation authority** ಅಷ್ಟೆ. ಆದರೆ ಎಷ್ಟು ಪ್ರಮಾಣದ ನೀರು ಹಂಚಿಕೆಯಾಗಬೇಕು ಎನ್ನುವ ಪ್ರಮಾಣವೇ ಸುಪ್ರೀಂಕೋರ್ಟಿನಲ್ಲಿ ತಗಾದೆಯಲ್ಲಿರುವಾಗ, ಸಂಕಷ್ಟ ಪರಿಹಾರ ಸೂತ್ರದ ಮಾನದಂಡಗಳೇ ತಕರಾರಿನಲ್ಲಿರುವಾಗ ಈ ನಿರ್ವಹಣಾ ಮಂಡಳಿಯ ರಚನೆಯೇ ಅನ್ಯಾಯಯುತವಾದದ್ದು. ಹೀಗಾಗಿ ಕೂಡಾ ಇದನ್ನು ಎಲ್ಲಾ ಪಕ್ಷಗಳು, ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ತಿರಸ್ಕರಿಸಬೇಕಿದೆ.

ಮೊದಲನೆಯ ಆದ್ಯತೆ

ತಕ್ಷಣವೇ ತೆಗೆದುಕೊಳ್ಳಬೇಕಾದ ಕ್ರಮಗಳು

1. ಕರ್ನಾಟಕ ಸರ್ಕಾರವು ಕೂಡಲೇ ಸರ್ವಪಕ್ಷಗಳ ಸಭೆ ಕರೆಯಬೇಕು. ಈಗಾಗಲೇ ಸಾಕಷ್ಟು ಬಾಧಿತವಾಗಿರುವ ಮಂಡ್ಯ ಜಿಲ್ಲೆಯ ರೈತರಿಗೆ ವಿಶ್ವಾಸ ಮೂಡಿಸುವ



ಉದ್ದೇಶದಿಂದ ಇದನ್ನು ಮಂಡ್ಯದಲ್ಲಿ ನಡೆಸಬೇಕು.

2. ಪ್ರಧಾನಿ ಮತ್ತು ರಾಷ್ಟ್ರಪತಿಗಳ ಬಳಿ ಎಲ್ಲಾ ಸಂಸದರು ಮತ್ತು ಶಾಸಕರ ನಿಯೋಗವನ್ನು ಒಯ್ಯಬೇಕು. ಯಾವ ಕಾರಣಕ್ಕೂ ತ್ರಿಸದಸ್ಯ ಪೀಠದ ಆದೇಶ ಬರುವತನಕ ಕಾವೇರಿ ನಿರ್ವಹಣಾ ಮಂಡಳಿಯ ರಚನೆ ಆಗಕೂಡದೆಂದು ಒತ್ತಾಯ ಮಾಡಬೇಕು. ಒಪ್ಪದಿದ್ದರೆ ಸಾಮೂಹಿಕ ರಾಜೀನಾಮೆ ನೀಡಬೇಕು.

3. ಸುಪ್ರೀಂಕೋರ್ಟ್ ಕಾವೇರಿ ನಿರ್ವಹಣಾ ಮಂಡಳಿಯನ್ನು ರಚಿಸಲು ಸೂಚಿಸಿರುವುದು ಕೇಂದ್ರ ಸರ್ಕಾರಕ್ಕೆ. ಯಾವ ಕಾರಣಕ್ಕೂ ಈಗಲೇ ಕಾವೇರಿ ಮಂಡಳಿ ಸಾಧ್ಯವಿಲ್ಲವೆಂದು ಅಫಿಡವಿಟ್ ಮಂಡಿಸಬೇಕೆಂದು ಪ್ರಧಾನಿಯವರನ್ನು ಆಗ್ರಹಿಸಬೇಕು.

4. ಈಗಾಗಲೇ ಕಾವೇರಿ ಮೇಲುಸ್ತುವಾರಿ ಸಮಿತಿ ಸೂಚಿಸಿರುವಂತೆ ತಜ್ಞರ ಸಮಿತಿ ಮರು ಪರಿಶೀಲನೆ ಮಾಡದ ಹೊರತು 6000 ಕ್ಯುಸೆಕ್ಸ್ ಹರಿಸುವುದಿಲ್ಲವೆಂಬ ತೀರ್ಮಾನವನ್ನು ಸ್ಪಷ್ಟವಾಗಿ ಘೋಷಿಸಬೇಕು.

ಇವೆಲ್ಲವನ್ನೂ ಮಾಡುವಾಗ ಈವರೆಗೆ ಅವರಿವರ ಮೇಲೆ ಗೂಬೆ ಕೂರಿಸುತ್ತಾ ಕೇಂದ್ರ ಸರ್ಕಾರವನ್ನು ರಕ್ಷಿಸುತ್ತಿರುವ ಬಿಜೆಪಿ ಪಕ್ಷವು ಜವಾಬ್ದಾರಿಯಿಂದ ವರ್ತಿಸಬೇಕು. ಪ್ರಧಾನಿಯ ಪಾತ್ರ ಈಗ ಎಲ್ಲಕ್ಕಿಂತ ಮುಖ್ಯ ಎಂಬುದನ್ನು ಪ್ರಧಾನಿಯವರಿಗೆ ಮನವರಿಕೆ ಮಾಡುವ ಜವಾಬ್ದಾರಿ ಸಹಜವಾಗಿ ಬಿಜೆಪಿ ಸಂಸದರದ್ದೇ ಆಗಿರುತ್ತದೆ.

ಎರಡನೆಯ ಆದ್ಯತೆ

ಅಸಲೀ ಸಮಸ್ಯೆಗೆ ಅಸಲೀ ಪರಿಹಾರವನ್ನು ಕೊಡಿ

ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ ನೀರಿನ ಹಂಚಿಕೆಯ ತಗಾದೆಗೆ ಸಂಬಂಧಿಸಿದಂತೆ ಈ ಸದ್ಯ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಮೇಲೆ ಬರೆಯಲಾಗಿದೆ. ನ್ಯಾಯದ ದೃಷ್ಟಿಯಿಂದ, ಕುಡಿಯುವ ನೀರಿನ ದೃಷ್ಟಿಯಿಂದ ಮತ್ತು ಭವಿಷ್ಯದ ದೃಷ್ಟಿಯಿಂದ ಮೇಲಿನ ಕ್ರಮಗಳು ಅತ್ಯಂತ ಮುಖ್ಯವಾದುದಾಗಿವೆ. ಆದರೆ ಸಂಕಷ್ಟದಲ್ಲಿರುವ ರೈತರ ಸದ್ಯದ ಸಮಸ್ಯೆಗೆ ಇವ್ಯಾವುವೂ ಪರಿಹಾರವನ್ನು ಒದಗಿಸಲಾರವು. ಈಗಾಗಲೇ ಮೇಲೆ ವಿವರಿಸಿರುವಂತೆ ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರು ತೀವ್ರವಾದ ಸಂಕಷ್ಟದಲ್ಲಿದ್ದಾರೆ. ಆಧಾರಸಹಿತವಾಗಿ ಹೇಳಬಹುದಾದುದೇನೆಂದರೆ, ಈ ಸಮಸ್ಯೆಯನ್ನು ಪರಿಹರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಳೆದೆರಡು ವರ್ಷಗಳಲ್ಲಿ ಪರಿಣಾಮಕಾರಿಯಾದ ಏನನ್ನೂ ಮಾಡಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವ ರೈತರಿಗೆ 'ಮನ್ ಕೀ ಬಾತ್'ನ ಭಾಷಣದ ಮೂಲಕ, 'ಮಾನವ ಜನ್ಮ ದೊಡ್ಡದು, ರೈತರ ಜನ್ಮ ಇನ್ನೂ ದೊಡ್ಡದು' ಎಂದು ದೊಡ್ಡ ಹೋರ್ಡಿಂಗ್‌ಗಳನ್ನು ಹಾಕಿಸುವ ಮೂಲಕ ವಿಶ್ವಾಸ ತುಂಬುವುದು ಸಾಧ್ಯವಿಲ್ಲ. ಈಗಿನ ಜಲಾಶಯಗಳ ನೀರಿನ ಮಟ್ಟವು ರೈತರ ಬೆಳೆಗಳಿಗೆ ನೀರು ಇಲ್ಲವೆಂಬುದನ್ನು ಖಚಿತಪಡಿಸುತ್ತಿರುವುದರಿಂದ, ಅವಿಶ್ವಾಸ ಮತ್ತು ಆತಂಕ ಅವರಿಗೆ ಇನ್ನೂ ಹೆಚ್ಚಾಗಲಿದೆ. ಅಸಲೀ ಸಮಸ್ಯೆ ಇದೇ ಆಗಿದೆ. ಇದಕ್ಕೇನು ಪರಿಹಾರ?

ರೈತರ ಬೆಳೆ ನಷ್ಟಕ್ಕೆ ಪರಿಹಾರ ಕೊಡಿ ಎಂಬುದು ಸುಮ್ಮನೇ ಘೋಷಣೆಯಾಗಬಾರದು

ರೈತರಿಗೆ ಬರಪರಿಹಾರ ಅಥವಾ ಬೆಳೆ ನಷ್ಟ ಪರಿಹಾರವನ್ನು ಕೊಡುವುದು ಸರ್ಕಾರದ ಮಾನದಂಡಗಳ ಪ್ರಕಾರ ಬರ ಇದ್ದರೆ ಮಾತ್ರ. ಆ ಪ್ರದೇಶದಲ್ಲಿ ವಾಡಿಕೆಗಿಂತ ಗಣನೀಯ ಪ್ರಮಾಣದಲ್ಲಿ ಮಳೆ ಕಡಿಮೆಯಾದರೆ, ಆ ತಾಲೂಕನ್ನು ಅಥವಾ ಇಡೀ ಜಿಲ್ಲೆಯನ್ನು ಬರಪೀಡಿತ ಎಂದು ಘೋಷಿಸಲಾಗುತ್ತದೆ. ಬೆಳೆ ನಷ್ಟದ ಪ್ರಮಾಣವನ್ನು ಅಂದಾಜು ಮಾಡಲಾಗುತ್ತದೆ ಮತ್ತು ಅದರ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿ, 'ನೈಸರ್ಗಿಕ ವಿಕೋಪ ನಿಧಿ'ಯಿಂದ ನೆರವು ಕೇಳಲಾಗುತ್ತದೆ. ಕೇಂದ್ರವು ತನ್ನದೇ ತಂಡವನ್ನು ಇದರ ಸಮೀಕ್ಷೆಗೆ ಕಳಿಸುತ್ತದೆ. ಬಹುತೇಕ ಎಲ್ಲಾ ಸಂದರ್ಭಗಳಲ್ಲೂ ಈ ತಂಡವು, ರಾಜ್ಯ ಸರ್ಕಾರದ ಅಂದಾಜಿಗಿಂತ ಕಡಿಮೆ ನಷ್ಟವನ್ನು ಅಂದಾಜಿಸುತ್ತದೆ ಹಾಗೂ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಕೇಂದ್ರವು ಅದಕ್ಕಿಂತ ಕಡಿಮೆ ಹಣವನ್ನು ಮಂಜೂರು ಮಾಡುತ್ತದೆ. ಈ ರೀತಿಯಾಗಿ ಬಿಡುಗಡೆಯಾಗಿ ಬರುವ ಹಣದಲ್ಲಿ ಎಷ್ಟು ಕೊಡಬೇಕೆಂಬುದರ ಕುರಿತೂ ಕಠಿಣವಾದ ನಿಯಮಗಳಿವೆ. ಎಷ್ಟೇ ನಷ್ಟವಾಗಿದ್ದರೂ ರಾಜ್ಯ ಸರ್ಕಾರವು ಆ ಹಣದಲ್ಲಿ ಒಂದು ಎಕರೆಗೆ 5,500 ರೂ.ಗಳಿಗಿಂತ ಹೆಚ್ಚು ಕೊಡುವ ಹಾಗಿಲ್ಲ. ಈ ಸಾರಿ ಭತ್ತದ ನಾಟಿಗೆ ಒಂದು ಎಕರೆಗೆ ಕನಿಷ್ಠವೆಂದರೂ 15,000 ರೂ.ಗಳು ಖರ್ಚಾಗಿದೆ. ನಾಟಿಗೇ 15,000 ರೂ. ಖರ್ಚಾದರೂ, ಬೆಳೆಯ ಕಡೆಯ ಹಂತದಲ್ಲಿ ನಷ್ಟ ಸಂಭವಿಸಿದರೂ ಗರಿಷ್ಠ 5,500 ರೂ. ಮಾತ್ರ ಪರಿಹಾರ ಸಿಗುತ್ತದೆ.

ಎಂದೂ ಯಾರಿಗೂ ಈ 5,500 ರೂ.ಗಳು ಸಹ ಸಿಗುವುದಿಲ್ಲ. ಏಕೆಂದರೆ, ಮೇಲೆ ಹೇಳಿರುವಂತೆ ರಾಜ್ಯ ಸರ್ಕಾರದ ಅಂದಾಜನ್ನು, ಕೇಂದ್ರ ತಂಡ ತುಂಡರಿಸಿ, ಅದನ್ನು ಕೇಂದ್ರ ಸರ್ಕಾರ ತುಂಡರಿಸಿ ಅನುದಾನ ಬಿಡುಗಡೆ ಮಾಡುತ್ತದೆ. ಹೀಗಾಗಿಯೇ ಕಳೆದ ವರ್ಷ ಕಬ್ಬಿನ ಬೆಳೆ ನಷ್ಟಕ್ಕೆ ಸಿಕ್ಕಿದ್ದು ಎಕರೆಗೆ 900 ರೂ.ಗಳಿಂದ ಹೆಚ್ಚೆಂದರೆ 2,500 ರೂ.ಗಳು ಮಾತ್ರ.

ಈ ವರ್ಷ ರೈತರಿಗೆ ಒಂದು ರೂಪಾಯಿ ಬರುವುದೂ ಕಷ್ಟವಿದೆ

ಈ ವರ್ಷ ಇದೂ ಸಹ ಬರುವುದಿಲ್ಲ. ಏಕೆಂದರೆ, ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಬರವಿಲ್ಲ! ಇಲ್ಲಿ ವಾಡಿಕೆಗಿಂತ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿಲ್ಲ, ಆಗಸ್ಟ್‌ನಲ್ಲಿ ತುಂಬಾ ಕಡಿಮೆ ಬಂದಿತ್ತು, ಆದರೆ, ಕಡೆಯ ದಿನ, ಆ.31ರಂದು ದೊಡ್ಡ ಮಳೆಯು ತಿಂಗಳ ಸರಾಸರಿಯನ್ನು ಹೆ... ಆ ಮಳೆಯಿಂದ ನಯಾಪೈಸೆ ಪ್ರಯೋಜ... ಆಗಲಿಲ್ಲವೆಂದರೆ ಕೇಳುವವರ್‍ಯಾರು? ಮಾನದಂಡಗಳ... ಇದು 'ಸಾಮಾನ್ಯ ಮಾನ್‌ಸೂನ್' ಅಂತೆ. ... ತಮಿಳುನಾಡು ಸುಪ್ರೀಂಕೋರ್ಟಿನ ಮುಂದೆಯೂ ... ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಈ ಸಾರಿ ಶೇ.2ರಷ್ಟು ಮಳೆ ಕಡಿಮೆ ಎಂದು ಹೇಳಿದೆ. ಪಶ್ಚಿಮಘಟ್ಟ ಪ್ರದೇಶದಲ್ಲಿ ಬೀಳುವ ಮಳೆಯಿಂದ ಜಲ... ತುಂಬುತ್ತದೆಯೇ ಹೊರತು, ಈ ಭಾಗದ ಮಳೆ... ಅಲ್ಲ, ಹಾಗಾಗಿ ಶೇ.50ಕ್ಕಿಂತಲೂ ಹೆಚ್ಚಿನ ಮಳೆ ... ಇರುವ ಪಶ್ಚಿಮಘಟ್ಟ ಪ್ರದೇಶದ ಮಳೆಯ... ತುಂಬಬೇಕಾದ ಅಣೆಕಟ್ಟುಗಳು ತುಂಬಿಲ್ಲ.

ಆದ್ದರಿಂದಲೇ ಒಂದು ವಿಶೇಷ ಪ್ಯಾಕೇಜ್‌ನ ... ಈ ಭಾಗಕ್ಕಿದೆ. ಈ ಪ್ಯಾಕೇಜ್‌ಗೆ ಇಲ್ಲಿನ ರೈತರು ... ರೀತಿಯಿಂದಲೂ ಅರ್ಹರು. ಕಳೆದ ವರ್ಷದ ಸ... ಸರ್ಕಾರಗಳು ಯಾವ ರೀತಿಯಲ್ಲೂ ಸ್ಪಂದಿ... ಈಗಲಾದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ... ಅಚ್ಚುಕಟ್ಟು ಪ್ರದೇಶಕ್ಕೆ ಮಾತ್ರವಲ್ಲದೇ, ಕರ್ನಾಟ... ಬರಪರಿಸ್ಥಿತಿ ತಲೆದೋರಿರುವ ಎಲ್ಲಾ ಜಿಲ್ಲೆಗಳ ... ಅವರ ಹಕ್ಕಾದ ಪರಿಹಾರವನ್ನು ತಲುಪಿಸಬೇಕು.


ರೈತರಿಗೆ ಪರಿಹಾರ ಒದಗಿಸಲು 65:35 ಸೂತ್ರ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಜವಾಬ್ದಾರಿಯಿಂದ ನುಣುಚಿಕೊಂಡು ಪರಸ್ಪರರ ಆರೋಪಗಳನ್ನು ಮಾಡುತ್ತಿದ್ದಾರೆ. ಇಂತಹ ರಾಜಕಾರ... ನಾವು ತಿರಸ್ಕರಿಸಬೇಕು. ರಾಜ್ಯ ಸರ್ಕಾರದ ಖಜಾನ... ಸಂಪನ್ಮೂಲಗಳ ಕೊರತೆ ಇರುತ್ತದೆಂಬುದೇನೋ ... ಆದರೆ, ತನ್ನ ಪಾಲನ್ನು ಅದು ಮೊದಲು ಬಿ... ಮಾಡಿ, ಆ ನಂತರ ಕೇಂದ್ರ ಸರ್ಕಾರದಿಂದ ಹಣ ಕೇಳ... ಅವರು ಕೊಡದಿದ್ದರೆ, ಹೋರಾಟಕ್ಕಿಳಿಯಬೇಕು. ಅದ... ಕೇಂದ್ರ ಸರ್ಕಾರವೂ ಮೊದಲು ತನ್ನ ಕರ್ತವ್ಯ ನಿಭಾ... ಅನಂತರ ರಾಜ್ಯ ಸರ್ಕಾರದತ್ತ ಬೆರಳು ಮಾಡಬೇಕು. ... ರಾಜ್ಯದ ರೈತರಿಗೆ ಅಗತ್ಯವಿರುವ ಪ್ಯಾಕೇಜ್‌ನ ... ಜವಾಬ್ದಾರಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾ... 65:35ರ ಅನುಪಾತದಲ್ಲಿ ಹಂಚಿಕೊಂಡು ನಿಭಾಯಿಸ...


ಈ ಕ್ರಮಗಳು ಅಗತ್ಯವಾಗಿ ಆಗಲೇಬೇಕು

1. ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ಕೊಡ... ವೈಜ್ಞಾನಿಕ ಪರಿಹಾರವೆಂದರೆ, ಕರ್ನಾಟಕ ಸ... ನೇಮಿಸಿರುವ ಬೆಳೆ ಬೆಲೆ ನಿಗದಿ ಆಯೋಗವ... ಹಾಕಿರುವಷ್ಟು ಖರ್ಚು ಮತ್ತು ಅದರ ಮೇಲೆ ... ಸರ್ಕಾರವೇ ನೇಮಿಸಿದ್ದ ರಾಷ್ಟ್ರೀಯ ರೈತ ಆಯೋ... ಶಿಫಾರಸ್ಸು ಮಾಡಿದ ಒಂದೂವರೆ ಪಟ್ಟು ... ಇದಾಗದಿದ್ದಲ್ಲಿ, ಎಕರೆಗೆ 50,000 ... ಪರಿಹಾರಧನವನ್ನು ನೀಡಬೇಕು.
2. ರೈತರ ಎಲ್ಲಾ ಸಾಂಸ್ಥಿಕ ಸಾಲಮನ್ನಾ ಮಾಡ... ಹೊಸ ದೀರ್ಘಾವಧಿ ಸಾಲ ನೀಡಬೇಕು.
3. ಒಣಭೂಮಿಯಲ್ಲಿ ಅಥವಾ ಅಣೆಕಟ್ಟಿನ ನೀರ... ಬೇಸಾಯ ಮಾಡುವ ರೈತರಿಗೆ ಎಕರೆಗೆ 10... ರೂ.ಗಳ ಪ್ರೋತ್ಸಾಹಧನ ಘೋಷಿಸಬೇಕು.
4. ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾ... ರೂಪಿಸಿರುವ ಬರ ನಿರ್ವಹಣಾ ನೀತಿ ... ಮಾರ್ಗಸೂಚಿ ಸೂತ್ರಗಳನ್ನು ಕಟ್ಟುನಿ... ಪಾಲಿಸಬೇಕು.
5. ಈ ಸಾರಿ ನೀರು ಬಿಡದೇ ಹೋದಲ್ಲಿ ಸಮರೋ... ಯಲ್ಲಿ ಕೆರೆ ಕಟ್ಟೆಗಳ ಹೂಳೆತ್ತಿಸಬೇಕು ಮತ್ತು ... ನಾಲೆಗಳ ರಿಪೇರಿ ಕೆಲಸ ಮುಗಿಸಿಕೊಳ್ಳಬೇಕು.

ಈ ನಿಟ್ಟಿನಲ್ಲಿ ಎಲ್ಲಾ ಚಳವಳಿಗಾರರು ಒಂದೇ ರೀ... ಹಕ್ಕೊತ್ತಾಯಗಳನ್ನು ಮುಂದಿಟ್ಟು ಸಮಗ್ರ ಆಂದೋ... ರೂಪಿಸದಿದ್ದಲ್ಲಿ ಸರ್ಕಾರಗಳು ಬಗ್ಗುವ ಸಾಧ್ಯತೆ... ಅದರಲ್ಲೂ ಹೆಚ್ಚಿನ ಜವಾಬ್ದಾರಿ ಹೊರಬೇಕಾದ ಕೇ... ಸರ್ಕಾರವಂತೂ ರೈತರ ಪಾಲಿಗೆ ಸತ್ತು ಮಲಗಿದೆ. ಹೀ... ಈ ಚಳವಳಿಯು ನಿರ್ದಿಷ್ಟ ಗುರಿಯೊಂದಿಗೆ ನಡೆ... ಕಾಲನಿಗದಿತ ಐಕ್ಯ ಹೋರಾಟವಾಗಿ ರೂಪು ತಳೆಯ... ಈಗಾಗಲೇ ಮಂಡ್ಯದಲ್ಲಿ ಕರ್ನಾಟಕ ಜನಶಕ್ತಿ ಮತ್ತು ... ಹೋರಾಟ ಸಮಿತಿಯು ಕರೆದಿದ್ದ ಸಭೆಗೆ ಬಂದ ... ಸಂಘಟನೆಗಳ ಪ್ರತಿನಿಧಿಗಳು ಜಿಲ್ಲಾ ಮಟ್ಟದಲ್ಲಿ ಅ... ಹೋರಾಟ ರೂಪಿಸುವ ಕುರಿತು ತೀರ್ಮಾನ ತೆಗೆದುಕೊ... ದ್ದಾರೆ. ರಾಜ್ಯ ಮಟ್ಟದಲ್ಲಿ 'ಜನಪರ್ಯಾಯ'ದ ಅ... ದೊಂದಿಗೆ ರೂಪುಗೊಳ್ಳುತ್ತಿರುವ 'ಜನಾಂದೋಲ... ಮಹಾಮೈತ್ರಿ' ಸಹ ಈ ಕುರಿತು ನಿನ್ನೆ ತೀರ್ಮಾ... ಕೈಗೊಂಡಿದೆ. ರಾಜ್ಯದ ಎಲ್ಲಾ ಪ್ರಜ್ಞಾವಂತರೂ ... ಹೋರಾಟದ ಜೊತೆಗೆ ಕೈಜೋಡಿಸುವ ಅಗತ್ಯವಿದೆ



ಜನ ಧನ ಯೋಜನೆ: ಮೋಸದಾಟ



ತಮ್ಮ ಕುದುರೆ ನಿರಂತರವಾಗಿ ಓಡುತ್ತಿರಬೇಕು, ನೀವೆ ಮಾಡುತ್ತಲಿರಬೇಕೆಂದು ಬಯಸುವ ಕುದುರೆ ಸವಾರರು ಕೋಲಿನ ತುದಿಗೆ ಕ್ಯಾರೆಟ್ ಕಟ್ಟಿ, ಕುದುರೆಯ ಬಾಯಿಗೆಟುಕದಷ್ಟು ದೂರದಲ್ಲಿ ಹಿಡಿಯುವ ಚಿತ್ರವನ್ನು ನೀವು ಕಂಡಿರಬಹುದು. ನರೇಂದ್ರ ಮೋದಿಯ ಭರಭರದ ಚುನಾವಣಾಪೂರ್ವ ಭರವಸೆಗಳಾದ "ಕಪ್ಪುಹಣ ವಾಪಸಾತಿ", "ಅಚ್ಛೇ ದಿನ್", "ಉತ್ತಮ ಆಡಳಿತ" ಇತ್ಯಾದಿಗಳ ಕತೆಯೂ ಇದೇ ಆಗಿದೆ. ಎಲ್ಲವೂ ಸಾಮಾನ್ಯ ಮತದಾರರ ಕೈಗೆಟುಕದಷ್ಟು ದೂರದಲ್ಲೆ ಉಳಿದಿವೆ ಎಂಬುದಕ್ಕೆ ಸಾಕ್ಷಿಯಾಗಿ ನಮ್ಮ ಮುಂದಿದೆ ಹೆಚ್ಚುತ್ತಿರುವ ನಿರುದ್ಯೋಗಿಗಳ ಸಂಖ್ಯೆ, ಗಗನಕ್ಕೇರಿರುವ ಅಗತ್ಯವಸ್ತುಗಳ ಬೆಲೆ, ರೈಲು ಪ್ರಯಾಣದಲ್ಲಿ ಉಬ್ಬರದ ಬೆಲೆ ನೀತಿ, ಕಾರ್ಪೊರೇಟುಗಳಿಗೆ ಕಾಲಮನ್ನಾ ಒಳಗೊಂಡಂತೆ ವಿವಿಧ ವಿನಾಯಿತಿ/ರಿಯಾಯಿತಿಗಳು, ಜಿಡಿಪಿ ದರದಲ್ಲಿ ಇಳಿಕೆ ಮುಂತಾದ ಬೆಳವಣಿಗೆಗಳು. ಈ ಕುರಿತು ದೇಶದ ಮೂಲೆಮೂಲೆಗಳಿಂದ ಬರುತ್ತಿರುವ ಟೀಕಾಪ್ರಹಾರವನ್ನು ಎದುರಿಸಲಾಗದ ಮೋದಿ ಸರ್ಕಾರ ಇದೀಗ ಮೆಲ್ಲಮೆಲ್ಲನೆ ತನ್ನ ಘೋಷಣೆಗಳಿಂದ ಹಿಂದೆ ಸರಿಯಲು ಯತ್ನಿಸತೊಡಗಿದೆ. ಅದರ ವಕ್ತಾರರೀಗ "ಅಚ್ಛೇ ದಿನ್" ಘೋಷಣೆ ತಮ್ಮದಲ್ಲವೆಂದು ಹೇಳಲಾರಂಭಿಸಿರುವುದು ಸ್ಪಷ್ಟವಾಗಿ ನುಣುಚಿಕೊಳ್ಳುವ ತಂತ್ರದ ಭಾಗ ಅಲ್ಲದೆ ಇನ್ನೇನು?! ಮುಂದಿನ ದಿನಗಳಲ್ಲಿ ಮೋದಿ ಸರ್ಕಾರ ಮತ್ತದರ ಸೈದ್ಧಾಂತಿಕ ಗುರು ಆರೆಸ್ಸೆಸ್ ಇನ್ನೂ ಏನೇನು ಸಮರ್ಥನೆಗಳನ್ನು, ಇನ್ನೂ ಯಾವ್ಯಾವ ವಿವರಣೆಗಳನ್ನು ನೀಡಲಿದ್ದಾರೆಂಬುದನ್ನು ಈಗಲೆ ಊಹಿಸಬಹುದಾಗಿದೆ.

ಇಂತಹುದೆ ಇನ್ನೊಂದು ಅಗ್ಗದ ಜನಪ್ರಿಯತೆ ಗಳಿಸುವ ಕಾರ್ಯಕ್ರಮವೆಂದರೆ ಮೋದಿಯ "ಜನ ಧನ ಯೋಜನೆ" (ಜಧಯೋ). ಇದರ ಪ್ರಧಾನ ಉದ್ದೇಶ ವಿವಿಧ ಸಬ್ಸಿಡಿ ಮೊತ್ತಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗಳಿಗೆ ಜಮೆ ಮಾಡುವುದು ಎನ್ನಲಾಗುತ್ತದೆ. ಇದಕ್ಕೋಸ್ಕರವೇ ಜಧಯೋ, ಆಧಾರ್ ಮತ್ತು ಮೊಬೈಲ್ ಸಂಖ್ಯೆಗಳನ್ನು ಒಂದಕ್ಕೊಂದು ಜೋಡಿಸಲಾಗಿದೆ. ಜನ ಧನ ಯೋಜನೆ ಮೋದಿಯ ಅತ್ಯಂತ ಯಶಸ್ವಿ ಯೋಜನೆಯೆಂದು ಟಾಂಟಾಂ ಮಾಡಲಾಗುತ್ತಿದೆ. ಒಂದು ವಾರದಲ್ಲಿ 1.8 ಕೋಟಿ ಜನಧನ ಖಾತೆಗಳನ್ನು ತೆರೆದು ಗಿನ್ನೆಸ್ ದಾಖಲೆ ನಿರ್ಮಿಸಿರುವ ಮೋದಿ ಸರ್ಕಾರವನ್ನು ಇನ್ನಿಲ್ಲದ ರೀತಿಯಲ್ಲಿ ಕೊಂಡಾಡಲಾಗುತ್ತಿದೆ.

ಮೋಸದಾಟ

ಆದರೆ ಇತ್ತೀಚಿನ ವರದಿಗಳ ಪ್ರಕಾರ ಜಧಯೋದಲ್ಲಿ ಭಾರಿ ಮೋಸದಾಟ ನಡೆದಿದೆ ಮತ್ತು ಹುಳುಕುಗಳನ್ನು ಮುಚ್ಚಿಹಾಕುವ ಸಕಲ ಪ್ರಯತ್ನಗಳಾಗುತ್ತಿವೆ. ವಾಸ್ತವದಲ್ಲಿ ಏನಾಗಿದೆ ಎಂದರೆ ಖಾತೆಗಳನ್ನು ತೆರೆಸಿದ ಬಳಿಕ ಅವು ಉಪಯೋಗವಾಗದೆ ಹಾಗೇ ಬಿದ್ದಿವೆ. ಇದುವರೆಗೆ ತೆರೆಯಲಾದ 22 ಕೋಟಿ ಖಾತೆಗಳ ಪೈಕಿ ಸುಮಾರು 30% ಖಾತೆಗಳಲ್ಲಿ ಚಿಕ್ಕಾಸಿಲ್ಲ, ವಹಿವಾಟುಗಳೂ ತೀರ ಕಡಿಮೆ ಎಂದು ಇದೇ ಫೆಬ್ರವರಿಯಲ್ಲಿ ನಡೆಸಲಾದ ಸಮೀಕ್ಷೆಯೊಂದು ತಿಳಿಸುತ್ತದೆ. ಹಾಗಾದರೆ ಇಷ್ಟೊಂದು ಖಾತೆಗಳಲ್ಲೇಕೆ ಶೂನ್ಯ ಡಿಪಾಜಿಟ್? ಅವನ್ನು ಯಾಕೆ ಬಳಸಲಾಗುತ್ತಿಲ್ಲ? ಇದಕ್ಕೊಂದು ಮುಖ್ಯ ಕಾರಣ ಏನೆಂದರೆ ಅವೆಲ್ಲ ಡ್ಯೂಪ್ಲಿಕೇಟ್ ಖಾತೆಗಳು. ಅರ್ಥಾತ್ ಈಗಾಗಲೆ ಖಾತೆಗಳನ್ನು ಹೊಂದಿರುವ ವ್ಯಕ್ತಿಗಳೆ ಜಧಯೋ ಖಾತೆ ತೆರೆದಿದ್ದಾರೆ. ಇನ್ನೊಂದು ಕಾರಣವೆಂದರೆ ಮೂಲತಃ ಈ ಯೋಜನೆಯೆ ದೋಷಪೂರಿತವಾಗಿದೆ. ಅದರೊಳಗೆ ಗ್ರಾಮೀಣ ಭಾಗಗಳ ಜನರಿಗೆ ಬೇಕಾಗಿರುವ ವಿವಿಧ ಬ್ಯಾಂಕು ಸೌಲಭ್ಯಗಳನ್ನು ಒದಗಿಸುವ ವ್ಯವಸ್ಥೆ ಇಲ್ಲ. ಹೀಗಿರುವಾಗ ಈ ಹೊಸ ಜಧಯೋ ಖಾತೆಗಳನ್ನು ತೆರೆಯುವುದರಿಂದ ಉಪಯೋಗವೇನೆಂಬ ಭಾವನೆ ಜನರಲ್ಲಿದೆ.

ಜಧಯೋದಲ್ಲಿ ಶೂನ್ಯ ಡಿಪಾಜಿಟ್ ಖಾತೆಗಳೆ ಹೆಚ್ಚು ಎಂಬ ವರದಿಗಳು ಬಂದ ತಕ್ಷಣ ಅಲರ್ಟ್ ಆದ ಮೋದಿ ಸರ್ಕಾರ ಕೆಲವೊಂದು ಅಂಕಿಅಂಶಗಳನ್ನು ಬಿಡುಗಡೆಗೊಳಿಸಿದೆ. ಸರ್ಕಾರದ ಪ್ರಕಾರ ಶೂನ್ಯ ಖಾತೆಗಳ ಸಂಖ್ಯೆ ಸುಮಾರು ಶೇಕಡಾ 74ರಿಂದ ಶೇಕಡ 24ಕ್ಕಿಳಿದಿದೆ. 6 ತಿಂಗಳುಗಳ ಹಿಂದೆ ಅದು ಶೇಕಡಾ 28-29ರಷ್ಟಿತ್ತು. ಶೂನ್ಯ ಡಿಪಾಜಿಟ್ ಖಾತೆಗಳಲ್ಲಿ 'ಒಂದು ರೂಪಾಯಿ' (ರೂ 1-10) ಜಮೆಯಾಗಿರುವುದೆ ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಸೆಪ್ಟಂಬರ್ 13ರ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟಗೊಂಡ ವರದಿಯೊಂದರ ಪ್ರಕಾರ ಹದಿನೆಂಟು ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ 1.05 ಕೋಟಿ 'ಒಂದು ರೂಪಾಯಿ' ಖಾತೆಗಳಿವೆ. ಅತ್ಯಧಿಕ ಜಧಯೋ ಖಾತೆಗಳಿರುವ 12 ದೊಡ್ಡ ಬ್ಯಾಂಕುಗಳಲ್ಲಿ ಪರಿಸ್ಥಿತಿ ಹೇಗಿದೆಯೆಂದರೆ ಅವುಗಳ ಪೈಕಿ ಶೇಕಡಾ 36ರಷ್ಟು 'ಒಂದು ರೂಪಾಯಿ' ಖಾತೆಗಳಾಗಿವೆ. ಕೆಲವು ಉದಾಹರಣೆಗಳನ್ನು ನೋಡುವುದಾದರೆ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿರುವ ಒಟ್ಟು 1.36 ಕೋಟಿ ಜಧಯೋ ಖಾತೆಗಳಲ್ಲಿ ಶೇಕಡಾ 30ರಷ್ಟು 'ಒಂದು ರೂಪಾಯಿ' ಖಾತೆಗಳು. ಬ್ಯಾಂಕ್ ಆಫ್ ಬರೋಡಾದ 1.4 ಕೋಟಿ ಖಾತೆಗಳಲ್ಲಿ ಶೇಕಡಾ 14.8ರಷ್ಟು 'ಒಂದು ರೂಪಾಯಿ' ಖಾತೆಗಳು. ಯೂಕೊ ಬ್ಯಾಂಕಿನ 74.6 ಲಕ್ಷ ಖಾತೆಗಳಲ್ಲಿ ಶೇಕಡಾ 9.26ರಷ್ಟು 'ಒಂದು ರೂಪಾಯಿ' ಖಾತೆಗಳು.

ಗುಟ್ಟು ರಟ್ಟಾಯಿತು

ಆದರೆ ಇತ್ತೀಚೆಗೆ ಒಂದು ಸ್ವಾರಸ್ಯಕರ ಮಾಹಿತಿ ಹೊರಬಿದ್ದಿದೆ. ಅದೇನೆಂದರೆ ತಮ್ಮ ಅಕೌಂಟಿಗೆ 'ಒಂದು ರೂಪಾಯಿ' ಜಮೆ ಮಾಡಿದವರಾರೆಂದು ಹೆಚ್ಚಿನ ಖಾತೆದಾರರಿಗೆ ತಿಳಿದಿಲ್ಲ! ಹಾಗಾದರೆ ಖಾತೆಗಳಿಗೆ ಹಣ ಜಮೆ ಮಾಡಿದವರಾರು? ಆರು ರಾಜ್ಯಗಳಲ್ಲಿ ನಡೆಸಿದ ಸಮೀಕ್ಷೆಯೊಂದು ಹೇಳುವಂತೆ ಇವುಗಳಲ್ಲಿ ಬಹುತೇಕ ಡಿಪಾಜಿಟ್‌ಗಳನ್ನು ಖುದ್ದು ಬ್ಯಾಂಕ್ ಅಧಿಕಾರಿಗಳು ಮತ್ತು ಮ್ಯಾನೇಜರುಗಳೆ ಮಾಡಿದ್ದಾರೆ! ಇದಕ್ಕೆ "ಮೇಲಿನವರ ಒತ್ತಡ"ವೆ ಕಾರಣ ಎನ್ನಲಾಗಿದೆ. ಈ "ಮೇಲಿನವರು" ಯಾರೆಂದು ಬಿಡಿಸಿ ಹೇಳಬೇಕಾಗಿಲ್ಲ, ಇಲ್ಲವಾದರೆ ಯಾರಿಗಾದರೂ ಹುಚ್ಚೇ ಹೀಗೆ ಯಾರ್‍ಯಾರ ಖಾತೆಗಳಿಗೆ ಹಣ ಜಮೆ ಮಾಡಲು!! ಉದಾಹರಣೆಗೆ ಬ್ಯಾಂಕ್ ಆಫ್ ಬರೋಡಾದ ಒಂದು ನಿರ್ದಿಷ್ಟ ಶಾಖೆಯಲ್ಲಿ ತೆರೆಯಲಾದ 1000 ಖಾತೆಗಳಲ್ಲಿ ಹೆಚ್ಚಿನವುಗಳಿಗೆ ಅದೇ ಬ್ಯಾಂಕಿನ ಒಬ್ಬನೆ ಅಧಿಕಾರಿ ಒಂದೊಂದು ರೂಪಾಯಿ ಜಮೆ ಮಾಡಿದ್ದನೆಂದು ತಿಳಿದುಬಂದಿದೆ! ಇದಕ್ಕೆ ಬೇಕಾದ ದುಡ್ಡನ್ನು ಅವರೇನಾದರೂ ತಮ್ಮ ಕಿಸೆಯಿಂದ ಹಾಕಿದ್ದಾರೆಂದು ಭಾವಿಸಿದ್ದೀರಾ? ಇಲ್ಲ, ಅದೆಲ್ಲವನ್ನೂ ಹಲವೊಂದು ವಿಶೇಷ ಸವಲತ್ತುಗಳು ಮತ್ತಿತರ ವೆಚ್ಚಗಳಡಿ ಬ್ಯಾಂಕಿನಿಂದಲೆ ಪಡೆಯಲಾಗಿದೆ. ಶೂನ್ಯ ಖಾತೆಗಳ ಸಂಖ್ಯೆ ಕಡಿಮೆ ಮಾಡಬೇಕೆಂಬ ಒತ್ತಡ ಎದುರಿಸುತ್ತಿರುವ ಬ್ಯಾಂಕುಗಳು ಈಗೀಗ ಖಾತೆದಾರರು ತಮ್ಮ ಅಕೌಂಟುಗಳನ್ನು ಬಳಸುವ ಮುನ್ನ ಖಾತೆಗೆ ಹಣ ಜಮೆ ಮಾಡಲೇಬೇಕೆಂದು ಕೂಡ ಒತ್ತಾಯಿಸತೊಡಗಿವೆ.

ಒಟ್ಟಾರೆಯಾಗಿ ಹೇಳುವುದಾದರೆ ಜನ ಧನ್ ಯೋಜನೆಯನ್ನು ಬರೀ ಪ್ರಚಾರದ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಡೂಪ್ಲಿಕೇಟ್ ಖಾತೆಗಳು, ಆಧಾರ್ ಸಂಬಂಧಿತ ಸಮಸ್ಯೆಗಳು, ಗ್ರಾಮೀಣ ಬ್ಯಾಂಕುಗಳಲ್ಲಿ ಸೂಕ್ತ ಸೌಲಭ್ಯ ಯೋಜನೆಗಳಿಲ್ಲದಿರುವುದು ಮುಂತಾದ ಹಲವು ಕಾರಣಗಳಿಗಾಗಿ ಅದು ಯಶಸ್ಸು ಕಾಣುವ ಸಾಧ್ಯತೆಗಳು ತೀರಾ ಕಡಿಮೆ ಎನ್ನಬಹುದು.

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: 13-9-2016ರ thewire.in ಮತ್ತು scroll.in ಲೇಖನಗಳು)

ವಾತಾಪಿ, ಜೀರ್ಣೋಭವ!

ಕತೆ



ಒಂದಾನೊಂದು ಕಾಲದಲ್ಲಿ ಒಬ್ಬ ಮಹಾ ಪಂಡಿತನಿದ್ದ. ಅವನು ನಾಟ್ಯಶಾಸ್ತ್ರ ಪುರಾಣ, ಜ್ಯೋತಿಷ್ಯ ವೈದ್ಯಶಾಸ್ತ್ರ ಗಣಿತ, ಸಂಸ್ಕೃತ, ಸಾಹಿತ್ಯದಲ್ಲಿ ಮಹಾನ್ ಪಾಂಡಿತ್ಯವನ್ನು ಪಡೆದಿದ್ದ. ಅವನು ಎಷ್ಟೊಂದು ಪಾಂಡಿತ್ಯವನ್ನು ಪಡೆದಿದ್ದನೆಂದರೆ ಅವನನ್ನು ವಾದದಲ್ಲಿ ಸೋಲಿಸುವವರು ಇಡೀ ರಾಜ್ಯದಲ್ಲಿ ಯಾರೂ ಇರಲಿಲ್ಲ. ಅವನ ಪಾಂಡಿತ್ಯ ಮತ್ತು ಬುದ್ಧಿವಂತಿಕೆಯನ್ನು ನೋಡಿ ಒಬ್ಬ ಮಹಾರಾಜ ಅವನಿಗೆ ತನ್ನ ಆಸ್ಥಾನದಲ್ಲಿ ಆಶ್ರಯ ಕೊಟ್ಟ. ಕೆಲವೇ ದಿನಗಳಲ್ಲಿ ಅವನಿಗೆ ವಿಶೇಷ ಆದರ, ಗೌರವಗಳನ್ನು ನೀಡಿ ಪ್ರಧಾನಮಂತ್ರಿಯ ಸ್ಥಾನವನ್ನೂ ದಯಪಾಲಿಸಿದ. ಕೆಲ ಸಮಯದ ನಂತರ ಆಸ್ಥಾನದ ಇತರ ಸ್ಥಾನ-ಮಾನಗಳನ್ನು ತನ್ನವರಿಗೆ ಕೊಡಬೇಕು ಎಂದು ಆ ಪಂಡಿತ ಮಹಾರಾಜನ ಮನವೊಲಿಸಿ, ಅವರನ್ನು ಪ್ರಮುಖ ಸ್ಥಾನದಲ್ಲಿ ಕುಳ್ಳಿರಿಸಿದ. ತನ್ನವರ ಮೂಲಕ ರಾಜ್ಯದ ಜನರಿಗೆ ಕಿರುಕುಳ ಕೊಡಲು ಶುರು ಮಾಡಿದ.

ಇದುವರೆಗು ಮಹಾರಾಜನ ಆಶ್ರಯದಲ್ಲಿದ್ದ ಜನರಿಗೆ ಈಗ ನಡುಕ ಶುರುವಾಯಿತು. ದಿನೆ ದಿನೆ ಅವನ ಮತ್ತು ಅವನ ಜನರ ವಿದ್ಯೆ-ಬುದ್ಧಿ -ಶಕ್ತಿಗಳು ಹೆಚ್ಚಾಗತೊಡಗಿದವು. ಹೀಗೆ ಮುಂದುವರೆದರೆ ರಾಜ್ಯದಲ್ಲಿ ಇನ್ನು ತಮಗೆ ಉಳಿಗಾಲವಿಲ್ಲವೆಂದು ರಾಜ್ಯದ ಜನ ತಿಳಿದರು. ಪಂಡಿತನ ಹಾಗೆ ತಮಗೂ ವಿದ್ಯೆ ಇದ್ದರೆ ಮಹಾರಾಜನ ಆಸ್ಥಾನದಲ್ಲಿ ಸ್ಥಾನ ದೊರೆಯುವುದು ಎಂದು ಅವರಿಗೆ ಅರಿವಾಯಿತು. ಈ ಪಂಡಿತ ಮತ್ತು ಅವನ ಜನರಿಗೆ ಇಷ್ಟೊಂದು ವಿದ್ಯೆ ಹೇಗೆ ಸಿಗುತ್ತಿದೆ ಎಂದು ಆ ಜನರಿಗೆ ಮೊದಮೊದಲು ಅರ್ಥವಾಗಲಿಲ್ಲ, ಎಲ್ಲವೂ ಒಗಟಾಗಿ ಕಂಡಿತು. ಆ ಪಂಡಿತ ತನ್ನ ವಿದ್ಯೆಯ ಮೂಲವನ್ನು ಯಾರಿಗೂ ತಿಳಿಸದೆ ರಹಸ್ಯವಾಗಿಟ್ಟಿದ್ದ, ತನ್ನ ಜನರಿಗೆ ಮಾತ್ರ ಆ ರಹಸ್ಯವನ್ನು ತಿಳಿಸಿ, ಬೇರೆಯವರಿಗೆ ತಿಳಿಸಿಕೊಡಬಾರದೆಂದು ಆಜ್ಞೆ ಮಾಡುತ್ತಿದ್ದ. ಹಾಗಾಗಿ ಪಂಡಿತನ ಜನರೆಲ್ಲರೂ ತಮ್ಮ ವಿದ್ಯೆಯ ಮೂಲವನ್ನು ಯಾರಿಗೂ ಬಿಟ್ಟುಕೊಡದೆ ಬಚ್ಚಿಟ್ಟುಕೊಂಡಿದ್ದರು. ಹೀಗಾಗಿ ಎಷ್ಟು ಪ್ರಯತ್ನಪಟ್ಟರೂ ರಾಜ್ಯದ ಜನರಿಗೆ ಪಂಡಿತನ ವಿದ್ಯೆ ಬುದ್ಧಿ ಮತ್ತು ಪಾಂಡಿತ್ಯದ ಮೂಲ ಗೊತ್ತಾಗದೆ ಮಹಾರಾಜನ ದೃಷ್ಟಿಯಲ್ಲಿ ದಡ್ಡರೆನಿಸಿಕೊಂಡಿದ್ದರು. ಏನೂ ತೋಚದೆ ಈ ಜನರೆಲ್ಲರೂ ಸುಮ್ಮನಿದ್ದು "ಎಲ್ಲಾ ನಮ್ಮ ಹಣೆಬರಹ" ಎಂದು ದುಃಖ ಪಡುತ್ತಿದ್ದರು. ಆದರೆ ಎಷ್ಟು ದಿನ ಅಂತ ಸುಮ್ಮನಿದ್ದಾರು?

ಒಂದು ದಿನ ಎಲ್ಲರೂ ಸೇರಿ ಆ ಪಂಡಿತನ ಹತ್ತಿರ ಹೋಗಿ ತಮಗೂ ವಿದ್ಯೆ ಮತ್ತು ಪಾಂಡಿತ್ಯದ ರಹಸ್ಯವನ್ನು ತಿಳಿಸಿಕೊಡಬೇಕೆಂದು ಬೇಡಿಕೊಂಡರು. ಆದರೆ ಆ ಪಂಡಿತ ಅವರಿಗೆ "ನಿಮ್ಮಂತ ದಡ್ಡರಿಗೆ ವಿದ್ಯೆ ಯಾಕೆ? ದನ-ಕುರಿ ಕಾಯೋದಿಕ್ಕೆ ಹೋಗಿ" ಎಂದು ಚೆನ್ನಾಗಿ ಬೈದು ಅವರನ್ನು ವಾಪಸು ಕಳಿಸಿದ. ಬಂದ ದಾರಿಗೆ ಸುಂಕವಿಲ್ಲದೆ ಜನರೆಲ್ಲರೂ ಬಹಳ ನಿರಾಶೆಯಿಂದ ತಮ್ಮತಮ್ಮ ಮನೆಗೆ ಮರಳಿಹೋದರು. ಆದರೆ ಸುಮ್ಮನೆ ಕೂರಲಿಲ್ಲ. ಅವರಲ್ಲಿ ಕೆಲವರು ಪಂಡಿತನ ವಿದ್ಯೆ ಬುದ್ಧಿಯ ರಹಸ್ಯವನ್ನು ತಿಳಿಯಲು ಹೊಂಚು ಹಾಕಿದರು. ಒಂದು ದಿನ ಬೆಳಗ್ಗೆ ಪಂಡಿತನಿಗೆ ಗೊತ್ತಾಗದ ಹಾಗೆ ಅವನ ಮನೆಯ ಮೇಲ್ಛಾವಣಿಯ ಕಿಟಕಿಯ ಮೂಲಕ ಪಂಡಿತನು ಅಷ್ಟೊಂದು ವಿದ್ಯೆ- ಬುದ್ಧಿಯನ್ನು ಯಾವ ಮಂತ್ರದ ಶಕ್ತಿಯಿಂದ ಪಡೆದುಕೊಳ್ಳುತ್ತಿದ್ದಾನೆಂದು ಕದ್ದು ನೋಡಿದರು. ಫಲಹಾರಕ್ಕಾಗಿ ಪಂಡಿತ ಆ ದಿನ ತನ್ನ ತಟ್ಟೆಯ ತುಂಬಾ ಬರಿ ಅಕ್ಷರಗಳನ್ನೇ ತುಂಬಿಸಿಕೊಂಡು ತಿನ್ನುತ್ತಿದ್ದ. ಮಧ್ಯಾಹ್ನ ಮತ್ತು ರಾತ್ರಿಯ ಊಟಕ್ಕೂ ಕೂಡ ಅಕ್ಷರಗಳನ್ನೇ ತಿನ್ನುತ್ತಿದ್ದ. ತನ್ನ ಜನರಿಗು ಕೂಡ ತಿನ್ನಲು ಅಕ್ಷರಗಳನ್ನು ನೀಡುತ್ತಿದ್ದ. ಇವೆಲ್ಲವನ್ನು ಕಿಟಕಿಯಿಂದ ಕದ್ದು ನೋಡಿದ ಜನರಿಗೆ ಪಂಡಿತನ ರಹಸ್ಯ ಕೊನೆಗೂ ಗೊತ್ತಾಯಿತು. ಪಂಡಿತನ ಬಳಿ ಯಾವ ಮಂತ್ರ ಶಕ್ತಿ ಇಲ್ಲ; ಅವನು ತಿನ್ನುತ್ತಿರುವ ಅಕ್ಷರಗಳೆ ಅವನಿಗೆ ಅಷ್ಟೊಂದು ವಿದ್ಯೆ-ಬುದ್ಧಿ ಕೊಡುತ್ತಿವೆಯೆಂಬ ರಹಸ್ಯ ಬಯಲಾಯಿತು.

ಮರುದಿನ ಎಲ್ಲರೂ ಮಹಾರಾಜನ ಬಳಿ ಹೋಗಿ, "ಪ್ರಭುಗಳೆ, ನಮಗೂ ನಿಮ್ಮ ಪಂಡಿತನ ಹಾಗೆ ವಿದ್ಯೆ-ಬುದ್ಧಿ ಕಲಿತು ದೊಡ್ಡವರಾಗಬೇಕು ಎಂದು ಆಸೆ. ತಮ್ಮ ಪಂಡಿತರಿಗೆ ಅಪ್ಪಣೆ ಕೊಟ್ಟು ನಮಗೂ ವಿದ್ಯಾ-ದಾನವನ್ನು ದಯಪಾಲಿಸಬೇಕು" ಎಂದು ದೈನ್ಯವಾಗಿ, ಅಂಗಲಾಚಿ ಬೇಡಿಕೊಂಡರು. ಮಹಾರಾಜನು ಇವರ ಕೋರಿಕೆಯನ್ನು ಒಪ್ಪಿ, ಪಂಡಿತನಿಗೆ ವಿದ್ಯಾ-ದಾನ ಮಾಡಲು ಅಪ್ಪಣೆ ನೀಡಿದನು. ಮಹಾರಾಜನ ಅಪ್ಪಣೆಯನ್ನು ಪಾಲಿಸದಿದ್ದರೆ ತನ್ನ ಸ್ಥಾನಕ್ಕೆ ಸಂಚಕಾರ ಬರುತ್ತದೆಂದು ಹೆದರಿ, ಆ ಪಂಡಿತ ರಾಜ್ಯದ ಜನರಿಗೆ ವಿದ್ಯೆ ಕಲಿಸಲು ಒಪ್ಪಿಕೊಂಡ. ಒಂದು ಗೊತ್ತಾದ ದಿನ ಜನರನ್ನೆಲ್ಲಾ ತನ್ನ ಮನೆಗೆ ಕರೆದು ಅವರಿಗೆ ವಿದ್ಯಾ-ದಾನ ಮಾಡಲು ನಿರ್ಧರಿಸಿದ.

ವಿದ್ಯೆ ಕಲಿಯಲು ಎಲ್ಲಾ ಜನರು ಪಂಡಿತನ ಮನೆಗೆ ಹೋದರು. ಪಂಡಿತ ಅವರೆಲ್ಲರನ್ನೂ ನಗುಮುಖದಿಂದ ಸ್ವಾಗತಿಸಿ ಅವರಿಗೆ ಊಟವನ್ನು ಉಣ ಬಡಿಸಿದ. ಊಟಕ್ಕೆ ತಾನು ಪ್ರತಿ ದಿನ ತಿನ್ನುವ ಅಕ್ಷರಗಳನ್ನು ನೀಡಿದ. ಜನರೆಲ್ಲರೂ ಸಂತೋಷದಿಂದ ಪಂಡಿತನನ್ನು ಹೊಗಳುತ್ತಾ ಅಕ್ಷರಗಳನ್ನು ಚೆನ್ನಾಗಿ ತಿಂದರು. ತಿಂದಾದ ಮೇಲೆ ಕೈ ತೊಳೆದುಕೊಳ್ಳಲು ಮೇಲೇಳುವಾಗ ಆ ಪಂಡಿತ, "ವಾತಾಪಿ, ಹೊರಗೆ ಬಾ" ಎಂದು ಸಂಸ್ಕೃತದಲ್ಲಿ ಮಂತ್ರವನ್ನು ಉಚ್ಚರಿಸಿದ. ಊಟ ಮಾಡಿದ ಜನರಿಗೆ ಅವನು ಏನು ಹೇಳಿದ ಎಂದು ತಿಳಿಯಲೇ ಇಲ್ಲ, ಅದು ಯಾವ ಭಾಷೆ ಎಂದು ತಿಳಿಯುವ ಮೊದಲೆ ವಾತಾಪಿ ಆ ಜನರ ಹೊಟ್ಟೆಯನ್ನು ಸೀಳಿಕೊಂಡು, ಗುಟುರು ಹಾಕುತ್ತಾ ಹೊರಗೆ ಬಂದ. ಅಕ್ಷರಗಳನ್ನು ತಿಂದ ಎಲ್ಲಾ ಜನರು ಸ್ಥಳದಲ್ಲೇ ಕುಸಿದು ಬಿದ್ದರು. ನಂತರ ಬಂದಂತಹ ಜನರಿಗೂ ಇದೇ ಗತಿಯಾಯಿತು. ರಾಜ್ಯದ ಜನರಿಗೆ ಏನೂ ತೋಚದೆ ಕಂಗಾಲಾದರು. ಅವರೆಲ್ಲರೂ ಪಂಡಿತನ ಮನೆಗೆ ಹೋಗಲು ಈಗ ಭಯಪಟ್ಟರು.

ಮಹಾರಾಜ ಇದರ ಬಗ್ಗೆ ಪಂಡಿತನ ಬಳಿ ವಿಚಾರಿಸಲು, ಪಂಡಿತ "ಜನರಿಗೆ ನಾನು ಕೊಟ್ಟ ಊಟವು ಅಜೀರ್ಣವಾಗುತ್ತಿದೆ. ಅದಕ್ಕೆ ಕಾರಣ ಅವರು ಪೂರ್ವ ಜನ್ಮದಲ್ಲಿ ಮಾಡಿದ ಪಾಪ. ನನ್ನ ಶಾಸ್ತ್ರ ಪುರಾಣಗಳು ಕೂಡ ಹಾಗೆ ಹೇಳುತ್ತಿವೆ. ಹಾಗಾಗಿ ನಾನು ಕೊಟ್ಟ ಅಕ್ಷರ-ಊಟ ಅವರ ನೆತ್ತಿಗೆ ಏರದೆ ಕುಸಿಯುತ್ತಿದ್ದಾರೆ. ನನ್ನದೇನೂ ತಪ್ಪಿಲ್ಲ, ಆದಾಗ್ಯು ನಾನು ಜನರಿಗೆ ಉಣಬಡಿಸಲು ಸಿದ್ಧ. ಜನಸೇವೆಯೆ ಜನಾರ್ಧನನ ಸೇವೆ ಅಂತ ನಂಬಿರುವವನು ನಾನು" ಎಂದು ಹೇಳಿದ.

ಮಹಾರಾಜನು ಪಂಡಿತ ಹೇಳಿದುದು ಸರಿ ಇರಬಹುದೆಂದು ನಂಬಿದ. ಮುಂದೆ ಏನು ಮಾಡಬೇಕೆಂದು ಮಹಾರಾಜನಿಗೆ ತೋಚಲೇ ಇಲ್ಲ, ಜನರಿಗೆ ವಿದ್ಯಾ-ದಾನ ಇನ್ನು ಮುಂದೆ ಮಾಡುವುದು ಹೇಗೆಂದು ತಿಳಿಯದಾಯಿತು. ಅದೇ ಸಮಯಕ್ಕೆ ಐರೋಪ್ಯ ದೇಶದಿಂದ ಒಬ್ಬ ಬಿಳಿಯ ಮಾಂತ್ರಿಕನೊಬ್ಬ ಪ್ರವಾಸಕ್ಕೆಂದು ಆ ರಾಜ್ಯಕ್ಕೆ ಬಂದಿದ್ದ. ಅಲ್ಲಿನ ಜನರ ಸಮಸ್ಯೆಯನ್ನು ತಿಳಿದು, "ಸಮಸ್ಯೆಗೆ ಪರಿಹಾರ ನಾನು ಕೊಡಬಲ್ಲೆ, ಅದರ ಬದಲಿಗೆ ನನಗೇನು ಲಾಭ?" ಎಂದು ಮಹಾರಾಜನನ್ನು ಕೇಳಿದ. ಮಹಾರಾಜ "ಜನರ ಸಮಸ್ಯೆಯನ್ನು ಪರಿಹರಿಸಿದರೆ ನಿನಗೆ ರಾಜ್ಯದ ಒಂದು ಭಾಗವನ್ನು ಕಾಣಿಕೆಯಾಗಿ ಕೊಡುತ್ತೇನೆ" ಎಂದು ಹೇಳಿದ. ಬಿಳಿಯ ಮಾಂತ್ರಿಕ ಇದಕ್ಕೆ ಒಪ್ಪಿಕೊಂಡ.


ನಂತರ ಆ ಬಿಳಿಯ ಮಾಂತ್ರಿಕ ರಾಜ್ಯದ ಜನರ ಬಳಿ ಹೋಗಿ ಗುಟ್ಟಾಗಿ ಅವರ ಕಿವಿಗೆ ಏನೋ ಹೇಳಿದ. ಜನರೆಲ್ಲರೂ ಅವನು ಹೇಳಿದ ಗುಟ್ಟಿಗೆ ಖುಷಿಯಾದರು. ಮರುದಿನ ಅವರೆಲ್ಲರೂ ಪಂಡಿತನ ಮನೆಗೆ ಊಟ ಮಾಡಲು ಹೋದರು. ಯಥಾಪ್ರಕಾರ ಆ ಪಂಡಿತ ಅವರಿಗೆ ಉಣಲು ಅಕ್ಷರಗಳನ್ನು ನೀಡಿದ. ಜನರೆಲ್ಲರೂ ಕಂಠ ಪೂರ್ತಿ ಅಕ್ಷರಗಳನ್ನು ತಿಂದರು. ಪಂಡಿತ ಮೊದಲಿನ ಹಾಗೆ ಸಂಸ್ಕೃತದಲ್ಲಿ ತನ್ನ ಮಂತ್ರ ಉಚ್ಚಾರಣೆಯನ್ನು ಮಾಡುವ ಮುನ್ನವೆ, ಜನರೆಲ್ಲರು ಒಕ್ಕೊರಲಿನಿಂದ, "ವಾತಾಪಿ, ಜೀರ್ಣೋಭವ" ಎಂದು ಬಿಳಿಯ ಮಾಂತ್ರಿಕ ಹೇಳಿಕೊಟ್ಟಿದ್ದ ಮಂತ್ರವನ್ನು ಹೇಳಿದರು. ವಾತಾಪಿ ಹೊರಗೆ ಬರಲಾಗದೆ ಹೊಟ್ಟೆಯೊಳಗೆ ಕ್ಷಣಮಾತ್ರದಲ್ಲಿ ಕರಗಿಹೋದ.

* * * *

ರಾಜ್ಯದಲ್ಲಿ ಈಗ ಬಹುತೇಕ ಎಲ್ಲರಿಗು ವಿದ್ಯೆ ಬುದ್ಧಿ ಬಂದಿದೆ. ಮಹಾರಾಜನ ಆಸ್ಥಾನದಲ್ಲಿ ಅನೇಕರಿಗೆ ಒಳ್ಳೊಳ್ಳೆಯ ಸ್ಥಾನ-ಮಾನಗಳು ಸಿಕ್ಕಿವೆ. ಇನ್ನು ಇಲ್ಲೇ ಇದ್ದರೆ ತನಗೂ, ತನ್ನ ಜನರಿಗು ಉಳಿಗಾಲವಿಲ್ಲವೆಂದು ತಿಳಿದ ಆ ಪಂಡಿತ ಐರೋಪ್ಯ ಮಾಂತ್ರಿಕನನ್ನು ಪುಸಲಾಯಿಸಿ ಅವನ ದೇಶಕ್ಕೆ ಹೋಗಿ ನೆಲೆಸಲು ಸಿದ್ಧನಾಗುತ್ತಿದ್ದಾನೆ.

■ ಡಾ.ವಿಜಯಕುಮಾರ್ ಎಂ.ಬೋರಟ್ಟಿ

ನಾರಾಯಣ ಗುರುಗಳಿಗೆ ರಾಜಕಾರಣಿಗಳಿಂದ ಅವಮಾ



ಕೇರಳದ ಈಳವರಿಗೆ ಹಾಗೂ ನಮ್ಮ ಕರ್ನಾಟಕದ ಬಿಲ್ಲವ ಮತ್ತು ಈಡಿಗರಿಗೆ ಒಂದು ಅಸ್ಮಿತತೆ ಮತ್ತು ಆತ್ಮಗೌರವ ತಂದುಕೊಟ್ಟ ನಾರಾಯಣ ಗುರುಗಳನ್ನು ವೋಟ್ ಬ್ಯಾಂಕಿಗಾಗಿ ರಾಜಕೀಯ ಪಕ್ಷಗಳು ಹೈಜಾಕ್ ಮಾಡಲು ಜಗ್ಗಾಟ ನಡೆಸಿವೆ. ಸಂಘ ಪರಿವಾರ ಹಾಗೂ ಬಿಜೆಪಿ ಕೂಡಿ ನಾರಾಯಣ ಗುರುಗಳನ್ನು ವೈದಿಕ ಪರಂಪರೆಯ ಗುರುಗಳು ಎಂಬ ರೀತಿಯಲ್ಲಿ ಅತಿ ವ್ಯವಸ್ಥಿತವಾಗಿ ಬಿಂಬಿಸುತ್ತಾ ಬಿಲ್ಲವ ಸಮುದಾಯವನ್ನು ಕೈವಶ ಮಾಡಿಕೊಂಡಿದ್ದರೆ ಹುಂಬ ಕಾಂಗ್ರೆಸ್ಸಿಗರು ಈಗ ಒಮ್ಮೆಲೇ ಎಚ್ಚೆತ್ತು ಆಗಿರುವ ಡ್ಯಾಮೇಜನ್ನು ಸರಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಕರ್ನಾಟಕ ಸರಕಾರವೇ ಸೆ.16 ಕ್ಕೆ ಅಧಿಕೃತವಾಗಿ ನಾರಾಯಣ ಗುರುಗಳ ಜಯಂತಿ ಆಚರಿಸಿದೆ. ಸ್ವತಃ ನಾರಾಯಣ ಗುರುಗಳೇ 1912 ರಲ್ಲಿ ಮಂಗಳೂರಿಗೆ ಬಂದಾಗ ಸ್ಥಾಪಿಸಿರುವ ಕುದ್ರೋಳಿ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ನಾರಾಯಣ ಗುರುಗಳ ಜಯಂತಿ ಆಚರಿಸುವ ವ್ಯವಸ್ಥೆಯನ್ನು ಜಿಲ್ಲಾಡಳಿತ ಮಾಡಿತ್ತು. ನಿಜವಾಗಿ ಗುರುಗಳು ಮೂರ್ತಿ ಪೂಜೆಗೆ ಸಂಪೂರ್ಣ ವಿರುದ್ಧವಾಗಿದ್ದರು. ಹಾಗಾಗಿ ಕುದ್ರೋಳಿಯಲ್ಲಿ ಅವರು ಕೇವಲ ಲಿಂಗ ರೂಪದಲ್ಲಿ ಮಾತ್ರ ಶಿವನನ್ನು ಆರಾಧಿಸಬೇಕೆಂದು ಬೋಧಿಸಿದ್ದರು. ಇಡೀ ಬ್ರಹ್ಮಾಂಡವನ್ನು ನಡೆಸುವ ನಿರಾಕಾರ ನಿರ್ಗುಣ ದಿವ್ಯ ಶಕ್ತಿಗೆ (ದೇವರಿಗೆ) ಮಾನವ ರೂಪ ಅಥವಾ ಪ್ರಾಣಿ ರೂಪ ಇರಲು ಎಂದಿಗೂ ಸಾಧ್ಯವಿಲ್ಲ ಎಂದು ಗುರುಗಳು ನಂಬಿದ್ದರು. ಹಾಗಾಗಿ ಮಾನವ ರೂಪ ಅಥವಾ ಪ್ರಾಣಿ ರೂಪದಲ್ಲಿ ದೇವರನ್ನು ಆರಾಧಿಸುವುದಕ್ಕೆ ಗುರುಗಳು ಸಂಪೂರ್ಣ ವಿರುದ್ಧವಾಗಿದ್ದರು. ಆದಕ್ಕಾಗಿ ಮೊದಲಿನಿಂದಲೂ ಕೇರಳ ಹಾಗೂ ನಮ್ಮ ಕರಾವಳಿಯಲ್ಲಿ ವೈಷ್ಣವ ಬ್ರಾಹ್ಮಣರು ನಾರಾಯಣ ಗುರುಗಳ ಕಡುವಿರೋಧಿಗಳಾಗಿದ್ದರು. ಕೊಂಕಣಿ ಸಾರಸ್ವತ ಬ್ರಾಹ್ಮಣರಂತೂ ಗುರುಗಳು 1906 ರಲ್ಲಿ ಮತ್ತು 1912 ರಲ್ಲಿ ಮಂಗಳೂರಿಗೆ ಬಂದಿದ್ದಾಗ ಅವರನ್ನು "ಅಂಡೆ ಬಿರುವ" ಎಂದು ಹೀನವಾಗಿ ಗೇಲಿ ಮಾಡಿದ್ದರು. ಆದರೆ ಇಂದು ನೋಡಿದರೆ ಅದೇ ಕುದ್ರೋಳಿ ದೇವಸ್ಥಾನದ ಮೂಲೆಮೂಲೆಯಲ್ಲಿ ಮನುಷ್ಯ ರೂಪದ ಅಥವಾ ಪ್ರಾಣಿರೂಪದ ವೈಷ್ಣವ ದೇವರ ವಿಗ್ರಹಗಳು ಸ್ಥಾಪನೆಯಾಗಿ ಸಂಪೂರ್ಣ ದೇವಸ್ಥಾನ ಗುರುಗಳ ಮೂಲ ತತ್ವಗಳಿಗೆ ವಿರುದ್ಧವಾಗಿ ನಡೆಯುತ್ತಿದೆ.


ನಾರಾಯಣ ಗುರುಗಳ ಬಗೆಗೆ ಕಾಂಗ್ರೆಸ್ಸಿನವರ ದಿಢೀರ್ ಪ್ರೀತಿ ಸಹ ತೋರಿಕೆಯದು ಮಾತ್ರ. ಇವರಲ್ಲಿ ಯಾರಿಗೂ ನಾರಾಯಣ ಗುರುಗಳ ತತ್ವ ಆದರ್ಶಗಳ ಜ್ಞಾನವೇ ಇಲ್ಲ, ಜತೆಗೆ ಅದನ್ನು ಅರಿಯಬೇಕೆಂಬ ತುಡಿತವೂ ಇಲ್ಲ. ಗುರುಗಳ ತತ್ವನೀತಿಗಳಿಂದ ದೂರ ಸರಿಯುತ್ತಿರುವ ಬಿಲ್ಲವ ವಿದ್ಯಾವಂತರಲ್ಲಿ ಗುರುಗಳ ಜೀವನ ಮತ್ತು ತತ್ವಾದರ್ಶಗಳ ಬಗೆಗೆ ಜ್ಞಾನ ಮೂಡಿಸುವ ಸಲುವಾಗಿ ಇದೇ ವರ್ಷ ಜನವರಿಯಲ್ಲಿ ಒಬ್ಬ ಹಿರಿಯ ಬಿಲ್ಲವ ಸಾಹಿತಿ ಮತ್ತು ಸಂಶೋಧಕರು ತಮ್ಮ ಸ್ವಂತ ಖರ್ಚಿನಲ್ಲಿ ಮಂಗಳೂರಿನಲ್ಲಿ ಎಂಟು ದಿನಗಳ ಕಾಲ ಸಂಜೆ ಎರಡೆರಡು ಗಂಟೆಯ ಕಾರ್ಯಾಗಾರ ನಡೆಸಿದರು. ಆದರೆ ಈ ಕಾರ್ಯಾಗಾರಕ್ಕೆ ಒಬ್ಬನೇ ಒಬ್ಬ ಬಿಲ್ಲವ ಬರಲಿಲ್ಲ, ಬ್ರಾಹ್ಮಣ-ಬಂಟರ ಸಹಿತ ಇತರ ಜಾತಿಯವರೆಲ್ಲ ಬಂದು ಈ ಕಾರ್ಯಾಗಾರದ ಪೂರ್ಣ ಲಾಭ ಪಡೆದರು. ಇಂತಹ ಬಿಲ್ಲವ ಕಾಂಗ್ರೆಸ್ಸಿಗರು ಮೊನ್ನೆಯ ಸರಕಾರಿ ಪ್ರಾಯೋಜಿತ ನಾರಾಯಣ ಗುರು ಜಯಂತಿಯಂದು ವೇದಿಕೆಯಲ್ಲಿ ರಾರಾಜಿಸಿ ಗುರುಗಳ ಕುರಿತ ತಮ್ಮ ಅರೆ-ಜ್ಞಾನ ಪ್ರದರ್ಶಿಸುತ್ತಾ ಭಾಷಣ ಕುಟ್ಟಿರುವುದು ವಿಪರ್ಯಾಸ.

ಕರ್ನಾಟಕ ಸರಕಾರದ ವಾರ್ತಾ ಇಲಾಖೆಗೆ ಹಾಗೂ ಜಿಲ್ಲಾಡಳಿತಕ್ಕೆ ಸಹ ನಾರಾಯಣ ಗುರುಗಳು ಯಾವ ತರಹದ ಬಟ್ಟೆ ಧರಿಸುತ್ತಿದ್ದರು ಎಂಬುದೇ ಗೊತ್ತಿಲ್ಲ, ಹಾಗಾಗಿ ಮೊನ್ನೆ ಗುರುಗಳ ಜನ್ಮದಿನದಂದು ವಾರ್ತಾ ಇಲಾಖೆ ಎಲ್ಲಾ ಪತ್ರಿಕೆಗಳಲ್ಲಿ ಕೊಟ್ಟ ಬಣ್ಣ ಬಣ್ಣದ ಸರಕಾರಿ ಜಾಹೀರಾತಿನಲ್ಲಿ ಗುರುಗಳನ್ನು ಪೂರ್ಣ ಕಾವಿ ಬಟ್ಟೆಯಲ್ಲಿ ಚಿತ್ರಿಸಲಾಗಿತ್ತು, ನಿಜವಾಗಿ ಗುರುಗಳು ಯಾವಾಗಲೂ ಕೇವಲ ಬಿಳಿ ಬಟ್ಟೆ ಮಾತ್ರ ಧರಿಸುತ್ತಿದ್ದರು. ಅವರೆಂದೂ ಕಾವಿ ಮುಟ್ಟರಲಿಲ್ಲ. ಒಮ್ಮೆ ಅವರಿಗೆ ಯಾರೋ ಕಾವಿ ಬಟ್ಟೆ ಉಡುಗೊರೆಯಾಗಿ ಕೊಟ್ಟಾಗ ಅವರು "ಓಹ್ ಇದರಲ್ಲಿ ಕೊಳೆಯಾದರೆ ಗೊತ್ತಾಗುವುದೇ ಇಲ್ಲ, ಅದಕ್ಕಾಗಿ ದಿನಾಲೂ ಬಟ್ಟೆ ಬದಲಿಸದವರು ಕಾವಿ ಉಟ್ಟರೆ ಒಳ್ಳೆಯದು" ಎಂದು ಹೇಳಿದ್ದರು! ಗುರುಗಳು ಹಳದಿ ಬಟ್ಟೆಯನ್ನೂ ಉಡುತ್ತಿರಲಿಲ್ಲ, ಕೆಲವೊಮ್ಮೆ ತಿಳಿ ಹಳದಿ ಶಾಲು ಹೊದ್ದುಕೊಳ್ಳುತ್ತಿದ್ದರು ಅಷ್ಟೇ. ಆದರೆ ಇಂದು ಕುದ್ರೋಳಿ ದೇವಸ್ಥಾನ ಸಹಿತ ಎಲ್ಲೆಡೆ ಗುರುಗಳು ಕಾವಿ ಅಥವಾ ಗಾಢ ಹಳದಿ ಬಟ್ಟೆಯಲ್ಲಿರುವಂತಹ ಚಿತ್ರಗಳೇ ರಾರಾಜಿಸುತ್ತವೆ (ಗಾಢ ಹಳದಿ ಬಣ್ಣವು ಕಾವಿ ಬಣ್ಣಕ್ಕೆ ಹತ್ತಿರವಾಗಿರುವುದರಿಂದ ಈ ಕಡು ಹಳದಿ ಬಳಸುವ ತಂತ್ರ ಸಂಘಿಗಳದ್ದು). ಗುರುಗಳ ಜನ್ಮ ದಿನದ ಎಲ್ಲ ಸರಕಾರಿ ಸಮಾರಂಭಗಳಲ್ಲಿ ಕೇವಲ ಕೇಸರಿ ಬಣ್ಣದ ಬಂಟಿಂಗ್ಸ್‌ಗಳೇ ಹಾರಾಡುತ್ತಿದ್ದವು. ಅಷ್ಟೇ ಅಲ್ಲ, ಕುದ್ರೋಳಿ ದೇವಸ್ಥಾನದಲ್ಲಿ ಗುರುಗಳ ಮೂರ್ತಿಯ ತಲೆಯ ಮೇಲೆ ಬೆಳ್ಳಿಯ ಕಿರೀಟದಿಂದ ಅಲಂಕರಿಸಿ ಬೆಳ್ಳಿಯ ರಥದಲ್ಲಿ ಅವರ ತೇರು ಎಳೆಯಲಾಯಿತು. ಇಂತಹ ಆಡಂಬರಗಳಿಗೆಲ್ಲಾ ಗುರುಗಳು ಕಟ್ಟಾ ವಿರೋಧಿಯಾಗಿದ್ದರು.

ನಾರಾಯಣ ಗುರುಗಳ ಜೀವಿತ ಕಾಲದಲ್ಲಿ ಕೇರಳದ ವೈದಿಕರಾದ ನಂಬೂದ್ರಿಗಳು ಮತ್ತು ಜಮೀನ್ದಾರರಾದ ನಾಯರುಗಳು ನಾರಾಯಣ ಗುರುಗಳಿಗೆ ವಿಪರೀತ ಹಿಂಸೆ ಕೊಟ್ಟಿದ್ದರು. ಅವರ ಮೇಲೆ ಮಾರಣಾಂತಿಕ ದಾಳಿ ಸಹ ವೈದಿಕರು ಮಾಡಿಸಿದ್ದರು. ಆದರೆ ಈಗ ನಮ್ಮಲ್ಲಿ ಈಡಿಗ/ಬಿಲ್ಲವ/ತೀಯಾ ಸಮಾಜವು ಅದೇ ವೈದಿಕರ ಕೈಗೊಂಬೆಯಾಗಿದೆ. ಕರಾವಳಿಯ ಹುಂಬ ಬಂಟರಂತೆ ಬಿಲ್ಲವರೂ ಈಗ ಪ್ರತಿಯೊಂದಕ್ಕೂ ಬ್ರಾಹ್ಮಣ ಪುರೋಹಿತರ ಕಾಲಿಗೆ ಉರುಳುತ್ತಿದ್ದಾರೆ. ಇದನ್ನು ಕಂಡು ನಾರಾಯಣ ಗುರುಗಳ ಪವಿತ್ರ ಆತ್ಮ ಅದೆಷ್ಟು ನೊಂದು ಕೊಳ್ಳುತ್ತಿದೆಯೋ ಏನೋ!

ಮೇಲಾಗಿ ನಾರಾಯಣ ಗುರುಗಳನ್ನು ವೈದಿಕಕರಣಗೊಳಿಸಿರುವುದರ ಸಂಕೇತವಾಗಿ ಅವರ ಹೆಸರಿನ ಮುಂದೆ ಬ್ರಹ್ಮಶ್ರೀ ಎಂಬ ಉಪಾಧಿ ತಾಗಿಸಿ ಅವರನ್ನು ಗೌರವಿಸುವ ನೆಪದಲ್ಲಿ ನಿಜವಾಗಿ ಅವಮಾನಿಸಲಾಗುತ್ತಿದೆ. ಇಂತಹ ವೈದಿಕ ಉಪಾಧಿಗಳನ್ನು ಸ್ವತಃ ನಾರಾಯಣ ಗುರುಗಳೇ ದ್ವೇಷಿಸುತ್ತಿದ್ದರು. ಗುರುಗಳು ಕರ್ನಾಟಕದಲ್ಲಿ ತಮ್ಮ ಸ್ವಂತ ಕೈಯಿಂದ ಸ್ಥಾಪಿಸಿರುವ ಏಕೈಕ ದೇವಳವೆಂದರೆ ಮಂಗಳೂರಿನ ಗೋಕರ್ಣನಾಥೇಶ್ವರ ಕ್ಷೇತ್ರ. ಇದು ಸ್ಥಳೀಯ ಬಿಲ್ಲವರಿಗೆ ಮಾತ್ರವಲ್ಲ ಕರ್ನಾಟಕದ ಎಲ್ಲಾ ಈಡಿಗರಿಗೆ ಪರಮ ಪವಿತ್ರ ಕ್ಷೇತ್ರವಾಗಬೇಕಿತ್ತು, ಮೂಡಬಿದ್ರಿ ಜೈನಕಾಶಿ ಎನಿಸಿದಂತೆ ಕುದ್ರೋಳಿ ಬಿಲ್ಲವ-ಕಾಶಿ ಎನಿಸಬೇಕಿತ್ತು. ಆದರೆ ದುಃಖದ ವಿಷಯವೆಂದರೆ ಈಗ ಎಲ್ಲ ಹಿಂದೂ ಹಬ್ಬಗಳಂದು ಬಿಲ್ಲವರೆಲ್ಲಾ ಓಡುವುದು ವೈದಿಕ ದೇವಳಗಳಿಗೆ ಹಾಗೂ ಎಲ್ಲದಕ್ಕೂ ಅವರು ಹರಕೆ ಹೊರುವುದು ವೈದಿಕ ದೇವಳಗಳಿಗೆ ಮಾತ್ರ. ಕುದ್ರೋಳಿ ದೇವಸ್ಥಾನಕ್ಕೆ ಹರಕೆ ಹೊರುವ ಒಬ್ಬನೇ ಒಬ್ಬ ಬಿಲ್ಲವ/ಈಡಿಗನನ್ನು ಈವರೆಗೆ ನಾನು ಕಂಡಿಲ್ಲ (ವಿಕ್ಷಿಪ್ತ ಜನಾರ್ದನ್ ಪೂಜಾರಿಯ ಉರುಳು ಸೇವೆಯ ಹೊರತು).

ಬಿಲ್ಲವರ ಆಡಳಿತದಲ್ಲಿಯೇ ಇರುವ ಮಂಗಳೂರಿನ ನಾರಾಯಣ ಗುರು ಜೂನಿಯರ್ ಕಾಲೇಜಿನಲ್ಲಾಗಲಿ ಅಥವಾ



ಗೋಕರ್ಣನಾಥೇಶ್ವರ ಪದವಿ ಕಾಲೇಜಿನಲ್ಲಿ ನಾರಾಯಣ ಗುರುಗಳ ಬೋಧನೆಗಳ ಬಗ್ಗೆ ಅವರ ಜೀವನದ ಸಾಧನೆಗಳ ಬಗ್ಗೆಯಾಗಲೀ ಒಂದಕ್ಷ ಕಲಿಸುತ್ತಿಲ್ಲ, ಹಾಗಿರುವಾಗ ಈಗಿನ ತಲೆಮಾರಿನ ಬಿ ನಾರಾಯಣ ಗುರುಗಳ ಜೀವನಗಾಥೆ ಅಥವಾ ಬೋಧನೆಗಳು ತಿಳಿಯಲು ಹೇಗೆ ಸಾಧ್ಯ? ವಿವೇಕಾನಂದರು ಹುಚ್ಚಾಸ್ಪತ್ರೆ ಎಂದು ಕರೆದ ಕೇ ಹುಟ್ಟಿ ಬೆಳೆದ ನಾರಾಯಣ ಗುರುಗಳು ಅಲ್ಲಿಯ ಹುಚ್ಚು ಬಿಡಿಸಿ ವಿವೇಕ ತುಂಬಿ ಸರಿದಾರಿಗೆ ಸಾಕಷ್ಟು ಯಶಸ್ವಿಯಾಗಿದ್ದಾರೆ. ಆದರೆ ನಮ್ಮ ಕರಾವ ಮಾತ್ರ ಬಿಲ್ಲವ/ಈಡಿಗ ಯುವಕರು ಹಿಂದೂತ್ವವೆಂಬ ಹುಚ್ಚಾಸ್ಪತ್ರೆಗೆ ಸೇರುತ್ತಿರುವುದನ್ನು ಹಾಗೂ ವ್ಯಸನಿಗಳಾಗುತ್ತಿರುವುದನ್ನು ತಡೆಯಲು ಯಾವುದೇ ನೇತಾರರಿಂದ ಆಗದಿರುವುದು ದುರದೃಷ್ಟಕರ.


ಕರಾವಳಿಯ ಬೇರೆಲ್ಲಾ ಪ್ರಬಲ ಜಾತಿಗಳ ಒ ಇಂಜಿನಿಯರಿಂಗ್ ಕಾಲೇಜ್ ಮತ್ತು ಮೆ ಕಾಲೇಜುಗಳಿವೆ. ಆದರೆ ಬಿಲ್ಲವರು ಕರಾವಳಿಯ ಅತಿ ಸಮುದಾಯವಾದರೂ ಅವರದ್ದು ಒಂದೇ ಒಂದು ಕಾಲೇಜು ಇಲ್ಲ, ಇದಕ್ಕೆ ಕಾರಣ ಬಿಲ್ಲವ ಸಮುದಾ ಒಳಗೇ ಇರುವ ಮನೆ ಮುರುಕರು. ವಿಚಿತ್ರವೆಂದರೆ ಜನಾಂಗದಲ್ಲಿ ಸಂಘಿಗಳು ಪ್ರತಿಷ್ಠಾಪಿಸಿರುವ ಕಾವಿಧಾರಿಗಳಿರುವಂತೆ ಬಿಲ್ಲವ ಜನಾಂಗದಲ್ಲಿಯೂ ಸ್ವಾಮೀಜಿಗಳಿದ್ದಾರೆ. ಇವರೆಲ್ಲಾ ನಿಜ ಸ್ವಾಮೀಜಿಗಳ ಸಂಘ ಪರಿವಾರ ಪ್ರತಿಷ್ಠಾಪಿಸಿರುವ ಏಜಂಟರಾಗಿದ್ದಾರೆ. ಇದಕ್ಕೆ ಪುರಾವೆ ಅವರು ಸದಾ ಉಡುವ ಕಾವಿ ಹಣೆಯಲ್ಲಿ ಹಚ್ಚುವ ಚಿತ್ರವಿಚಿತ್ರ ನಾಮಗಳು ಪ್ರತಿಯೊಂದು ಹಿಂದೂ ಸಮಾಜೋತ್ಸವದಲ್ಲಿ ತರುಣಿ ಸಾಧ್ವಿಗಳೊಂದಿಗೆ ವೇದಿಕೆಯಲ್ಲಿ ರಾರಾಜಿಸು

■ ಅನಿಲ್ ಕುಮಾರ್ ಪೂ

ಬುಲೆಟ್ಟಿನ ಲೆಕ್ಕ ಕೊಡಿ

1.....

ಭಾರತ ಮಾತಾಕಿ ಜೈ ಎನುತ
ಬೆಳಗೆದ್ದು ಭೂತಾಯಿಗೆ ವಂದಿಸಿ
ಈ ತಾಯಿಯ ಮಕ್ಕಳು ಮಾಡಿದ ಪವಿತ್ರ ಕಾಯಕವ
ನೆನೆಯದೆ
ಕರ ಮುಗಿಯದೆ
ನನ್ನವರ ಕೊಂದವರೇ...



ಅಂದು
ಖೈರ್ಲಾಂಜಿಯಲಿ ಹರಿದ ಮಡುವು ಇನ್ನೂ ಆರಿಲ್ಲ.
ಕಾರಂಚೇಡು ದಾದ್ರಿ ಊನಾ ಜೈಪುರಗಳ ಆಕ್ರಂದನ
ಇನ್ನೂ ನಿಂತಿಲ್ಲ.

ಭಾರತ ಮಾತೆಯ ಮಕ್ಕಳ
ಅತ್ಯಾಚಾರ ಮಾಡಿದವರಿಗೆ..
ಬೆನ್ನು ಸೀಳಿದವರಿಗೆ..
ನನ್ನವರ ಸುಟ್ಟವರಿಗೆ
ಕೊಂದವರಿಗೆ
ವಿಷವಿಕ್ಕಿದವರಿಗೆ
[illegible] ಹೆಣ ಬೇಯಿಸಿದವರಿಗೆ....

ಒಂದೇ ಕುಣಿಯಲಿ ಒಂದೇ ಚಿದಿಗೆಯಲಿ
ಹೆಣಗಳನು ಒಂದರ ಮೇಲೊಂದಿಟ್ಟು ನಿಟ್ಟು ಹಚ್ಚಿ
ಹೂಳುವಂತೆ
ಸುಡುವಂತೆ ಮಾಡಿದವರಿಗೆ
ಇನ್ನೂ ಶಿಕ್ಷೆ ಆಗಿಲ್ಲ.....

ಸತ್ತದ್ದು ಸತ್ಯವಾದರೆ
ಕೊಂದವರು ಯಾರು.....

ಹಾಗಾದರೆ ನಿಮ್ಮ ಬಂದೂಕಿನಿಂದ ಹೊರಟ
ಬುಲೆಟ್ಟಿನ,
ಸುಳ್ಳು ಹೇಳಿ ಸಾಯುವಂತೆ ಮಾಡಿದ ತೀರ್ಪುಗಳ
ಲೆಕ್ಕ ಕೊಡಿ.....

2.....

ಅವರು ತಮ್ಮ ರಕ್ಷಣೆಗಾಗಿ ಇಟ್ಟುಕೊಂಡ
ಬಂದೂಕಿನಲಿ ಉಳಿದ ಬುಲೆಟ್ಟುಗಳೆಷ್ಟು....

ಅವರು
ಸಂಸ್ಕೃತಿ ರಕ್ಷಣೆಗಾಗಿ
ಬಂದೂಕಿನ ತರಬೇತಿ ನೀಡಲು
ತುಪಾಕಿಗೆ ಸೇರಿಸಿದ ತೋಟಾಗಳ ಲೆಕ್ಕವೆಷ್ಟು.....

ಸತ್ಯವನು ಬಂದೂಕಿನಿಂದ ಹತ್ಯೆ ಮಾಡಲಾಗದೆಂದು
ತಿಳಿದಿದ್ದರೂ ವಿಚಾರವಾದವ ಕೊಂದ ಸನಾತನದ
ಬಂದೂಕಿನಿಂದ ಹೊರಟ ಬುಲೆಟ್ಟುಗಳ ಲೆಕ್ಕವೆಷ್ಟು....

ಗಾಂಧಿಯನು ಕೊಂದದ್ದು ಅದೇ ಬಂದೂಕಾದರೆ
ದಾಬೋಲ್ಕರ್ ಪನ್ಸಾರೆ
ಕಲಬುರ್ಗಿಯ ನಂತರ ಉಳಿದ ಬುಲೆಟ್ಟುಗಳ
ಲೆಕ್ಕವೆಷ್ಟು....

ಅಂದು
ಅಕ್ಷರವಿಲ್ಲದ ಅನ್ನವಿಲ್ಲದ ದಿನ
ಅವರ ಅಂಗಳ ತುಳಿದಾಗ
ತುಳಿದ ಅಂಗಳವ ತೊಳೆದು
ಅಲ್ಲಿಯೇ ಹೂತ
ಆ ನನ್ನ ಹಿರಿಯರ ಎದೆ ಹೊಕ್ಕ
ನಿಮ ಬಂದೂಕಿನೊಳಗಿನ ಬುಲೆಟ್ಟಿನ ಲೆಕ್ಕವೆಷ್ಟು...

ತಮಟೆ ಬಡಿಯುವುದಿಲ್ಲ ಎಂದಾಗ...
ಸತ್ತ ದನವ ಒಯ್ದು ಹೂಳುವುದಿಲ್ಲ ಎಂದಾಗ...
ಮಲದ ಗುಂಡಿಗೆ ಇಳಿಯುವುದಿಲ್ಲ ಎಂದಾಗ...
ನಿಮ್ಮ ಸಂತೋಷದ ದಿನ
ಮಾರಿ ಹಬ್ಬಕ್ಕೆ ಕೋಣ ಕಡಿಯುವುದಿಲ್ಲ ಎಂದಾಗ
ನಮ್ಮ ರುಂಡ ಕಡಿಯಬಹುದು ನೀವು....
ಹಾಗಾಗಿ
ಸಾಕುವ ನಾಯಿಯ ಕಾಯಲು ಬಂದೂಕು ಕೊಟ್ಟ
ಹಂದಿ ಹಸು ನಾಯಿಗಿಂತಲೂ ಕೀಳಾದ
ನಮ್ಮನ್ನು ನಾವು ಸಾವಿನಿಂದ ರಕ್ಷಿಸಿಕೊಳ್ಳಲು
ಬಂದೂಕು ಕೊಡಿ
ಜೊತೆಗೆ
ಬದುಕಲು ಬುಲೆಟ್ಟು ಕೊಡಿ
ನಾವೂ ಲೆಕ್ಕ ಕೊಡುತ್ತೇವೆ....

■ ರಮೇಶ ಗಬ್ಬೂ



ಟಾರದು. ಸಂಪಾದಿಸಿದ್ದರಲ್ಲಿ ಶೇಕಡಾ 2.5ರಷ್ಟು ನ್ನು ಜಕಾತ್ ರೂಪದಲ್ಲಿ ಬಡವರಿಗೆ ಕೊಡಬೇಕು. ನ್ನು ಹಂಚಿಕೊಳ್ಳುವಾಗ ಬಡವರು ಮತ್ತು ಧಿಕರು ಬಂದರೆ ಅವರಿಗೂ ಒಂದಿಷ್ಟು ಪಾಲು ಬೇಕು.

ಷ್ಟೆಲ್ಲ ಮಾಡಿದರೆ ಒಂದು ಸಮಾಜದಲ್ಲಿ ನುವಿರಲು ಸಾಧ್ಯವೆ? ಇಂಥ ಒಂದು ಪರಿಪೂರ್ಣವಾದ ಸಮಾಜದಲ್ಲಿ ಕಳ್ಳತನ ಮಾಡಿದವನ ಕೈ ಬೇಕೆಂದು ಕುರಾನ್ ಹೇಳುತ್ತದೆ ಹೊರತಾಗಿ ಚಾರದ ಸಮಾಜದಲ್ಲಿನ ಕಳ್ಳರ ಛಿಚಾರವಾಗಿ ವುದಿಲ್ಲ. ಇದನ್ನು ಹಜರತ್ ಉಮರ್ ಅವರು ಾಗಿ ಅರ್ಥೈಸಿಕೊಂಡು ಕಳ್ಳರ ಕೈ ಕಡಿಯದಂತೆ ಡಿಕೊಂಡರು. ಹೀಗೆ ಇಜ್ತಿಹಾದ್ ಮೂಲಕ ಮುಸ್ಲಿಂ ನು ಬೆಳವಣಿಗೆ ಹೊಂದಿದೆ.

ತಲಾಖ್ ತಲಾಖ್ ತಲಾಖ್' ಎಂದು ಒಂದೇ ಒದರಿ ಹೆಂಡತಿಯನ್ನು ಹೊರಗಟ್ಟುವುದಕ್ಕೆ 'ತಲಾಖ್ ಬಿದಾತ್' ಎನ್ನುತ್ತಾರೆ. ಇಸ್ಲಾಂ ಧರ್ಮದ ಪ್ರಕಾರ ಪಾಪ ಕಾರ್ಯ. ಅದನ್ನು ಕಾನೂನುಬಾಹಿರ ಮಾಡಿ ಸಂಸ್ಕೃತಿಯನ್ನು ರಕ್ಷಿಸುವುದು ಭಾರತ ಸರ್ಕಾರದ ಧಾನಾತ್ಮಕ ಕರ್ತವ್ಯವಾಗಿದೆ.

ಪರಿಯತ್‌ಗಳು ಅನೇಕ

ಮುಸ್ಲಿಮರಲ್ಲಿ ಮುಖ್ಯವಾಗಿ ಷಿಯಾ ಮತ್ತು ಸುನ್ನಿ ಎರಡು ಪಂಗಡಗಳಿವೆ. ಸುನ್ನಿಗಳಲ್ಲಿ ಮುಖ್ಯವಾಗಿ ಪದ್ಧತಿಗಳು ಜಾರಿಯಲ್ಲಿವೆ.

ಸುನ್ನಿಗಳಲ್ಲಿ ಮೊದಲಿಗೆ ಇಮಾಮ್ ಅಬು ಹನಿಫಾ ಶಕ 699-766) ಅವರಿಂದ ಹನಾಫಿ ಪದ್ಧತಿ ಭವಾಯಿತು.. ಇದರಲ್ಲಿ ಔಚಿತ್ಯಪ್ರಜ್ಞೆಯಿಂದ ಲಗ್ರಂಥದ ಮೂಲಕ ಕಾನೂನನ್ನು ಬೆಳೆಸುವ ಸ್'ಗೆ ಅವಕಾಶವಿದೆ. ಭಾರತ, ಪಾಕಿಸ್ತಾನ, ಟರ್ಕಿ ತ್ತು ಈಜಿಪ್ತ್‌ನಲ್ಲಿ ಹನಾಫಿಗಳು ಹೆಚ್ಚಾಗಿದ್ದಾರೆ.

ಇಮಾಮ್ ಮಾಲಿಕ್ ಇಬ್ನ ಅನಾಸ್ (ಕ್ರಿಸ್ತಶಕ -795) ಅವರಿಂದ ಮಾಲಕಿ ನ್ಯಾಯಪದ್ಧತಿ ಭವಾಯಿತು. ಇದರಲ್ಲಿ ಕಿಯಾಸ್‌ಗೆ ಆದ್ಯತೆ ಇಲ್ಲ. ಲಕಿಗಳು ಉತ್ತರ ಆಫ್ರಿಕಾದಲ್ಲಿದ್ದಾರೆ.

ಇಮಾಮ್ ಷಫಿ (ಕ್ರಿಸ್ತಶಕ 767-820) ಅವರಿಂದ ಫಿ ನ್ಯಾಯ ಪದ್ಧತಿ ಆರಂಭವಾಯಿತು. ಉಸುಲ್‌ನ (ತತ್ತ್ವದ) ಪ್ರತಿಪಾದಕರಿವರು. ಉಸುಲ್ ಮೂಲಕ ವ್ಯಾಖ್ಯಾನಿಸಲು ಬೇಕಾದ ತತ್ತ್ವಗಳು ಹುಟ್ಟಿಕೊಂಡವು. ಅರಬಸ್ತಾನದ ಕರಾವಳಿಗುಂಟ ಷಫಾಯಿಗಳಿದ್ದಾರೆ. ಕೇರಳದ ಮಾಪಿಳ್ಳೆಗಳು ಷಫಾಯಿಗಳು.

ಇಮಾಮ್ ಅಹ್ಮದ್ ಇಬ್ನ ಹನ್ಬಾಲ್ (ಕ್ರಿಸ್ತಶಕ 780-855) ಅವರಿಂದ ಹನ್ಬಾಲಿ ನ್ಯಾಯಪದ್ಧತಿ ಆರಂಭವಾಯಿತು. ಈ ಪದ್ಧತಿ ಹೆಚ್ಚಾಗಿ ಹದಿಸ್ ಮೇಲೆ ಅವಲಂಬಿತವಾಗಿದೆ. ಸೌದಿ ಅರೇಬಿಯಾದಲ್ಲಿ ಹನ್ಬಾಲಿಗಳಿದ್ದಾರೆ.

ಷಿಯಾಗಳಲ್ಲಿ ಕೂಡ ಅನೇಕ ಪದ್ಧತಿಗಳಿದ್ದರೂ ಭಾರತದಲ್ಲಿ ಇಸ್ಮಾಯಿಲ್ ಮತ್ತು ಇಥ್ನಾ ಅಷಾರಿಯ ಎಂಬುವು ಮುಖ್ಯವಾಗಿವೆ.

ಹೀಗೆ ಮುಸ್ಲಿಮರಲ್ಲಿ ಅನೇಕ ಪ್ರಕಾರದ ಷರಿಯತ್‌ಗಳಿವೆ. ಭಾಷೆ, ಪ್ರದೇಶ ಮತ್ತು ಕಾಲದ ಕಟ್ಟಳೆಗಳನ್ನು ಒಳಗೊಂಡು ಒಂದು ಧರ್ಮ ಹುಟ್ಟಿಕೊಂಡರೂ ಅದರಲ್ಲಿನ ಸಾರ್ವತ್ರಿಕ ಸತ್ಯದೊಂದಿಗೆ ಅವರ ಅನುಯಾಯಿಗಳು ಮುನ್ನಡೆಯಬೇಕಾಗುತ್ತದೆ. ಅದರ ಮಾನವೀಯ ತಿರುಳನ್ನು ರಕ್ಷಿಸಲೇ ಬೇಕಾಗುತ್ತದೆ.

"ಹೃದಯಗಳಲ್ಲಿ ಕುಟಿಲತೆ ಇರುವವರು ಗೊಂದಲ ಮತ್ತು ದುರ್ವ್ಯಾಖ್ಯಾನದ ಉದ್ದೇಶದಿಂದ ಅದರಲ್ಲಿನ (ಕುರಾನಿನ) ಮುತಶಾಬಿಹಾತ್ (ಅರ್ಥೈಸುವಿಕೆಯಲ್ಲಿ ಸಂದಿಗ್ಧತೆಗೆ ಅವಕಾಶವಿರುವ ವಾಕ್ಯಗಳು) ಹಿಂದೆ ಬೀಳುತ್ತಾರೆ" ಎಂದು ಕುರಾನಿನ 3ನೇ ಸೂರಾ(ಅಧ್ಯಾಯ)ದ 7ನೇ ಆಯತ್ (ಸೂಕ್ತ)ದಲ್ಲಿ ಹೇಳಲಾಗಿದೆ.

ಸ್ತ್ರೀಯರಿಗೆ ಸಂಬಂಧಿಸಿದ ಕುರಾನಿನ ಕೆಲ ಮುಖ್ಯ ಆಯತ್‌ಗಳು


"ಗಂಡು ಹೆಣ್ಣುಗಳನ್ನು ಒಂದೇ ಜೀವದಿಂದ ಸೃಷ್ಟಿಸಲಾಗಿದೆ." (4:1)

"ವಿಶ್ವಾಸಿಗಳೆ! ಸ್ತ್ರೀಯರನ್ನು ಬಲಾತ್ಕಾರವಾಗಿ ಪರಂಪರಾಗತ ಸೊತ್ತಿನಂತೆ ಒಡೆತನಕ್ಕೆ ಅಧೀನಗೊಳಿಸುವುದು ನಿಮಗೆ ಧರ್ಮಬದ್ಧವಲ್ಲ." (4:19)

"ಅವರು (ನಿಮ್ಮ ಪತ್ನಿಯರು) ನಿಮಗೆ ಪೋಷಾಕು. ನೀವು ಅವರಿಗೆ ಪೋಷಾಕು." (2:187)

ಹೆಣ್ಣುಗಂಡಿನ ಮಧ್ಯೆ ಅನ್ಯೋನ್ಯ ಸಂಬಂಧ ಇರಬೇಕೆಂಬುದೆ ಕುರಾನಿನ ಆಶಯವಾಗಿದೆ. ಅರಬರು ಹೆಂಗೂಸುಗಳನ್ನು ಜೀವಂತ ಹುಗಿಯುತ್ತಿದ್ದರು. ಅದು ಹಿಂದೂಗಳಲ್ಲಿನ ಸತಿಪದ್ಧತಿಯಷ್ಟೇ ಸಹಜವಾಗಿತ್ತು. ಇಸ್ಲಾಂ ಅಸ್ತಿತ್ವಕ್ಕೆ ಬಂದಮೇಲೆ ಆ ಹೀನಪದ್ಧತಿಯನ್ನು





ಧರ್ಮಬಾಹಿರಗೊಳಿಸಲಾಯಿತು. ಬಹುಪತ್ನಿತ್ವಕ್ಕೆ ನಿಯಂತ್ರಣ ಹಾಕಲಾಯಿತು. ಹೆಂಗಸರಿಗೆ ಗಂಡನನ್ನು ಪಡೆಯುವಲ್ಲಿ ಸ್ವಾತಂತ್ರ್ಯ ಸಿಕ್ಕಿತು. ಅಯೋಗ್ಯ ಗಂಡನನ್ನು ಬಿಡುವ ಹಕ್ಕು ಲಭಿಸಿತು. ಆ ದಿನಗಳಲ್ಲಿ ಮುಸ್ಲಿಂ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

"ತಬ್ಬಲಿಗಳ ಸಂಬಂಧ ನ್ಯಾಯ ಪಾಲಿಸಲಾರಿರಿ ಎಂದು ನೀವು ಭಯಪಟ್ಟರೆ, ನೀವು ಇಷ್ಟಪಡುವ ಸ್ತ್ರೀಯರನ್ನು ಇಬ್ಬರನ್ನೊ, ಮೂವರನ್ನೊ, ನಾಲ್ವರನ್ನೊ ವಿವಾಹ ಮಾಡಿಕೊಳ್ಳಿರಿ. ಆದರೆ ಅವರ ಮಧ್ಯೆ ನ್ಯಾಯಪಾಲಿಸಲಾರಿರೆಂದು ನೀವು ಭಯಪಟ್ಟರೆ ಒಬ್ಬಳು ಸ್ತ್ರೀಯೊಡನೆ ಮಾತ್ರ ವಿವಾಹ ಮಾಡಿಕೊಳ್ಳಿರಿ. ಅದಲ್ಲದಿದ್ದರೆ ಯುದ್ಧ ಸೆರೆಯಾಳುಗಳಾಗಿ ನಿಮ್ಮ ಅಧೀನ ಬಂದಿರುವ ಸ್ತ್ರೀಯರನ್ನು ಸ್ವೀಕರಿಸಿಕೊಳ್ಳಿರಿ. ನಿಮ್ಮಿಂದ ಅನ್ಯಾಯವಾಗದಿರಲು ಇದು ಇನ್ನಷ್ಟು ಯೋಗ್ಯವಾಗಿದೆ." (4:3)

ಮದಿನಾ ಬಳಿಯ ಉಹುದ್ ಬೆಟ್ಟದಲ್ಲಿ ಕುರೈಶರು ಮತ್ತು ಮುಸ್ಲಿಮರ ಮಧ್ಯ ಯುದ್ಧವಾಗಿ ಮುಸ್ಲಿಮರ ಕಡೆ ಹೆಚ್ಚಿನ ಜೀವಹಾನಿಯುಂಟಾಯಿತು. ವಿಧವೆಯರ ಮತ್ತು ಅನಾಥ ಮಕ್ಕಳ ಪ್ರಶ್ನೆ ಮುಂದೆ ಬಂದಿತು. ಆಗ ಬಹುಪತ್ನಿತ್ವದ ವಿಚಾರ ವ್ಯಕ್ತವಾಯಿತು. ಇಲ್ಲಿ ಬಹುಪತ್ನಿತ್ವವೆಂಬುದು ಗಂಡಸಿನ ಕಾಮಪಿಪಾಸೆಯ ಪ್ರತೀಕವಲ್ಲ, ನಿರಾಶ್ರಿತರಿಗೆ ಆಶ್ರಯ ಒದಗಿಸುವಂಥದ್ದು. ತಬ್ಬಲಿಗಳ ತಾಯಂದಿರನ್ನು ಮದುವೆಯಾಗದೆ ಅವರನ್ನು ನೋಡಿಕೊಳ್ಳುವುದು ಕುರಾನ್ ಪ್ರಕಾರ ಆದರ್ಶ ಮುಸ್ಲಿಮನ ಲಕ್ಷಣವೆಂಬುದು ಮೇಲಿನ ಸೂಕ್ತದಿಂದ ತಿಳಿದು ಬರುತ್ತದೆ. ಅಷ್ಟೊಂದು ಚಿತ್ತಸ್ಥೈರ್ಯವಿಲ್ಲದ ಮುಸ್ಲಿಮರು ಅನಾಥ ಮಕ್ಕಳ ಯೋಗಕ್ಷೇಮದ ಉದ್ದೇಶದಿಂದ ಅವರ ತಾಯಂದಿರನ್ನು ಮದುವೆಯಾಗಬಹುದು. ಆವಾಗ ಅವರ ಮಧ್ಯ ನ್ಯಾಯಪಾಲಿಸಬೇಕು. ಅದಾಗದಿದ್ದರೆ ಬಹುಪತ್ನಿತ್ವ ಆಚರಿಸಬಾರದು.

"ಆದರೆ ಪತ್ನಿಯರ ನಡುವೆ ಸಮಾನ ನ್ಯಾಯ ಪಾಲಿಸಲು ನೀವೆಷ್ಟು ಪ್ರಯತ್ನಿಸಿದರೂ ಅದು ನಿಮಗೆ ಸಾಧ್ಯವಾಗದು. ಆದ್ದರಿಂದ ನೀವು ಒಬ್ಬಳ ಕಡೆ ವಾಲಿಕೊಂಡು ಇನ್ನೊಬ್ಬಳನ್ನು ನಿಸ್ಸಹಾಯಕ ಸ್ಥಿತಿಯಲ್ಲಿ ಬಿಟ್ಟು ಬಿಡದಿರಿ" (4:129) ಎಂದು ಎಚ್ಚರಿಸಲಾಗಿದೆ.

ದೇವರು ಅನುಮತಿ ನೀಡಿದ ಎಲ್ಲವುಗಳಲ್ಲಿ ಆತ ಅತೀವವಾಗಿ ತಿರಸ್ಕರಿಸುವುದೆಂದರೆ ತಲಾಖ್ ಎಂದು ಪೈಗಂಬರರು ಹೇಳಿದ್ದಾರೆ. ಯಾರು ತಮ್ಮ ಹೆಂಡಂದಿರ ಮೇಲೆ ಅತೀವವಾಗಿ ಕರುಣೆಯುಳ್ಳವರಾಗಿರುತ್ತಾರೊ ಅವರೇ ನಮ್ಮೊಳಗಿನ ಶ್ರೇಷ್ಠರು ಎಂದು ಅವರು ತಿಳಿಸಿದ್ದಾರೆ.

"ಸುಶೀಲೆಯರಾದ ಸ್ತ್ರೀಯರ ಮೇಲೆ ಯಾರು ಆರೋಪ ಹೊರಿಸುತ್ತಾರೊ ಮತ್ತು ನಾಲ್ಕು ಮಂದಿ ಸಾಕ್ಷಿದಾರರನ್ನು ಅವರು ತರುವುದಿಲ್ಲವೊ ಅವರಿಗೆ ಎಂಬತ್ತು ಬಾರೆಟುಗಳನ್ನು ಹೊಡೆಯಿರಿ ಮತ್ತು ಅವರ ಸಾಕ್ಷ್ಯಗಳನ್ನು ಸ್ವೀಕರಿಸಬೇಡಿರಿ. ಅವರೇ ಧರ್ಮಭ್ರಷ್ಟರು." (24:4)

ಸುಳ್ಳು ಆರೋಪ ಹೊರಿಸಿ ಅಥವಾ ಇನ್ನೊಬ್ಬಳನ್ನು ಮದುವೆಯಾಗುವ ಉದ್ದೇಶದಿಂದ ತಲಾಖ್ ಕೊಡುವುದಕ್ಕೆ ಇಸ್ಲಾಂ ಧರ್ಮದಲ್ಲಿ ಅವಕಾಶವೇ ಇಲ್ಲ.

"ವಿವಾಹ ವಿಚ್ಛೇದನ ಮಾಡಲ್ಪಟ್ಟ ಸ್ತ್ರೀಯರಿಗೆ ವಾಡಿಕೆಯಂತೆ ಜೀವನೋಪಾಯಕ್ಕೆ ಏನಾದರೂ ಕೊಡಬೇಕು. ಇದು ದೈವಭಕ್ತರ ಮೇಲಿರುವ ಬಾಧ್ಯತೆಯಾಗಿದೆ." (2:241)

ಒಂದುವೇಳೆ ಒಬ್ಬ ಮಹಿಳೆ ತಪ್ಪು ಮಾಡಿದ್ದು ಸಾಬೀತಾದರೆ ಒಂದು ಸಲ ತಲಾಖ್ ಎಂದು ಎಚ್ಚರಿಸಬೇಕಾಗುವುದು. ಎರಡನೇ ಸಲ ತಪ್ಪು ಮಾಡಿದರೆ ಇನ್ನೊಮ್ಮೆ ತಲಾಖ್ ಎಂದು ಎಚ್ಚರಿಸಬೇಕಾಗುವುದು. ಮೂರನೇ ಸಲ ತಪ್ಪು ಮಾಡಿ ಅದು ಕೂಡ ಸಾಬೀತಾದರೆ ಮಾತ್ರ ತಲಾಖ್ ಹೇಳಿ ಆಕೆಯನ್ನು ವಿವಾಹ ವಿಚ್ಛೇದನಕ್ಕೆ ಒಳಪಡಿಸಬಹುದು. ಇದು ಇಸ್ಲಾಂ ಧರ್ಮದ ನೀತಿ.

ಇಂಥ ಸ್ತ್ರೀಗೆ ಕೂಡ ಜೀವನೋಪಾಯಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕುರಾನ್ ಹೇಳುತ್ತದೆ. ಆದರೆ ಭಾರತದಲ್ಲಿ ಮುಸ್ಲಿಂ ವೈಯಕ್ತಿಕ ಕಾನೂನಿನಪ್ರಕಾರ ತಲಾಖ್, ತಲಾಖ್, ತಲಾಖ್ ಎಂದು ಒಂದೇ ಸಮನೆ ಸುಶೀಲೆಯಾದ ಹೆಂಡತಿಗೆ ಕೂಡ ಹೇಳಿ, ಅವಳ ಜೀವನೋಪಾಯಕ್ಕೆ ಯಾವುದೇ ವ್ಯವಸ್ಥೆ ಮಾಡದೆ ಹೊರಗೆ ದಬ್ಬಬಹುದು!



"ತುಳಿತಕ್ಕೀಡಾದವರು ಈ ಜಗತ್ತಿನ ನಾಯಕರು ಮತ್ತು ನೇರವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿದ್ದೇವೆ" (28:6) ಎಂದು ಕುರಾನ್‌ನಲ್ಲಿ ಹೇಳಲಾಗಿದೆ. ತುಳಿತಕ್ಕೀಡಾದವರ ಆಳುವ ಸಮಾಜ ಬಂದಾಗ ಇಂಥ ಅನೇಕ ಅನ್ಯಾಯಗಳು ದೂರಾಗಬಹುದು.

■ ರಂಜಾನ್ ದರ್ಗಾ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ಭಲಾ ಭಲಾ ವೀರಭದ್ರ!

ವೈದಿಕ ವರ್ಸಸ್ ಕಾಪಾಲಿಕ

ಹೇಗೆ ಆಯಾ ಕಾಲದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು, ರಾಜಕೀಯ ಸಂಘರ್ಷಗಳು, ಸಾಂಸ್ಕೃತಿಕ ಉತ್ಥಾನ, ಪತನ ಹಾಗೂ ತಲ್ಲಣಗಳು, ವರ್ಗ ಹಾಗೂ ವರ್ಣಭೇದಗಳು, ವ್ಯಕ್ತಿಗತ ಹಾಗೂ ಸಮೂಹಗಳ ಮನಸ್ಥಿತಿ ಹಾಗೂ ಭಾವನಾತ್ಮಕ ಒಲವು ನಿಲುವುಗಳು ಮತ್ತು ಆಧ್ಯಾತ್ಮಿಕ ಅಥವಾ ತಾತ್ವಿಕ ವಿಶ್ಲೇಷಣೆಗಳು ಪೌರಾಣಿಕ ಕಥೆಗಳಲ್ಲಿ ಅಂತರ್ಗತವಾಗಿರುತ್ತದೆಯೋ ಅದೇ ರೀತಿ ತಾಂತ್ರಿಕ ಆಚರಣೆಗಳು, ನಂಬುಗೆಗಳು ಮತ್ತು ಪದ್ಧತಿಗಳೂ ಕೂಡಾ ಸಂಕೇತಗಳನ್ನು ಪಡೆದಿರುತ್ತವೆ, ಕಥಾರೂಪಗಳನ್ನು ತಳೆದಿರುತ್ತವೆ.

ಆದರೆ ಆ ಕಾಲಘಟ್ಟದಲ್ಲಿ ರೂಢಿಗಳಲ್ಲಿದ್ದವು, ಅನುಸರಿಸುತ್ತಿದ್ದ ಪದ್ಧತಿಗಳಲ್ಲಿದ್ದವು ಕ್ರಮೇಣ ಸಾಹಿತ್ಯಕೃತಿಗಳಿಗೆ





ಬಂದವ್ರೋ, ಸಾಹಿತ್ಯಕೃತಿಗಳಲ್ಲಿದ್ದವನ್ನು ನೋಡಿ ಅನುಸರಿಸಲಿಕ್ಕೆ ಪ್ರಾರಂಭಿಸಿದರೋ ಹೇಳಲಿಕ್ಕಾಗದು ಅಥವಾ ಎರಡೂ ಬಗೆಗಳದ್ದಾಗಿರಬಹುದು. ವಿವಿಧ ಶಾಸ್ತ್ರಗಳಲ್ಲಿ ವಿವಿಧ ಬಗೆಗಳಾಗಿರಬಹುದು.

ಏನೇ ಆಗಲಿ, ಪುರಾಣಗಳ ಪ್ರಕಾರ ತಂತ್ರ ಸಾಧನೆಗಳಲ್ಲಿ ತೊಡಗಿದ್ದಂತಹ ಕಾಪಾಲಿಕರು ಮತ್ತು ವೇದಗಳನ್ನು ಅನುಸರಿಸುವ ವೈದಿಕರು ಪರಸ್ಪರ ಒಪ್ಪುತ್ತಿರಲಿಲ್ಲ ಎಂಬುದನ್ನು ಗುರುತಿಸಬಹುದು. ಅವರೀರ್ವರ ನಡುವೆ ಅತಿದೊಡ್ಡ ಸಂಘರ್ಷವೇ ನಡೆದುಹೋಗಿದೆ ಎಂಬುದು ಕೂಡ ಕಾಣುತ್ತದೆ.

ದಕ್ಷ ಮತ್ತು ಶಿವ

ಪ್ರಜಾಪಿತ ಬ್ರಹ್ಮನ ಮುಂದುವರಿದ ಪೀಳಿಗೆಯ ದಕ್ಷ, ಅವನ ಮಗಳು ಸತಿ ಅಥವಾ ದಾಕ್ಷಾಯಣಿ ಮತ್ತು ಅವಳನ್ನು ಮದುವೆಯಾಗುವ ಶಿವನ ಕಥೆಯೂ ಕೂಡ ವೈದಿಕ ಯಾಜ್ಞಿಕರ ಮತ್ತು ತಾಂತ್ರಿಕ ಸಾಧಕರ ನಡುವಿನ ಬಹುದೊಡ್ಡ ಅಂತರವನ್ನೂ ಮತ್ತು ಸಂಘರ್ಷವನ್ನೂ ತಿಳಿಸುತ್ತದೆ.

ಅದೊಂದು ಕಾಲಘಟ್ಟದಲ್ಲಿ ನಡೆದಿರಬಹುದಾದಂತಹ ತಾತ್ವಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಭಿನ್ನತೆಗಳಿಂದಾಗಿ ವೈದಿಕರ ಮತ್ತು ಸಹಜ ಅಥವಾ ನೈಸರ್ಗಿಕ ತಾಂತ್ರಿಕರ ನಡುವೆ ಬಹುದೊಡ್ಡ ಸಂಘರ್ಷ ನಡೆದಿರುವ ಕಥೆಯ ರೂಪಕವನ್ನು ದಕ್ಷಯಜ್ಞವು ಹೊಂದಿದೆ. ಶಿವನು ನಿಸ್ಸಂದೇಹವಾಗಿ ಅವೈದಿಕನೆಂಬುದನ್ನು ನಿರೂಪಿಸುವುದಲ್ಲದೇ ವೈದಿಕರ ಯಜ್ಞಾಚರಣೆಗೆ ಸ್ತ್ರೀ ಬಲಿಯಾಗುತ್ತಿದ್ದಳೆಂದೂ ಅದನ್ನು ವಿರೋಧಿಸಿ ಮತ್ತು ಪ್ರತಿಭಟಿಸಿ ಅವೈದಿಕರಾಗಿದ್ದಂತಹ ತಾಂತ್ರಿಕ ಸಾಧಕರು ಹಿಂಸಾತ್ಮಕವಾಗಿಯೇ ಪ್ರತಿರೋಧವನ್ನು ಒಡ್ಡಿರಬಹುದಾದಂತಹ ಪರಿಸ್ಥಿತಿಯನ್ನು ಅನೇಕ ಪುರಾಣಗಳು ಹೇಳುತ್ತವೆ. ಬೇರೆ ಬೇರೆ ಪುರಾಣಗಳಲ್ಲಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳಿದ್ದರೂ ಕೇಂದ್ರ ಅಂಶವು ಇದೇ ಆಗಿದೆ.

ಸ್ಮಶಾನದಲ್ಲಿರುವ, ತಿರಿದು ತಿನ್ನುವ, ಮೈಗೆಲ್ಲಾ ಹೆಣ ಸುಟ್ಟ ಬೂದಿ ಬಳಿದುಕೊಂಡು ಶವಗಳ ಜೊತೆ ಇರುವಂತಹ ತಾಂತ್ರಿಕಾಚರಣೆಗಳನ್ನು ಮಾಡುವ ಶಿವನ ಖಂಡತುಂಡವಾಗಿ ಖಂಡಿಸುವ ಮತ್ತು ನಿಂದಿಸುವ ದಕ್ಷ ಬ್ರಹ್ಮ ವೈದಿಕಾಚರಣೆಗಳನ್ನು ಪ್ರತಿನಿಧಿಸುವವನಾಗುತ್ತಾನೆ. ಅದರಂತೆ ವೈದಿಕಾಚರಣೆಗಳಲ್ಲಿ ಭಾಗವಹಿಸದೇ ಅದು ನಮಗಲ್ಲ ಎಂಬ ಶಿವನ ತಿರಸ್ಕಾರವೂ ಅಲ್ಲಿದೆ.

ಮಹಾಯಾಗವೊಂದು ನಡೆಯುತ್ತಿದ್ದಾಗ ಬ್ರಹ್ಮನೂ ಮತ್ತು ರುದ್ರನೂ ಭಾಗವಹಿಸಿರುತ್ತಾರೆ. ಅಲ್ಲಿಗೆ ಬರುವ ದಕ್ಷನಿಗೆ ಅಲ್ಲಿ ನೆರೆದಿರುವವರು ಎದ್ದು ನಿಂತು ಗೌರವವನ್ನು ತೋರುತ್ತಾರೆ. ಆದರೆ ಬ್ರಹ್ಮ ಮತ್ತು ರುದ್ರ ಮೇಲೇಳುವುದಿಲ್ಲ, ಗೌರವ ತೋರುವುದಿಲ್ಲ. ಇದರಿಂದ ಕುಪಿತನಾಗುವ ದಕ್ಷನು "ದಿಗಂಬರನಾಗಿ ಸ್ಮಶಾನದಲ್ಲಿ ವಾಸಿಸುತ್ತಾ ಚಿತಾಭಸ್ಮ ಬಳಿದುಕೊಳ್ಳುವ ಈ ರುದ್ರನಿಗೆ, ಯಾಗದಲ್ಲಿ ಇಂದ್ರ ಮತ್ತು ವಿಷ್ಣುಗಳಿಗೆ ಸಿಗುವಂತೆ ಹವಿಸ್ಸಿನ ಭಾಗ ಸಿಗದೇ ಹೋಗಲಿ" ಎಂದು ಶಪಿಸುತ್ತಾನೆ. ಇದಕ್ಕೆ ಪ್ರತಿಯಾಗಿ ರುದ್ರ ಶಪಿಸುವುದಿಲ್ಲ. ವೈದಿಕಾಭಿಮಾನಿಯಲ್ಲದ ರುದ್ರನಿಗೆ ಯಾಗದಲ್ಲಿ ಹವಿಸ್ಸಿನ ಭಾಗವೇನೂ ಬೇಕಾಗಿರುವುದಿಲ್ಲ. ಅವನ ಸಾಧನಾ ಪಥವೇ ಬೇರೆಯಾಗಿರುವುದರಿಂದ ಅವನಿಗೆ ಈ ಯಾಗದಿಂದಾಗಲಿ, ಹವಿಸ್ಸಿನಿಂದಾಗಲಿ ಆಗಬೇಕಾದ್ದೇನೂ ಇರುವುದಿಲ್ಲ. ಆದರೆ ರುದ್ರ ಗಣದಲ್ಲಿ ಪ್ರಮುಖನಾದ ನಂದಿ ಇದನ್ನು ಅಪಮಾನವೆಂದು ಭಾವಿಸುತ್ತಾನೆ. ದಕ್ಷನಿಗೆ ಕುರಿದಲೆ ಉಂಟಾಗಲೆಂದು ಶಾಪ ಕೊಡುತ್ತಾನೆ. ಹಾಗೆಯೇ ಅವನು ಅಲ್ಲಿರುವ ದಕ್ಷನ ಬಾಲಬಡುಕ ಋಷಿಗಳೆಂಬ ಪುರೋಹಿತರಿಗೂ ಬೈಯುತ್ತಾನೆ "ಈ ಜನ ಕರ್ಮಭ್ರಷ್ಟರಾಗಲಿ, ಹೊಟ್ಟೆಪಾಡಿಗಾಗಿ ವಿದ್ಯೆ ಕಲಿಯಲಿ, ಯಾಚನೆ ಮಾಡಿ ಬದುಕಲಿ" ಎಂದು.

ಅಂತಹ ಋಷಿಗಳಲ್ಲಿ ಒಬ್ಬನಾದ ಭೃಗುವಿಗೂ ಕೋಪ ಬಂದು ಅವನೂ ರುದ್ರನನ್ನು ಅನುಸರಿಸುವವರ ಶಪಿಸುತ್ತಾನೆ. ಹೀಗೆ ಒಬ್ಬರಿಗೊಬ್ಬರು ಅಸಹನೆಯಿಂದ ತೆಗಳಿಕೊಂಡು ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತಾರೆ.

ಇದು ಉತ್ಕರ್ಷಕ್ಕೆ ಹೋಗುವುದು ದಾಕ್ಷಾಯಣಿ ಬೆಂಕಿಗೆ ಬಿದ್ದಮೇಲೆ.

ಶಿವನು ಇಷ್ಟಪಡದಿದ್ದರೂ ತನ್ನ ತಂದೆ ನಡೆಸುವ "ಬೃಹಸ್ಪತಿಸವ" ಎಂಬ ಅಸಮಾನ್ಯ ಯಜ್ಞಕ್ಕೆ ತಾನು ಹೋಗಬೇಕೆಂದು ತವರುಮನೆಯ ಅಭಿಮಾನದ ಸಾಧಾರಣ ಹೆಣ್ಣಿನಂತೆ ದಾಕ್ಷಾಯಣಿಯು ಆಮಂತ್ರಣವಿರದಿದ್ದರೂ ಯಜ್ಞ ಕ್ಷೇತ್ರಕ್ಕೆ, ಯಾಗ ಮಂಟಪಕ್ಕೆ ಹೋಗುತ್ತಾಳೆ. ಮುಂದಿನ ನಾಟಕೀಯ ಬೆಳವಣಿಗೆಯಲ್ಲಿ ಅಲ್ಲಿ ತನ್ನ ಪತಿಗೆ ಹವಿಸ್ಸನ್ನು ನೀಡದಿರುವ ಬಗ್ಗೆ ದಾಕ್ಷಾಯಣಿ ಪ್ರಶ್ನಿಸುತ್ತಾಳೆ. ದಕ್ಷ ರುದ್ರನ ಮೇಲೆ ತನಗಿರುವ ಕೋಪ ಮತ್ತು ಅಸಹನೆಯನ್ನು ನಿಂದನೆ ಮತ್ತು ಅವಹೇಳನಗಳ ಮೂಲಕ ತೀರಿಸಿಕೊಳ್ಳುತ್ತಾನೆ. ಇದರಿಂದ ಅಪಮಾನಿತಳಾದ ದಾಕ್ಷಾಯಣಿಯು ಬೆಂಕಿಗೆ ಬಿದ್ದು ಸಾಯುತ್ತಾಳೆ. ಕೆಲವು ಕೃತಿಗಳಲ್ಲಿ ಅದೇ ಯಜ್ಞದ ಜ್ವಾಲೆಗೆ ಬಿದ್ದಳೆಂದು ಹೇಳಿದರೆ ಮತ್ತೆ ಕೆಲವು ಕೃತಿಗಳಲ್ಲಿ ತನ್ನ ಮೈಯಿಂದ ಉತ್ಪತ್ತಿಯಾದ ಬೆಂಕಿಯಿಂದಲೇ, ಇಚ್ಛಾಗ್ನಿಯಿಂದಲೇ ದಹಿಸಿ ಸಾಯುತ್ತಾಳೆ ಎಂದು ಹೇಳುತ್ತಾರೆ. ಇನ್ನು ವೀರಗಾಸೆಯ ಕೆಲವು ಸಾಲುಗಳಲ್ಲಿ "ನಿನ್ನ ಹೆಣ್ಣುಮಕ್ಕಳು ಮುಂಡೆಯರಾಗಲಿ, ಆಗಸ ತೂಕದ ಚಿನ್ನವಿಲ್ಲದಂತಾಗಲಿ, ಭೂಮಿ ತೂಕದ ಬೆಳ್ಳಿಯಿಲ್ಲದಂತಾಗಲಿ" ಎಂದು ಶಾಪವನ್ನೂ ತನ್ನ ತಂದೆಗೆ ಕೊಡುತ್ತಾಳೆ. ಇದು ಬಹುಶಃ ಜಾನಪದರಲ್ಲಿ ತವರಿನ ಮನೆಗೆ ಅತೀ ಆದ್ಯತೆ ಕೊಡುತ್ತಿದ್ದ ಹೆಣ್ಣು ಮಕ್ಕಳ ಸಿದ್ಧ ಆಶಯಕ್ಕೆ ಬಂಡಾಯವಾಗಿ ರಚಿತವಾಗಿದೆ. ಅದೇನೇ ಇರಲಿ ಅವಳು ಬೆಂಕಿಯಲ್ಲಿ ಸುಟ್ಟುಹೋದಳು.

ಆಗ ಅವಳ ಬೆಂಗಾವಲಿಗೆ ಬಂದಿದ್ದ ಗಣಗಳು ಇವರ ಮೇಲೆ ಬೀಳಲು ಯತ್ನಿಸುತ್ತಾರೆ. ಭೃಗುವು ಜಪಿಸಿ ಮಾಡಿದ ಹೋಮದಿಂದ ಋಭುಗಳೆಂಬ ದೇವತೆಗಳು ಸಾವಿರಾರು ಸಂಖ್ಯೆಯಲ್ಲಿ ಉದ್ಭವವಾಗಿ ವಿವಿಧ ಆಯುಧಗಳನ್ನು ಬಳಸಿ ರುದ್ರನ ಗಣಗಳನ್ನು ಓಡಿಸುತ್ತಾರೆ.

ಆದರೆ ದಧೀಚಿಯೆಂಬ ಋಷಿಯು ಶಿವನಿಗೆ ಪರವಾಗಿ ಮಾತಾಡಲು (ಸ್ಕಂದ ಪುರಾಣ) ಅವನನ್ನೂ ಅಪಮಾನಿಸಿ ಕಳುಹಿಸುವ ದಕ್ಷ "ಅಯ್ಯಾ ಬ್ರಾಹ್ಮಣರೇ, ಶಿವನಿಗೆ ಪ್ರಿಯನೂ, ಮಹಾಶೂರನೂ ಆದ ದಧೀಚಿಯೆಂಬ ಹೆಸರಿನವನು ಇದೀಗ ಸಾಗಿಹೋದನು. ದುಷ್ಟಬುದ್ಧಿಗಳೂ, ತಿಳಿಗೇಡಿಗಳೂ, ಅನೃತವಾದಗಳಲ್ಲಿಯೇ ಆಸಕ್ತರಾದವರೂ, ದುರುಳರೂ, ವೇದಬಾಹಿರರೂ, ದುರಾಚಾರರೂ ಆದ ಇವರೆಲ್ಲರೂ ಈ ಯಜ್ಞಕರ್ಮದಲ್ಲಿ ತ್ಯಾಜ್ಯರೇ! ಈಗ ಇಲ್ಲಿರುವ ವಿಷ್ಣುವೇ ಮೊದಲಾದ ನೀವೆಲ್ಲರೂ ವೇದಗಳಲ್ಲಿ, ವೇದೋಕ್ತ ಕರ್ಮಗಳಲ್ಲಿ ಅಕ್ಕರೆಯುಳ್ಳವರು. ಇಂತಹ ಸದ್ವಿಪ್ರರಾದ ನೀವು ಈ ನನ್ನ ಯಾಗವನ್ನು ಜಾಗ್ರತೆಯಾಗಿ ಸಫಲಗೊಳಿಸಿರಿ" ಎಂದು ಕೇಳುತ್ತಾನೆ.

ವೈದಿಕ ದೇವತೆಗಳು ಶಿವಗಣವನ್ನು ಸೋಲಿಸಿ ಕಳುಹಿಸುತ್ತಾರೆ.

ವಿಷಯ ತಿಳಿದ ರುದ್ರ ಕಿತ್ತು ಬಿಸುಡುವ ಕೆಂಜೆಡೆಯಿಂದ ಹುಟ್ಟಿ ಬಂದ ವೀರಭದ್ರನ ನೇತೃತ್ವದಲ್ಲಿ ದಕ್ಷನ ಗರ್ವಭಂಗಕ್ಕೆ ಗಣವು ಸಿದ್ಧವಾಯಿತು.

ಆಹಾ ವೀರ, ಆಹಾ ರುದ್ರ!

ವೀರಗಾಸೆಯ ಸಾಲುಗಳ ಪ್ರಕಾರ, ವೀರಭದ್ರನು ಹುಟ್ಟಿದಕೂಡಲೇ ಸಪ್ತ ಸಮುದ್ರಗಳು ಬತ್ತಿ ಹೋಗುತ್ತವೆ. ಲೋಕವನ್ನೇ ಬಿಲ್ಲನ್ನಾಗಿ ಮಾಡಿಕೊಳ್ಳುವ ವೀರಭದ್ರನು ಭೂಮಿಯನ್ನೇ ಬಾಣ ಮಾಡಿಕೊಂಡು, "ತಂದೆಯೇ ನಮಗೆ ಯಾರು ವೈರಿ?" ಎಂದು ಕೇಳುತ್ತಾನೆ. ಅದಕ್ಕೆ ಶಿವನು ತನ್ನ ವೈರಿಯು ದಕ್ಷನೆಂದೂ, ಅವನದು ಮುನ್ನೂ... ಗಾವುದ ಪಟ್ಟಣ, ಅದಕ್ಕೆ ಮುನ್ನೂರ ಅರವತ್ತು... ಒಂದೊಂದು ಬಾಗಿಲಿಗೂ ಒಬ್ಬೊಬ್ಬ... ಕಾವಲಿರುತ್ತಾರೆ. ಆ ರಾಕ್ಷಸರ ಒಂದೊಂದು ... ಬಿದ್ದರೆ ಒಂದು ಕೋಟಿ ರಾಕ್ಷಸರು ಜನಿಸುತ್ತಾ... ಹೇಳಿ ಅವನ ಹಿಂದೆಯೇ ಜನಿಸಿದ ಚೌಡೇ... ಸಹಾಯಕ್ಕಾಗಿ ಕಳುಹಿಸಿಕೊಡುತ್ತಾನೆ.

ವೀರಭದ್ರನ ನೇತೃತ್ವದಲ್ಲಿ ಗಣಗಳು ... ನಡೆದರು. ಯಾಗ ಮಂಟಪವನ್ನು ಧ್ವಂಸ ... ಮಕಣಿವಂತ ಎಂಬ ಪ್ರಮಥ ಭೃಗುವನ್ನು ... ಹಾಕಿದರೆ, ನಂದಿ ಭಗ ಎಂಬುವನನ್ನು ಕಟ್ಟಿ ... ವೀರಭದ್ರ ಭೃಗುವಿನ ಗಡ್ಡ ಮೀಸೆಗಳನ್ನು ತರಿದು ... ಭಗನ ಕಣ್ಣುಗಳನ್ನು ಕೀಳುತ್ತಾನೆ. ಪೂಷನ್ನಿನ ಹ... ಉದುರಿಸಿದನು.

ಇನ್ನು ಕೂಷ್ಮಾಂಡಪತಿಯೆಂಬ ಶಿವಕಿಂಕರನು ಕುಬೇರನ ಜೊತೆ ಹೋರಾಡುತ್ತಾನೆ. ಮಹಾ... ಮುಂಡನು ವರುಣನೊಡನೆ ಹೋರಾ... ಮಹಾಬಲಿಷ್ಠನಾದ ಚಂಡ ನಿರ್ಋತಿಯೊಡನೆ ... ಮಾಡುತ್ತಾನೆ. ಗಣನಾಯಕನಾದ ಮಹಾಭೈರವನು ... ಚಕ್ರಗಳೊಡಗೂಡಿ ದೇವತೆಗಳೆಲ್ಲರನ್ನೂ ಸಿಗಿದು ಅ... ಅವರ ಕೆನ್ನೆತ್ತರನ್ನು ಕುಡಿಯುತ್ತಾನೆ. ಇತರ ಕ್ಷೇತ್ರಪಾ... ಭೂತ ಪ್ರಮಥ ಗುಹ್ಯಕರೂ, ಶಾಕಿನಿ ಡಾಕಿ... ಮಹಾ ಭಯಂಕರೆಯರಾದ ನವದುರ್ಗೆ... ಯೋಗಿನಿಯರೂ, ರಾಕ್ಷಸಿಯರೂ ಅ... ಕೂಷ್ಮಾಂಡಕನೇ ಮೊದಲಾದವರು ಘಟ್ಟಿಯಾಗಿ ... ಆ ದೇವತೆಗಳ ರಕ್ತವನ್ನು ಕುಡಿಯುತ್ತಾ, ಯಜ್ಞ... ಮಾಂಸವನ್ನು ತಿನ್ನುವರೆಂದು ಸ್ಕಂದ ಪು... ಉಲ್ಲೇಖಿಸುತ್ತಾರೆ.

ಇವುಗಳನ್ನೆಲ್ಲಾ ನೋಡಿದರೆ ಇದು ಬಹಳ ಮ... ವೈದಿಕರಿಗೂ ಮತ್ತು ತಾಂತ್ರಿಕರಿಗೂ ನಡೆದಿರುವ ... ಸಂಘರ್ಷವೆಂದು ನೇರವಾಗಿ ತೋರುತ್ತದೆ. ... ಮುಂದುವರಿದು ನಡೆದಿರುವಂತಹ ಹಲವು ... ಸಂಘರ್ಷಗಳ ಒಂದು ರೂಪಕವಾಗಿಯೂ ತೋ...


ಬ್ರಾಹ್ಮಣ್ಯದ ವಿರುದ್ಧದ ಯು...


ಗಣಗಳು, ಅಘೋರಿಗಳು, ಕಾಪಾಲಿಕರು, ... ಯೋಗಿಗಳು; ಇವರಿಗೆಲ್ಲಾ ವೈದಿಕತೆಯ ಬಗ್ಗೆ ... ಆಕ್ರೋಶ ಮತ್ತು ಪ್ರತಿಭಟನೆ ಅಥವಾ ಒಂದು... ಅಸಹನೆ ಎಷ್ಟಿತ್ತೆಂದರೆ, "ಶಿವಕಿಂಕರರು ಭೃಗುವನ್ನು ... ಅವನ ಗಡ್ಡ ಮೀಸೆಗಳನ್ನು ಕಿತ್ತು ಹಾಕಿದುದಲ್ಲದೆ ... ಬ್ರಾಹ್ಮಣರೆಲ್ಲರನ್ನೂ ಹೊಡೆದೆಬ್ಬಿಸಿ ಹೊರದೂಡಿ...


ಬ್ರಾಹ್ಮಣರೆಂದರೆ ಬಹುಪೂಜನೀಯರು, ಭೂ... ಎಂದೆಲ್ಲಾ ಅವರಿಗೆ ಮಾನ್ಯತೆ ಕೊಡುತ್ತಿದ್ದಂತಹ ಸಮ... ಅವರನ್ನು ಹೊಡೆದೋಡಿಸುವಂತಹ ಶೈವರ ಪ್ರತಿಭ... ಮೂಲ ತಾಂತ್ರಿಕಾಚರಣೆಗಳ ಸಾಧಕರಲ್ಲಿದೆ.

"ಪೂಷಾ ಮತ್ತು ಸ್ವಧಾ ದೇವತೆಗಳನ್ನೂ, ಋ... ವಿಕಾರವಾದ ಚೇಷ್ಟೆಗಳಿಂದ ಬಹಳ ಅಸ... ಅಣಕಿಸಿದರು. ದುರುಳನಾದ ದಕ್ಷನ ಯಜ್ಞದ ಪವಿ... ಅಗ್ನಿಕುಂಡದಲ್ಲಿ ಮಲ ಮೂತ್ರಾದಿಗಳನ್ನು ... ಅಪವಿತ್ರಗೊಳಿಸಿದರು. ಬಹಳವಾಗಿ ಕೆರಳಿಹೋ... ಶಿವಗಣಗಳು ಆ ಯಜ್ಞವಾಟಿಕೆಯಲ್ಲಿ ಬ... ಹೇಳಬಾರದುದನ್ನೆಲ್ಲಾ ಮಾಡಿಬಿಟ್ಟರು."

ದೇವತೆಗಳಿಗೆ ಹವಿಸ್ಸಿನ ಶಕ್ತಿ ಬೇಕು. ಅದರ ... ಪರಾವಲಂಬಿ ಅವರು. ಆದರೆ ತಮ್ಮ ಶಕ್ತಿಯನ್ನು ... ಉದ್ಭವಿಸಿಕೊಳ್ಳುವ, ಶಮನ ಮಾಡಿಕೊಳ್ಳುವ ತಾಕ... ಈ ತಾಂತ್ರಿಕರು. ಸ್ವತಂತ್ರರು ಮತ್ತು ವೈದಿಕರ ಯ... ಅಂಕೆ ಪಾಶಗಳಿಗೆ ಬಗ್ಗದವರು. ಅದೇ ಅವರ ಸ...







ವದ ಮೂಲವಾಗಿತ್ತು, ಎಲ್ಲರೂ ಅವರ ಶಕ್ತಿಗಳನ್ನು ವರೇ ಗಳಿಸಿಕೊಳ್ಳುವಂತಾಗಿಬಿಟ್ಟರೆ ವೈದಿಕರ ನು? ಅವರ ಸಂಪಾದನೆ ಮತ್ತು ಮಾನ್ಯತೆಗಳ ವೇನಾಗಬೇಕು? ಇದು ಸಮಸ್ಯೆ.

ವೀರಗಾಸೆಯಲ್ಲಿ

ನ್ನು ವೀರಗಾಸೆಯ ಪ್ರಕಾರ, ವೀರಭದ್ರನು ದಕ್ಷನ ಕ್ಕೆ ಕಾವಲಾಗಿರುವ ರಾಕ್ಷಸರನ್ನು ಸಂಹರಿಸಿದ ನಂತರ ಕ್ಷನ ಯಾಗಶಾಲೆಗೆ ನಡೆದು ಅವನ ತಲೆಯನ್ನು ತ್ತಾನೆ. ತಲೆ ಅಗ್ನಿಕುಂಡಕ್ಕೆ ಬಿದ್ದು ಸುಟ್ಟುಹೋಗುತ್ತದೆ. ಮಡದಿ ವೀರಭದ್ರನಿಗೆ ಆರತಿಯನ್ನು ಎತ್ತಿ ಪತಿಭಿಕ್ಷೆ ತ್ತಾಳೆ. ರುದ್ರನೂ ವೀರಭದ್ರನಿಗೆ ಈ ಧ್ವಂಸಕಾರ್ಯಕ್ಕೆ ಡುವ ಮುನ್ನ ಶರಣು ಹೊಕ್ಕವರನ್ನು ಕಾಯಲು ಳುತ್ತಾನೆ. ಆದ್ದರಿಂದ ದಕ್ಷನ ಉಳಿಸಲು ನೋಡಿದರೆ ಟ್ಟಾಗಿರುತ್ತದೆ. ದಕ್ಷನ ತಲೆ ಸುಟ್ಟು ಹೋಗಿರುತ್ತದೆ. ಈಗ ಪ್ರಾಣದಾನ ಮಾಡಲೇಬೇಕಾದ ಕಾರಣದಿಂದ ದಿಕ್ಕಿಗೆ ತಲೆ ಹಾಕಿ ಮಲಗಿರುವ ಪ್ರಾಣಿಯ ನ್ನು ಕತ್ತರಿಸಿ ತರಲು ಹೇಳುತ್ತಾನೆ. ಅದರಂತೆ ಗಣಗಳು ಟು, ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗಿದ್ದ ಟಗರನ್ನು , ಅದರ ತಲೆಯನ್ನು ಕತ್ತರಿಸಿ (ಅದೇ ಗಣೇಶನಿಗೆ ು ತಲೆ ಒದಗಿದಂತೆ) ದಕ್ಷನಿಗೆ ಕೂಡಿಸಿ ಜೀವದಾನ ುತ್ತಾನೆ ವೀರಭದ್ರ.

ಮೊಣಕಾಲಿಗೆ ಜಂಗು ಎಂಬ ದೊಡ್ಡ ದೊಡ್ಡ ುನ್ನು ಧರಿಸಿ, ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಭದ್ರನ ಹಲಗೆಯನ್ನು ಹಿಡಿದುಕೊಂಡು, ಕರಡಿ ಮತ್ತು ಳ ವಾದ್ಯದ ನಾದಕ್ಕೆ ಗತ್ತಿನಿಂದ ಲಯಬದ್ಧವಾಗಿ ಯುವುದನ್ನು ನೋಡುವುದೇ ಒಂದು ಸೊಗಸು. ತದ ಮಧ್ಯೆ ವೀರಭದ್ರನ ಒಡಪುಗಳನ್ನು ಹೇಳುತ್ತಾರೆ. ಆಹಾ ವೀರಾ, ಆಹಾ ಶರಬಾ, ಭಲಾ ಭಲಾ ವೀರಭದ್ರ ು ಉದ್ಗರಿಸುತ್ತಾ, ವೀರಭದ್ರನ ಪ್ರತಾಪವನ್ನು ಡಾಡುತ್ತಾರೆ.

ಇದರಲ್ಲಿ ಜಾನಪದ ಆಚರಣೆಗಳಾದ ಹೆಂಗಳೆಯರು ಎತ್ತುವ ಸಂಪ್ರದಾಯಗಳೆಲ್ಲಾ ಸೇರಿಕೊಂಡಿದ್ದರೆ, ಕೆಗೆ ಗಣಪತಿಯ ಕಥೆಯ ಪೌರಾಣಿಕ ಎಳೆಯೂ ು ಹಾಕಿಕೊಂಡಿದೆ. ದಕ್ಷಿಣವೆಂದರೆ ನರಕವಾಗಿದ್ದು, ರವೆಂದರೆ ಸ್ವರ್ಗವಾಗಿದ್ದು, ಎಲ್ಲಾ ಉತ್ಥಾನಗಳಿಗೂ ರದ ಕಡೆಗೆ ಮುಖ ಮಾಡಿಕೊಳ್ಳುತ್ತಾರೆ. ಅಂತೆಯೇ ಾಣಗಳಲ್ಲಿ ಅತ್ಯಂತ ಘೋರವಾದ ಪ್ರತಿಜ್ಞೆ ುವವರಂತೆ ಋಷಿಗಳು "ತಲೆ ಬೋಳಿಸಿಕೊಂಡು ಾಭಿಮುಖವಾಗಿ ಹೋಗಿಬಿಡುವೆನು" ಎಂದು ದ್ದೂ ಇದೆ. ಒಟ್ಟಾರೆ ದಕ್ಷಿಣ ವರ್ಜ್ಯ. ಉತ್ತರ ಮಾನ್ಯ. ಕ್ಕೆಲ್ಲಾ ಸೆಡ್ಡು ಹೊಡೆದು ದಕ್ಷಿಣದ ಘನತೆಯನ್ನೂ ದವನು ಶಿವನೇ, ದಕ್ಷಿಣಾಮೂರ್ತಿಯ ರೂಪದಲ್ಲಿ. ಗಳನ್ನು ತಿರಸ್ಕರಿಸಿದ ಶೈವ ಪರಂಪರೆಯ ಕಾಪಾಲಿಕ ಗೆ ಅದೇ ವೇದಗಳೇನೂ ದೊಡ್ಡದೇನಲ್ಲ. ತಾನು ನ್ನೇ ಬೋಧಿಸುವಷ್ಟು ಜ್ಞಾನವಿತ್ತು. ತಾನೇ ಗುರುವಾಗಿ ದಗಳನ್ನೇ ದಕ್ಷಿಣದವರಿಗೆ ಬೋಧಿಸಿ ಾಮೂರ್ತಿಯಾದ. ಉತ್ತರದ ವೇದಗಳು, ವೈದಿಕತೆ, ಹ್ಮಣ್ಯವು ದಕ್ಷಿಣಕ್ಕೆ ಅದೂ ಶಿವನ ಮೂಲಕವೇ ುವುದು ಒಂದು ರೂಪಾಂತರದ ಕತೆ. ಅದನ್ನು ಮುಂದೆ ೋಡೋಣ.

ಹರಿ ಸರ್ವೋತ್ತಮ

ವೈಷ್ಣವ ಪುರಾಣಿಕರಿಗೆ ಎಲ್ಲವನ್ನೂ ವಿಷ್ಣುವೇ ನಡೆಸಿದ್ದು ನ್ನುವಂತಹ ಗೀಳಿದೆ. ಅವರ ಪುರಾಣಗಳಲೆಲ್ಲಾ ಅದನ್ನೇ ಸಿಕೊಂಡೂ ಬರುತ್ತಾರೆ. ಶಿವನ ಸಾಧನೆಗಳಿಗೂ ಹರಿ ಕ್ಷವೇ ಕಾರಣವೆಂದು ಹೇಳುವಂತಹ ಒಂದು ಪಕ್ಷಪಾತದ ಅವರದ್ದು. ಸಮುದ್ರ ಮಥನದ ಕಾಲದಲ್ಲಿ ಶಿವ ಲಾಹಲವನ್ನು ಕುಡಿದು ಲೋಕವನ್ನುಳಿಸುವುದು ಕೂಡ ಷ್ಣುವಿನ ಕೃಪೆಯಿಂದಲೇ ಎನ್ನುವಂತೆ, ಇಲ್ಲಿಯೂ ದಕ್ಷನಿಗೆ ದಾನ ದೊರೆತು ಮೇಕೆಯ ತಲೆ ದೊರೆತಾದ ಮೇಲೆ ವಿಷ್ಣುವನ್ನು ಧ್ಯಾನಿಸುತ್ತಾನಂತೆ. ಯಾಗಕ್ಕೆ ಭಂಗ ದಿರುವಂತೆ ವಿಷ್ಣುವಿಗೆ ಹವಿಸ್ಸನ್ನು ಅರ್ಪಿಸುತ್ತಾನಂತೆ. ಷ್ಣು ಅಲ್ಲಿಗೆ ಬಂದಮೇಲೆ ಮತ್ತೆ ಯಾಗವು ಸಾಂಗವಾಗಿ ದು ಅವನ ಶಿಫಾರಸ್ಸಿನಲ್ಲಿ ದಕ್ಷನು ರುದ್ರನಿಗೆ ಹವಿಸ್ಸನ್ನು ರ್ಪಿಸುತ್ತಾನಂತೆ. ಆಗ ವಿಷ್ಣುವು ದಕ್ಷನ ಮುಂದಿಟ್ಟುಕೊಂಡು ೋಕಕ್ಕೆ ಬುದ್ಧಿವಾದ ಹೇಳುತ್ತಾನೆ. "ನಾನು ಬ್ರಹ್ಮ, ರುದ್ರ ರೆಯಲ್ಲ, ನಾನೇ ಬ್ರಹ್ಮನಾಗಿ ಸೃಷ್ಟಿ ಮಾಡುತ್ತೇನೆ. ಷ್ಣುವಾಗಿ ಕಾಪಾಡುತ್ತೇನೆ. ಶಿವನಾಗಿ ಲಯ ಮಾಡುತ್ತೇನೆ" ದು ಎಲ್ಲಾ ಕ್ರೆಡಿಟ್‌ಗಳನ್ನೂ ತನ್ನ ಅಕೌಂಟಿಗೇ ಕೊಂಡುಬಿಡುತ್ತಾನೆ.

ಒಟ್ಟಾರೆ ವೈದಿಕರ ಪರವಾದ ವಿಷ್ಣು, ತಾಂತ್ರಿಕರ ವಾದ ಶಿವನ ನಡುವಿನ ಭಿನ್ನಾಭಿಪ್ರಾಯವಾಗಲಿ, ವೈದಿಕರ ವಾದ ಯಾಜ್ಞಿಕ ದಕ್ಷ ಮತ್ತು ಸ್ಮಶಾನವಾಸಿ ರುದ್ರನ ುವಿನ ಸಂಘರ್ಷವಾಗಲಿ ಬರಿಯ ಕಥೆಗಳಾಗಿರದೇ ಕ ಮತ್ತು ಶೈವ ತಂತ್ರ ಸಾಧನೆಗಳಿಗೂ ಮತ್ತು ವೈದಿಕ ಚರಣೆಗಳಿಗೂ ನಡುವೆ ಇದ್ದಂತಹ ಸ್ಪರ್ಧೆ ಮತ್ತು ಾಟವೇ ಆಗಿದೆ. ■

ಸಮಸ್ಯೆಗೊಂದು ಸಿಂಪಲ್ ಸೂತ್ರ


ಅಣಕ

• ಎಚ್.ಎಲ್.ಕೇಶವಮೂರ್ತಿ

ಹೀಗೊಂದು ಸಿನಿಮಾ ದೃಶ್ಯವನ್ನು ಊಹಿಸಿಕೊಳ್ಳಿ. ಯಾರೊ ಒಬ್ಬ ಏನೋ ಅಪರಾಧ ಮಾಡಿದ. ಅಪರಾಧಿತನ ತಪ್ಪಲ್ಲ, ಎಲ್ಲರೂ ಒಂದಲ್ಲ ಒಂದು ಸಲ ಯಾವುದಾದರೂ ಅಪರಾಧದಲ್ಲಿ ಭಾಗಿಯಾಗಿರುವವರೇ. ಅದರ ಚಿಂತೆ ಅಲ್ಲ. ಅಪರಾಧ ಮಾಡಿ ಪೊಲೀಸರಿಗೆ ಸಿಕ್ಕಿಬೀಳುವುದು ಮೂರ್ಖತನವೇ ಸರಿ. ಅಂತಹ ಮೂರ್ಖ ಅವನಾಗಿದ್ದ. ಈಗ ಕಾಲ ಮಿಂಚಿಹೋಗಿತ್ತು, ಪೊಲೀಸರ ಅತಿಥಿ ಆಗಿದ್ದ. ಅವರ ಆತಿಥ್ಯ ಕೋರ್ಟು, ಜೈಲು ಇವೆಲ್ಲ ಅವನಿಗೆ ಬೇಕಾಗಿರಲಿಲ್ಲ, ಅವುಗಳಿಂದ ಪಾರಾಗುವ ವಿದ್ಯೆ ಅವನಿಗೆ ಕರಗತವಾಗಿತ್ತು, ಹಣದ ಕಂತೆಯನ್ನೂ ಪೊಲೀಸರ ಮುಂದೆ ಹಿಡಿದ. ಇದರಿಂದ ಎಂದಿನಂತೆ ಅವರು ಸಂಪ್ರೀತರಾಗಿ ಅವನ ಬಿಡುಗಡೆ ಆಗಬೇಕಿತ್ತು, ಆದರೆ ಹಾಗೆ ಆಗಲಿಲ್ಲ. ಕೆಂಡಾಮಂಡಲ ಆದ ಅಧಿಕಾರಿ 'ಡ್ಯೂಟಿ ಮೇಲಿರೋ ಆಫೀಸರ್‌ಗೇ ಲಂಚ ಕೊಡೋಕೆ ಬರ್‍ತೀಯೇನೋ ಬದ್ಮಾಷ್. ಇಂತಹ ಆಮಿಷಕ್ಕೆ ಬಲಿಯಾಗೋಕೆ ಇದು ಕರ್ನಾಟಕ ಪೊಲೀಸ್' ಎಂದು ಖಡಕ್ಕಾಗಿ ಹೇಳಿದವನೇ ಅಪರಾಧಿಗೆ ನಾಲ್ಕು ತದುಕಿದ.

ಇದು ನೋಡುವುದಕ್ಕೆ ಹಿತವಾಗಿರುತ್ತೆ ಅಲ್ವಾ. ಆದರೆ 'ಸಿನಿಮಾ ಎನ್ನುವುದು ನಿರ್ದೇಶಕರ ಮಾಧ್ಯಮ. ಅವರು ಹೇಳಿದಂತೆ ನಾನು ನಟಿಸಿದ್ದೇನೆ ಅಷ್ಟೆ. ಅಪರಾಧಿ ನಾನಲ್ಲ ನಿರ್ದೇಶಕ' ಎನ್ನಬಹುದು. ನಿರ್ದೇಶಕನನ್ನು ಕೇಳಿದರೆ 'ಕತೆ ಇದ್ದದ್ದೆ ಹಾಗೆ. ಅದನ್ನು ಯಥಾವತ್ತಾಗಿ ತೆರೆಯ ಮೇಲೆ ತಂದಿದ್ದೇನೆ. 'ತಪ್ಪು ಏನಿದ್ದರೂ ಕತೆಗಾರನದ್ದು' ಎನ್ನಬಹುದು. ಕತೆಗಾರನನ್ನು ಕೇಳಿದರೆ 'ಅನ್ನದಾತರು ಹೇಳಿದ ರೀತೀಲಿ ಕತೆ ಹೆಣೆಯಬೇಕು. ಅದು ಹೊಟ್ಟೆ ಪಾಡಿನ ಪ್ರಶ್ನೆ. ನಿರ್ಮಾಪಕ ಹೇಳಿದಂಗೆ ಬರ್‍ದಿದ್ದೀನಿ' ಎಂದು ನಿರ್ಮಾಪಕನ ಕಡೆ ಬೆರಳು ಮಾಡಬಹುದು. ನಿರ್ಮಾಪಕ ಎಂದರೆ ಹಣದ ಕುಳ. ಹಣಚೆಲ್ಲಿ ಹಣ ಬೆಳೆಯೋದು ಅವನ ಧರ್ಮ. ಅವನ ಮೇಲೆ ಕೇಸು ಜಡಿದರೆ 'ಜನ ಏನು ಕೇಳ್ತಾರೊ ಅದನ್ನ ಕೊಡ್ತೀವಿ. ಇದು ಜನರ ತಪ್ಪೇ ಪರಂತು ನನ್ನದಲ್ಲ' ಎನ್ನಬಹುದು. ಅವನ ಮಾತನ್ನೇ ನಂಬುವುದಾದರೆ ಸಿನಿಮಾ ನೋಡಿದ ತಪ್ಪಿಗೆ ಎಲ್ಲರನ್ನೂ ಜೈಲಿಗೆ ನೂಕಬೇಕಾಗುತ್ತದೆ!

ಇಂತಹ ಗೊಂದಲದಿಂದ ಪಾರಾಗಲು ಈ ಸೂತ್ರ ಬಳಸಬಹುದೇನೋ. ಅದೇನು ಅಂದರೆ ಸಿನಿಮಾಗಳಲ್ಲಿ ಪರದೆಯ ಮೇಲೆ 'ಮದ್ಯಪಾನ, ಧೂಮಪಾನ ಆರೋಗ್ಯಕ್ಕೆ



ಇಂತಹ ದೃಶ್ಯಗಳು ಅಪರೂಪ. ಪೊಲೀಸರು ಎಂದರೆ ಮಾನಗೆಟ್ಟವರು, ಅನಾಗರಿಕರು, ಯೂನಿಫಾರಂನಲ್ಲಿರೋ ಕ್ರಿಮಿನಲ್‌ಗಳು ಎನ್ನುವಂತೆ ತೋರಿಸುವ ಸಿನಿಮಾ ದೃಶ್ಯಗಳೇ ಹೆಚ್ಚು. ಇದಕ್ಕೆ ಆಳುವ ಪಕ್ಷಗಳ ವಿರೋಧ ಇರುವಂತಿದೆ. ಬಿಸಿಲು ಮಳೆ, ಹಗಲು ರಾತ್ರಿ, ಹಬ್ಬಹರಿದಿನ ಎನ್ನದೆ ಸಾರ್ವಜನಿಕರು ನೆಮ್ಮದಿಯಿಂದ ಬದುಕಲು ಕಾರಣೀಭೂತರಾದ ಪೊಲೀಸರನ್ನು ಹೀಗೆ ಕೆಟ್ಟದಾಗಿ ತೋರಿಸುವುದು ಸರಿಯಲ್ಲ ಎಂಬುದು ಅದರ ಅಭಿಪ್ರಾಯ ಇರುವಂತಿದೆ.

ಆಳುವ ಪಕ್ಷಗಳ ಚಿಂತನೆ ಈ ನಿಟ್ಟಿನಲ್ಲಿರಬಹುದು. ಆದರೆ ಸಿನಿಮಾ ಮಂದಿಯ ಆಲೋಚನೆಯೇ ಬೇರೆ ಇರುವಂತಿದೆ. ಸಿನಿಮಾ ಎಂಬುದು ಸಮಾಜದಿಂದ ಹೊರತಾದುದಲ್ಲ, ಅದರ ಪ್ರತಿಬಿಂಬ ಇದು. ಪೊಲೀಸರು ಇರುವುದು ಹಾಗೆ ಸಿನಿಮಾಗಳಲ್ಲಿ ತೋರಿಸುವುದು ಹಾಗೆ ಎನ್ನುವುದು ಅವರು ಅಭಿಪ್ರಾಯ ಇರುವಂತಿದೆ. ಅದಕ್ಕೇ ಇರಬೇಕು, ಇತ್ತೀಚೆಗೆ ಸಿನಿಮಾಗಳಲ್ಲಿ ಪೊಲೀಸರನ್ನೂ ಬಹಳ ಕೆಟ್ಟದಾಗಿ ತೋರಿಸುವ ಪ್ರವೃತ್ತಿ ಹೆಚ್ಚುತ್ತಿದೆ.

ಹೀಗೆ ಆಗಬಾರದು. ಇಂತಹ ಪ್ರವೃತ್ತಿ ಸಮಾಜಕ್ಕೆ ಕೆಟ್ಟ ಸಂದೇಶ ನೀಡುತ್ತದೆ ಎಂಬುದು ಸರ್ಕಾರಗಳ ನಿಲುವು. ಆದರೆ ಅದು ಆಗುತ್ತಲೇ ಇದೆ. ಇಂತಹ ಪ್ರವೃತ್ತಿಗೆ ಕಡಿವಾಣ ಹಾಕಬೇಕು ನಿಜ. ಆದರೆ ಹಾಕುವುದು ಹೇಗೆ? ಆಳುವ ಪಕ್ಷಗಳನ್ನು ಕಾಡುತ್ತಿರುವ ಪ್ರಶ್ನೆ ಇದು. ಈ ಕುರಿತು ಆಳವಾಗಿ ಚಿಂತಿಸಿರುವ ಮಹಾರಾಷ್ಟ್ರದ ಭಾಜಪ ಸರ್ಕಾರ ಇದಕ್ಕೆ ಒಂದು ದೀರ್ಘಕಾಲೀನ ಪರಿಹಾರವನ್ನು ಕಂಡು ಹಿಡಿದಿರುವಂತಿದೆ. ಈ ಪರಿಹಾರವೆಂದರೆ ಇಂತಹ ಅಪರಾಧ ಎಸಗುವವರಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಬೇಕು!

ಎಲ್ಲ ಒಳ್ಳೆಯ ಕೆಲಸಗಳಿಗೂ ಅಡಚಣೆಗಳು ಇದ್ದೇ ಇರುತ್ತವೆ. ಇದಕ್ಕೂ ಕೆಲವರ ಆಕ್ಷೇಪಣೆ ಇದೆ. ಇಂತಹ ಕಾನೂನು ಸೃಜನಶೀಲತೆಯನ್ನೇ ಕೊಲೆ ಮಾಡುತ್ತೆ ಅಂತಾರೆ. ತುರ್ತುಪರಿಸ್ಥಿತಿಯನ್ನು ಹೇರುವ ಹುನ್ನಾರ ಇದು ಅಂತಾರೆ. ಹೀಗೆ ಏನೇನೋ ಹೇಳುತ್ತಾ ಇದ್ದಾರೆ.

ಇಂತಹ ವಾದವಿವಾದಗಳನ್ನು ಮಾಧ್ಯಮಗಳ ಮೂಲಕ ತಿಳಿದಾಗ ನನಗೆ ಒಂದು ಸಂಶಯ ಮೂಡಿತು. ಪೊಲೀಸರನ್ನು ಕೆಟ್ಟದಾಗಿ ತೋರಿಸುವ ಸಿನಿಮಾದವರಿಗೆ ಶಿಕ್ಷೆ ನೀಡಬೇಕು ಎಂಬುದನ್ನು ಒಂದು ವೇಳೆ ಒಪ್ಪಿದೆವು ಎಂದೇ ಭಾವಿಸೋಣ. ಸಿನಿಮಾದವರು ಎಂದರೆ ಬಹಳ ಮಂದಿ ಇರ್ತಾರೆ. ಅದರಲ್ಲಿ ಶಿಕ್ಷೆ ನೀಡುವುದು ಯಾರಿಗೆ? ನಟನಿಗೆ ಎಂದರೆ ಆ ನಟ

ಹಾನಿಕರ' ಎಂಬ ಬರಹ ತೋರಿಸಲಾಗುತ್ತದೆ. ಅದನ್ನು ನೋಡಿ ಪ್ರೇಕ್ಷಕರೆಲ್ಲ ಅವುಗಳನ್ನು ತ್ಯಜಿಸಿದ್ದಾರೆ ಅಂತಲ್ಲ. ಹಾಗೆ ನೋಡಿದರೆ ಮದ್ಯದ ಮಾರಾಟ ಹೆಚ್ಚಾಗುತ್ತಿದೆ. ಧೂಮಪಾನಿಗಳು ನಿಶ್ಚಿಂತೆಯಿಂದ ಹೊಗೆಯಾನಂದವನ್ನು ಅನುಭವಿಸುತ್ತಲೇ ಇದ್ದಾರೆ. ಇಂತಹ ಬರಹಗಳನ್ನು ಯಾವಾಗ ಪ್ರದರ್ಶಿಸುತ್ತಾರೆ ಹೇಳಿ. ಪರದೆಯ ಮೇಲೆ ಧೂಮಪಾನ, ಮದ್ಯಪಾನ ನಡೆಯುವಾಗ. ಹಾಗೇನೆ ಪರದೆಯ ಮೇಲೆ ಪೊಲೀಸರ ಕ್ರೌರ್ಯ ಪ್ರದರ್ಶನ ಆದಾಗಲೆಲ್ಲ 'ಪೊಲೀಸರಿಂದ ನಮ್ಮೆಲ್ಲರ ಜೀವನ ನೆಮ್ಮದಿ' ಎಂಬ ಬರಹ ತೋರಿಸಿದರಾಯಿತು! ಇದರಿಂದಾಗಿ ಸರ್ಕಾರಕ್ಕೆ ತಮ್ಮ ಕರ್ತವ್ಯ ಮಾಡಿದೆವು ಎಂಬ ತೃಪ್ತಿ. ಪೊಲೀಸರಿಗೂ ತಮ್ಮ ಚಟುವಟಿಕೆಗಳು ನಿರಾತಂಕವಾಗಿ ನಡೆಯುತ್ತಿವೆಯಲ್ಲ ಎಂಬ ನೆಮ್ಮದಿ. ಎಲ್ಲರಿಗೂ ಒಂದು ರೀತಿಯ ನಿರಾಳ ಅಲ್ಲವಾ.

ಅಲ್ಲ ಜನರ ನೆಮ್ಮದಿ ಬದುಕಿಗೆ ಪೊಲೀಸರೊಬ್ಬರೇ ಕಾರಣ ಅಲ್ಲ. ಇನ್ನೂ ಹಲವರು ಇದ್ದಾರೆ. 'ಸೋಷಿಯಲ್ ವರ್ಕ್'ಗೆಂದೇ ತಮ್ಮನ್ನು ಅರ್ಪಿಸಿಕೊಂಡ ಮಹಾನುಭಾವರು, ಮಹಾನ್‌ಭಾವೆಯರು ಇದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಹೆಮ್ಮರವಾಗಿ ಬೆಳೆದು ಜನಸೇವೆಯೇ ಜನಾರ್ದನ ಸೇವೆ ಎನ್ನುವವರಿದ್ದಾರೆ. ಅವರ ಈ 24x7 ಸೇವೆಯನ್ನು ಪ್ರಜೆಗಳು ಸರಿಯಾಗಿ ಗ್ರಹಿಸದಿರುವುದು ದುರಂತವೇ ಸರಿ. ಅವರ ಸೇವೆ ಮರೆಯುತ್ತಾರೆ. ಮೂಲ ಹುಡುಕುತ್ತಾರೆ. ಅಲ್ಪಾವಧಿ ಸೇವೆಯಲ್ಲಿ ಇಷ್ಟೊಂದು ಶ್ರೀಮಂತಿಕೆ ಬಂದಿದ್ದರ ಹಿನ್ನೆಲೆಯನ್ನು ಸಂಶಯಿಸುತ್ತಾರೆ. ಇದಕ್ಕೆ ಪೂರಕವೋ ಎಂಬಂತೆ ರಾಜಕಾರಣಿಗಳೇ ಎಲ್ಲ ಅನಿಷ್ಟಗಳಿಗೂ ಮೂಲ ಎಂಬಂತೆ ಸಿನಿಮಾಗಳಲ್ಲಿ ತೋರಿಸಲಾಗುತ್ತದೆ. ಇದರಿಂದಾಗಿ ಪ್ರಜೆಗಳ ದೃಷ್ಟಿಯಲ್ಲಿ ಅವರ ಗೌರವ ದಿನೇದಿನೇ ಪಾತಾಳಕೇರುವಂತಾಗಿದೆ. ಜನಸೇವಕರನ್ನೂ ಕೀಳಾಗಿ ಕಾಣಿಸಬಾರದು ಎಂದೇ ಸಿನಿಮಾ ಪರದೆಯ ಮೇಲೆ ರಾಜಕಾರಣಿಗಳು ಪ್ರತ್ಯಕ್ಷ ಆದಾಗಲೆಲ್ಲ 'ರಾಜಕಾರಣಿ ದೇಶದ ಹಿತಚಿಂತಕ' ಎಂಬ ಬರಹವೂ ಬರಬೇಕು. ಅವರ ಅತ್ಯಾಚಾರ, ಅನಾಚಾರಗಳ ದೃಶ್ಯ ತೆರೆಯ ಮೇಲೆ ಬರುತ್ತಿರುವಾಗಲೂ ಈ ವಾಕ್ಯಗಳು ಮೆರೆಯುತ್ತಿರಬೇಕು.


ಇಷ್ಟಕ್ಕೆ ಇದು ನಿಲ್ಲುವುದಿಲ್ಲ, ಸಾಮಾಜಿಕ ಬದುಕಿನ ನೆಮ್ಮದಿಗೆ ಇವರಿದ್ದರೆ ಸಾಕೆ? ಊಹುಂ. ಹಿಂದೆ ಕಾಯಿಲೆ ಮನುಷ್ಯನಿಗೆ ಬರದೆ ಮರಕ್ಕೆ ಬರುತ್ತದೆಯೆ ಎನ್ನುತ್ತಿದ್ದರು. ಈಗ ಮರಗಳಿಗೂ ರೋಗ ಬರುತ್ತಿದೆ. ಅಂತಹದ್ದರಲ್ಲಿ ಮನುಷ್ಯನನ್ನು ಅದು ಬಿಟ್ಟೀತೆ. ತರಾವರಿ ಕಾಯಿಲೆಗಳ ಮನುಷ್ಯನಿಗೂ ಬರುತ್ತವೆ. ಅವನ್ನು ಹೋಗಲಾಡಿಸಲು ವೈದ್ಯರು ಬೇಕು. ಅವರೂ ಶಾನೆ ಕಷ್ಟಪಟ್ಟು ವೈದ್ಯ ಪದವಿ ಪಡೆದು ಬಂದಿರುತ್ತಾರೆ. ವೈದ್ಯಕೀಯ ಸೇವೇನೂ ಮಾಡ್ತಾರೆ. ಆದರೆ ಕೆಲವರು ದಕ್ಷಿಣೆ ಪಡೆದ ಮೇಲೇ ಸೇವೆ ಮಾಡಬೇಕು ಅನ್ನುವ ಶಪಥ ಮಾಡಿರ್ತಾರೋ ಏನೋ. ಮಾಡಿದ ಶಪಥ ಮೀರಿ ನಡೆಯಬಾರದಲ್ಲ ಅಂತ ಅದನ್ನ ಈಡೇರಿಸುವುದಕ್ಕೆ ಬಲೇ ಶ್ರಮಬೀಳ್ತಾರೆ. ಹೀಗೆ ಶಪಥ ಪೂರೈಕೆಗೆ ಅವರ ಸತತ ಪ್ರಯತ್ನವೇ ರೋಗಿಗಳಿಗೆ ಕ್ರೂರ, ಅಮಾನವೀಯ ನಡವಳಿಕೆಯಂತೆ ತೋರುತ್ತೆ. ರೋಗಿಗಳ ಅನಿಸಿಕೆಯನ್ನೇ ಸಿನಿಮಾಗಳಲ್ಲಿ ಬಿಂಬಿಸುತ್ತಾರೆ. ಇಂತಹ ದೃಶ್ಯಗಳನ್ನು ಪರದೆಯ ಮೇಲೆ ತೋರಿಸುವಾಗಲೇ 'ವೈದ್ಯೋ ನಾರಾಯಣೋ ಹರಿಃ' ಎಂಬುದೂ ಪರದೆಯ ಮೇಲೆ ಬರಬೇಕು.

ಹೀಗೇ ನನ್ನ ಯೋಚನಾಲಹರಿ ಹರಿಯುತ್ತಿದ್ದಾಗ 'ಅಯ್ಯಾ ತಲೆತಿರುಕ, ಸಾಕು ಮಾಡು ನಿನ್ನ ಈ ಕಾರ್ಯಸಾಧುವಲ್ಲದ ಮಾತುಗಳನ್ನು. ನಿನ್ನ ದಾರಿಯಲ್ಲೇ ನಡೆದರೆ ವಿಜ್ಞಾನಿಗಳು, ಉಪಾಧ್ಯಾಯರುಗಳು ಹೀಗೆ ಪಟ್ಟಿ ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತದೆ. ಅವನ್ನೆಲ್ಲ ತೋರಿಸುತ್ತಾ ಹೋದರೆ ಪರದೆಯ ಮೇಲೆ 'ಚಿತ್ರವೇ ಇಲ್ಲ ಅಕ್ಷರಗಳೇ ಎಲ್ಲ ಆಗುತ್ತದೆಯಷ್ಟೆ. ಇದಕ್ಕೆ ನನ್ನದೊಂದು ಸೂತ್ರ ಇದೆ. ಅದನ್ನು ಬಳಸಿದರೆ ಸಾಕು' ಎಂದಿತು ಅಶರೀರವಾಣಿ.

'ಏನದು ಸೂತ್ರ' ಎಂದೆ ನಾನು.

'ಬಹಳ ಸಿಂಪಲ್ಲು, ಸರ್ಕಾರವೇ ಸಿನಿಮಾ ಕತೆ ಒದಗಿಸುವುದು!'


ಆಗಬಹುದಲ್ಲಾ....! ■



ಕಾವೇರಿ ಗಲಭೆಯಲ್ಲಿ ಬಿಜೆಪಿಗಳ ಪ…

ಕಾವೇರಿ ವಿಷಯದಲ್ಲಿ ಹಲವಾರು ವರ್ಷಗಳಿಂದ ನಾವು ಗಮನಿಸಿರುವ ಒಂದು ಮುಖ್ಯ ವಿಷಯವೇನೆಂದರೆ ಯಾವಾಗಲೂ ಹೀಗೆ ತಮಿಳುನಾಡು ಕ್ಯಾತೆ ತೆಗೆದು ಸುಪ್ರೀಂಕೋರ್ಟಿನಿಂದ ಅಥವಾ ಕಾವೇರಿ ಮೇಲುಸ್ತುವಾರಿ ಸಮಿತಿಯಿಂದ ಅನ್ಯಾಯವಾಗಿ ಕರ್ನಾಟಕದಲ್ಲಿ ಪ್ರತಿಭಟನೆ ಆದಾಗಲೆಲ್ಲಾ ಉತ್ತರ ಭಾರತ ಹಾಗೂ ಮುಂಬೈ ಮೂಲದ ಇಂಗ್ಲಿಷ್-ಹಿಂದಿ ಪತ್ರಿಕೆಗಳು ಹಾಗೂ ಹೊರರಾಜ್ಯದ ಸ್ಥಳೀಯ ಭಾಷಾ ಪತ್ರಿಕೆಗಳು ಕರ್ನಾಟಕವನ್ನೇ ಖಳನಾಯಕನಾಗಿ ತೋರಿಸಿ ತಮಿಳುನಾಡು ಸಂತ್ರಸ್ತ ರಾಜ್ಯ ಎಂಬಂತೆ ಚಿತ್ರಿಸಿ ತಮಿಳುನಾಡಿಗೆ ಹೊರ ರಾಜ್ಯದ ಜನರ ಹಾಗೂ ಎಲ್ಲಾ ಭಾಷೆಯ ಮಾಧ್ಯಮದ ಸಹಾನುಭೂತಿ ಸಿಗುವಂತೆ ತಮಿಳು ಮೂಲದ ಪತ್ರಕರ್ತರು ಮಾಡುತ್ತಾರೆ.

ಬ್ರಿಟಿಷರ ಕಾಲದಿಂದಲೂ - ಅಂದರೆ 1892



ರಿಂದಲೂ - ಕರ್ನಾಟಕಕ್ಕೆ ಹೇಗೆ ಘೋರ ಅನ್ಯಾಯವಾಗುತ್ತಾ ಬಂದಿದೆ ಎಂಬ ಬಗ್ಗೆ ಅಂಕಿಅಂಶಗಳುಳ್ಳ ಒಂದೇ ಒಂದು ವಸ್ತುನಿಷ್ಠ ಲೇಖನ ಕನ್ನಡಿಗ ಪತ್ರಕರ್ತರು ಹೊರ ರಾಜ್ಯದ ಇಂಗ್ಲಿಷ್ ಅಥವಾ ಹಿಂದಿ ಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ಮಾಡುವಲ್ಲಿ ಸಫಲರಾಗಿಲ್ಲ. ಬ್ರಿಟಿಷ್ ಕಾಲದಲ್ಲಿ ಹಾಗೂ ದೇಶದ ಸ್ವಾತಂತ್ರ್ಯದ ನಂತರವೂ ಕಾವೇರಿ ನ್ಯಾಯಾಧಿಕರಣದಿಂದ ಸತತವಾಗಿ ಕನ್ನಡಿಗರಿಗೆ ಆಗಿರುವ ಅನ್ಯಾಯ ಕರ್ನಾಟಕದ ಜನರಿಗೆಲ್ಲಾ ಗೊತ್ತಿದೆ ಬಿಡಿ. ಕಾರಣ ಇದರ ವಿವರ ಎಲ್ಲಾ ಕನ್ನಡ ಪತ್ರಿಕೆಗಳು ಅಥವಾ ಕರ್ನಾಟಕದ ಇಂಗ್ಲಿಷ್ ಪತ್ರಿಕೆಗಳು ಪ್ರಕಟಿಸುತ್ತಲೇ ಇವೆ. ಆದರೆ ಈಗಿನ ವಿಷಮ ಸನ್ನಿವೇಶದಲ್ಲಿ ಕರ್ನಾಟಕಕ್ಕೆ ಬ್ರಿಟಿಷರು ಮಾಡಿರುವ ಘೋರ ಅನ್ಯಾಯ ಮತ್ತೂ ಆ ಅನ್ಯಾಯವನ್ನೇ ತಮಿಳುನಾಡು ಹಾಗೂ ಕೇಂದ್ರ ಸರಕಾರ ಶಾಶ್ವತವಾಗಿಸಲು ಬಯಸುತ್ತಿವೆ ಎಂಬುದನ್ನೂ ಭಾರತದ ಎಲ್ಲಾ ಇತರ ರಾಜ್ಯದ ಜನರಿಗೆ ತಿಳಿಸಬೇಕಿರುವುದು ಅಗತ್ಯವಾಗಿದೆ. ಇಲ್ಲದಿದ್ದರೆ ಪ್ರತಿ ಸಾರಿಯೂ ಕರ್ನಾಟಕವನ್ನೇ ವಿಲನ್ ಆಗಿಸಿ ತಮಿಳುನಾಡಿಗೆ ಎಲ್ಲಾ ರಾಜ್ಯದವರ ಸಹಾನುಭೂತಿ ಹರಿಯುತ್ತಲೇ ಇರುತ್ತದೆ.

ಕರ್ನಾಟಕ ಸರಕಾರವು ನಮ್ಮ ವಕೀಲರಿಗೆ ಕೊಡುತ್ತಿರುವ ಕೋಟಿ ಕೋಟಿ ಫೀಸ್‌ನಲ್ಲಿ ಸ್ವಲ್ಪ ಉಳಿಸಿ ಅದನ್ನು ಕರ್ನಾಟಕದ ಪಿಆರ್‌ಒಗಳಿಗೆ ಕೊಟ್ಟು ಭಾರತದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ಘೋರ ಅನ್ಯಾಯದ ಬಗ್ಗೆ ಸ್ಪಷ್ಟ ಮಾಹಿತಿಯುಳ್ಳ ಲೇಖನ ಪ್ರಕಟವಾಗುವಂತೆ ವ್ಯವಸ್ಥೆ ಮಾಡಿದರೆ (ಬೇಕಾದರೆ ಅದಕ್ಕೆ ಪೇಡ್ ನ್ಯೂಸ್ ಅನ್ನಿ) ಅದರಿಂದ ಕನ್ನಡಿಗರಿಗೆ ಬಹಳಷ್ಟು ದೂರಗಾಮಿ ಪ್ರಯೋಜನ ಆಗುವುದು ಖಂಡಿತ. ನಾನೇ ನೋಡಿರುವಂತೆ ಮುಂಬೈಯಲ್ಲಿರುವ ಎರಡು ಕನ್ನಡ ದಿನಪತ್ರಿಕೆಗಳಾದ 'ಕರ್ನಾಟಕ ಮಲ್ಲ' ಹಾಗೂ 'ಉದಯವಾಣಿ' ಇವುಗಳೂ ಮುಂಬೈ ಕನ್ನಡಿಗರ ಮಾಹಿತಿಗಾದರೂ ಕರ್ನಾಟಕಕ್ಕೆ ಆಗಿರುವ ಅನ್ಯಾಯದ ಬಗ್ಗೆ ಪೂರ್ಣ ವಿವರ ನೀಡುವ ಲೇಖನ ಪ್ರಕಟಿಸುವುದೇ ಇಲ್ಲ. ಹಾಗಾಗಿ ಮುಂಬೈ ಕನ್ನಡಿಗರೂ ತಮ್ಮ ಕರ್ನಾಟಕದವರದ್ದೇ ತಪ್ಪು ಎನ್ನುವಂತೆ ಒಂದು ತರಹದ ಅಪರಾಧಿ ಭಾವನೆಯಿಂದ ಬಳಲುತ್ತಾರೆ.

ಮೊದಲೆಲ್ಲಾ ಮುಂಬೈಯಲ್ಲಿ ಅತ್ಯಧಿಕ ಪ್ರಸಾರವಿರುವ ಕನ್ನಡ ಪತ್ರಿಕೆಯಾದ 'ಕರ್ನಾಟಕ ಮಲ್ಲ' ಪ್ರಗತಿಪರರು ಹಾಗೂ ಕರ್ನಾಟಕದ ಅಭಿಮಾನಿಗಳು ಬರೆದ ಪತ್ರ ಅಥವಾ ಲೇಖನಗಳನ್ನು ಪ್ರಕಟಿಸುತ್ತಿತ್ತು. ಆದರೆ ಕೇಂದ್ರದಲ್ಲಿ ಮೋದಿ ಸರಕಾರ ಬಂದನಂತರವಂತೂ ಈ 'ಕರ್ನಾಟಕ ಮಲ್ಲ' ಪತ್ರಿಕೆ ಸಾಮಾನ್ಯ ಓದುಗರ ಪತ್ರಗಳನ್ನು ಪ್ರಕಟಿಸುವುದನ್ನು ನಿಲ್ಲಿಸಿದೆ ಹಾಗೂ ನಮ್ಮಂತಹ ಕನ್ನಡ ಪ್ರೇಮಿಗಳು ಅಥವಾ ಪ್ರಗತಿಪರರು ಬರೆದ ಪತ್ರ/ಲೇಖನಗಳನ್ನು ಕಸದಬುಟ್ಟಿಗೆ ಹಾಕುತ್ತಿದೆ. ಎಲ್ಲಾ ರಾಜ್ಯಗಳಲ್ಲೂ ಬಹಳಷ್ಟು ಪತ್ರಿಕೆಗಳು ಕೇಂದ್ರ ಸರಕಾರದ ಜಾಹೀರಾತುಗಳ ಸುರಿಮಳೆಯ ಆಸೆಗಾಗಿ ನಮೋ ಭಕ್ತರಾಗಿ ಬಿಟ್ಟಿವೆ.

ಕಾವೇರಿ ವಿಷಯದಲ್ಲಿ ಬೆಂಗಳೂರು, ಮಂಡ್ಯ, ಮೈಸೂರಿನಲ್ಲಿ ಗಲಾಟೆ ಆದಾಗಲೆಲ್ಲಾ ಜನರಲ್ಲಿ ಮೂಡುತ್ತಿದ್ದ ಒಂದು ಸಂಶಯವೇನೆಂದರೆ ಇಂತಹ ಭಾರಿ ಗಲಾಟೆ ಕೇವಲ ಕನ್ನಡ ಸಂಘಟನೆಗಳು ಅಥವಾ ರೈತ ಸಂಘಟನೆಗಳು ಮಾತ್ರ ಮಾಡಲು ಸಾಧ್ಯವೇ? ಅಥವಾ ಇದರ ಹಿಂದೆ ಇನ್ನಾವುದಾದರೂ ರಾಜಕೀಯ ಸಂಘಟನೆಗಳ ಕೈವಾಡವಿದೆಯೇ ಎಂಬುದಾಗಿ. ಆದರೆ ಈಗ ಬಂದಿರುವ ಮಾಹಿತಿಯಂತೆ ಈ ಎಲ್ಲಾ ಗಲಾಟೆಗಳ ಹಿಂದೆ ಅಮಿತ್ ಶಾನ ನಿರ್ದೇಶನದಂತೆ ನಡೆಯುವ ಎಬಿವಿಪಿ ಮತ್ತು ಬಜರಂಗಿ ಪಡೆಗಳು ಇವೆಯೆಂಬುದು. ಏನಾದರೂ ಮಾಡಿ ಸಿದ್ದರಾಮಯ್ಯನವರ ಸರಕಾರದ ಹೆಸರು ಹಾಳು ಮಾಡಬೇಕೆಂಬುದೇ ಈ ಸಂಘಿಗಳ ಕುತಂತ್ರ.

ಈಗಿನ ಮಟ್ಟಿಗೆ ಕಾಂಗ್ರೆಸ್ ಪಾರ್ಟಿಯಲ್ಲಿ ರಾಜ್ಯವಿಡೀ ಪ್ರಭಾವವಿರುವ ಹಾಗೂ ತನ್ನ ಪಕ್ಷಕ್ಕೆ ರಾಜ್ಯದೆಲ್ಲೆಡೆ ವೋಟು ತರಬಲ್ಲ ಏಕೈಕ ವ್ಯಕ್ತಿಯೆಂದರೆ ಸಿದ್ದರಾಮಯ್ಯನವರು ಮಾತ್ರ! ಕಾಂಗ್ರೆಸ್ಸಿನ ಉಳಿದ ನೇತಾರರೆಲ್ಲ ಚಿಲ್ಲರೆಗಳು ಹಾಗೂ ತಮ್ಮ ತಮ್ಮ ಕ್ಷೇತ್ರದ ಹೊರಗೆ ಸಿದ್ದು ಹೊರತು ಬೇರೆ ಯಾರಿಗೂ ಪ್ರಭಾವವಿಲ್ಲ ಎಂದು ಬಿಜೆಪಿಯವರಿಗೆ ಗೊತ್ತಿದೆ. ಅದಕ್ಕಾಗಿ ಏನೇನೋ ಕುಯುಕ್ತಿ ಮಾಡಿ ಕರ್ನಾಟಕದ ಸಿದ್ದು ಸರಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿ ಸಿದ್ದರಾಮಯ್ಯನವರ ವೈಯಕ್ತಿಕ ಹೆಸರು ಕೆಡಿಸುವ ಕುತಂತ್ರ ಸಂಘಿಗಳಿಂದ ನಡೆಯುತ್ತಲೇ ಇವೆ. ಸಾಮಾನ್ಯ ಕನ್ನಡಿಗರು ಅರಿತುಕೊಳ್ಳಬೇಕಾದುದೇನೆಂದರೆ - (ಕೇಸರಿ) ಕನ್ನಡಿಗರೇ ಕನ್ನಡಿಗರ ವೈರಿಗಳು ಎಂಬುದು.

ಕಾವೇರಿ ಗಲಾಟೆಯ ಕಳ್ಳ ನೆಪದಲ್ಲಿ ಕರ್ನಾಟಕದಲ್ಲಿ ಸಿದ್ದು ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಹೇರುವ ಹುನ್ನಾರು ಸಹ ಬಿಜೆಪಿಯ ಕೇಂದ್ರ ಸರಕಾರ ನಡೆಸಿದೆ ಎನ್ನುವ ಸಂಶಯವಿದೆ. ಅರುಣಾಚಲ ಪ್ರದೇಶದಲ್ಲಿ ಆಗಿದ್ದು ಕರ್ನಾಟಕದಲ್ಲಿ ಆಗುವುದಿಲ್ಲ ಎಂದು ಹೇಗೆ ಹೇಳುವುದು?


- ಹರೀಶ್ ಎಂ.ಆರ್, ಉಡುಪಿ

ಐದನೇ ಅವತಾರ ವಾಮನ, ಆರನೆ ಅವತಾರ ಪರಶುರಾಮ ಮತ್ತು ಕೇರಳ

ಕೇರಳದಲ್ಲಿ ಜನರು ಓಣಂ ಆಚರಿಸುವುದು ತಮ್ಮ ಪ್ರೀತಿಯ ಬಲಿ ಚಕ್ರವರ್ತಿ ತಮ್ಮನ್ನು ನೋಡಲು ವರ್ಷಕ್ಕೆ ಒಂದು ಸಾರಿ ಭೂಮಿಗೆ ಬರುತ್ತಾನೆ ಎಂಬುವ ಶುಭದಿನದ ಸಂಭ್ರಮಕ್ಕಾಗಿ. ಆದರೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಈ ಓಣಂ ಹಬ್ಬವನ್ನು ಕೌಪೀನಧಾರಿ ವಾಮನನ ಜನ್ಮದಿನವಾಗಿ ಆಚರಿಸಬೇಕು ಎಂದು ತನ್ನ ಸದಸ್ಯರಿಗೆಲ್ಲಾ ಹೇಳಿವೆ. ಬಿಜೆಪಿ ಅಧ್ಯಕ್ಷ ಅಮಿತ್ ಶಾ ಓಣಂ ದಿನದಂದು ಕೇರಳೀಯರಿಗೆ 'ವಾಮನ ಜನ್ಮದ ಶುಭಾಶಯ' ಸಹಾ ಕೊಟ್ಟಿದ್ದಾನೆ.

ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ಜನರ ನಂಬಿಕೆಗಳನ್ನೆಲ್ಲಾ ಬುಡಮೇಲು ಮಾಡುವ ಕಾರ್ಯಕ್ಕೆ ನೇರವಾಗಿ ಇಳಿದಿದೆ. ಬುಡಕಟ್ಟು ಜನಾಂಗದ ನೇತಾರರನ್ನೆಲ್ಲಾ ರಾಕ್ಷಸರು ಎಂದು ಬಿರುದು ಕೊಟ್ಟು ಅವರನ್ನು ದುಷ್ಟರೆಂದು ಬಿಂಬಿಸಿ ತಮ್ಮ ನೇತಾರರಿಗೆ ಮಾತ್ರ ವೈದಿಕರು ದೇವರ ಪಟ್ಟ ಕೊಟ್ಟಿರುವುದು ಎಲ್ಲರಿಗೂ ಗೊತ್ತಿದೆ. ಈಗ ಪ್ರಜಾಪ್ರೇಮಿ ಬಲೀಂದ್ರನ ಕತೆಯನ್ನೂ ತಿರುಚಿ ಜನರ ಹಬ್ಬದ ಮೂಲವನ್ನೇ ಬದಲಿಸಲು ಸಂಘಿಗಳು ಪ್ರಯತ್ನಿಸುತ್ತಿರುವುದು ಅತ್ಯಂತ ನೀಚ ಕಾರ್ಯವಾಗಿದೆ. ಬಲೀಂದ್ರ ಒಬ್ಬ ಅಸುರ, ಹಾಗಾಗಿ ಅವನನ್ನು ಪೂಜಿಸುವುದು ತಪ್ಪು ಎಂದು ಒಬ್ಬ ಸಂಘಿ ನೇತಾರ ಹೇಳುತ್ತಿದ್ದಾನೆ. ಆದರೆ ಕೃಷ್ಣ ಪುರಾಣದ ಪ್ರಕಾರ ಕಂಸ ಅಸುರ. ಅವನ ತಂಗಿ ದೇವಕಿ ಸಹ ಅಸುರಳು. ಹಾಗಿರುವಾಗ ಈ ಅಸುರ ದೇವಕಿಯ ಹೊಟ್ಟೆಯಲ್ಲಿ ಹುಟ್ಟಿದ ಕೃಷ್ಣ ಸಹ ಅಸುರ ಜಾತಿ ತಾನೇ. ಹಾಗಾದರೆ ಈ ಅಸುರ ಕೃಷ್ಣನನ್ನು ಹೇಗೆ ವೈದಿಕರು ಪೂಜಿಸುತ್ತಿದ್ದಾರೆ?

ವಾಮನ ವಿಷ್ಣುವಿನ ಐದನೆಯ ಅವತಾರ ಎಂದು ಮಾತ್ರ ಸಂಘಿಗಳಿಗೆ ಗೊತ್ತೇ ವಿನಹ ಅವನ ಜನ್ಮ ಯಾವ ತಿಥಿಯಂದು ಹೇಗೆ ಎಲ್ಲಿ ಆಯಿತು ಎಂದು ಸಂಘಿಗಳಿಗೇ ಗೊತ್ತಿಲ್ಲ. ವಾಮನನ ತಾಯಿ ತಂದೆ ಯಾರು ಎಂದು ಸಂಘಿಗಳು ಹೇಳಬಲ್ಲರೇ? ತಂದೆತಾಯಿ ಇಲ್ಲದಿದ್ದರೆ ಅವನ ಹುಟ್ಟಿದ ದಿನ ಹುಡುಕಿ ತೆಗೆದವರು ಯಾರು? ವಾಮನನ ಬಾಲ್ಯಲೀಲೆಗಳು ಯಾವವು, ಅವನಿಗೆ ಉಪನಯನ ಮಾಡಿದ್ದು ಯಾರು? ಉಪನಯನವಿಲ್ಲದೇ ಬೆಳೆದ ವಾಮನ ಬಲೀಂದ್ರನ ಆಸ್ಥಾನಕ್ಕೆ ಹೋಗಿ ದಾನ ಕೇಳಿದ್ದು ವೈದಿಕ ಧರ್ಮ ನೀತಿಗೆ ವಿರುದ್ಧವಲ್ಲವೇ? ತಂದೆತಾಯಿ ಇಲ್ಲದ ಆ ಮಗು ವಾಮನನಿಗೆ ಇಂತಹ ವಿಚಿತ್ರ ಹಗ್ಗೀಸ್ ಡೈಪರ್ ಉಡುವುದನ್ನು ಕಲಿಸಿದ್ದು ಯಾರು? ಅಥವಾ ಆಗಿನ ಕಾಲದಲ್ಲಿ ಎಲ್ಲಾ ಬ್ರಾಹ್ಮಣ ವಟುಗಳು ಹೀಗೆ ಬೇಬೀಸ್ ಡೈಪರ್ ಅಥವಾ ಸ್ಯಾನಿಟರಿ ನ್ಯಾಪ್ಕಿನ್ ಮಾತ್ರ ಕಟ್ಟಿಕೊಂಡು



ಎಲ್ಲೆಡೆ ಹೋಗುತ್ತಿದ್ದರೆ? ಆಗಿನ ಕಾಲದಲ್ಲೂ ಈಗಿನಂತೆ ಕೇವಲ ಕಾವಿ ಬಣ್ಣದ ಡೈಪರ್ ಮಾತ್ರ ಕಾಚಾಕ್ಕೆ ಬಳಸುತ್ತಿದ್ದರೆ? ಎಂಬುದನ್ನು ಯಾರು ಬಿಡಿಸಿ ಹೇಳಬಲ್ಲರು?

ವಿಷ್ಣುವಿನ ಐದನೇ ಅವತಾರವಾದ ವಾಮನ ಈಗಿನ ಕೇರಳದಲ್ಲಿದ್ದ ಬಲೀಂದ್ರನ ಆಸ್ಥಾನಕ್ಕೆ ಹೋಗಿದ್ದರೆ, ವಾಮನ ಅವತಾರದಲ್ಲಿಯೇ ಕೇರಳ ಪ್ರದೇಶ ಇತ್ತು ಎಂದು ಪುರಾಣಕರ್ತರೇ ಸಮರ್ಥಿಸಿದಂತಾಯಿತು. ಹಾಗಾದರೆ ನಂತರದ ಆರನೆಯ ಅವತಾರದಲ್ಲಿ ಪರಶುರಾಮ ಸೃಷ್ಟಿಸಿದ ಕೇರಳ ಯಾವುದು? ವಿಷ್ಣುಪುರಾಣದ ವಿದ್ವಾಂಸರೇ ಪರಶುರಾಮ ಸೃಷ್ಟಿಯ ಕಥೆ ಶುದ್ಧ ಸುಳ್ಳು ಹಾಗೂ ಸ್ಕಂದ ಪುರಾಣದಲ್ಲಿ ಇದರ ಯಾವುದೇ ಉಲ್ಲೇಖ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಿರುವಾಗ ನಮ್ಮ ತುಳುನಾಡಿನಲ್ಲಿ ಹರಡಿರುವ ಈ ಪರಶುರಾಮ ಸೃಷ್ಟಿಯ ಬಾಲಿಶ ಕತೆಯನ್ನೂ ಇಲ್ಲಿಯ ವೈದಿಕರು ಇನ್ನು ಮುಂದೆ ಪ್ರತಿಯೊಂದು ನಾಗಪೂಜೆಯಲ್ಲಿ ರಟಾಯಿಸುವು… ಭಾವಿಸೋಣವೇ? ಸಂಘಿಗಳು ಹಾಗೂ ಅ… ಈ ಬಗ್ಗೆ ಏನು ಹೇಳುತ್ತಾರೆ?

ನಮ್ಮ ಬುಡಕಟ್ಟು ಜನಾಂಗದವರನ್ನೆಲ್ಲಾ… ಅಧಿಕೃತವಾಗಿ ಆದಿವಾಸಿಗಳೆಂದು ಸ… ವರ್ಗೀಕರಿಸುತ್ತಿತ್ತು, ಆದರೆ ಬಿಜೆಪಿ ಕೇಂದ್ರದಲ್ಲಿ… ಬಂದಮೇಲೆ ಆದಿವಾಸಿ ಎನ್ನುವ ಶಬ್ದಕ್ಕೆ… "ವನವಾಸಿ" ಎನ್ನುವ ಶಬ್ದ ಬಳಸಲಾಗುತ್ತದೆ. ಇದ… ಸಂಘಿ ಮಾನಸಿಕತೆ ಏನು ಗೊತ್ತೇ? ಆದಿವಾಸಿಗ… ಪದ ಈ ಬುಡಕಟ್ಟು ಜನಾಂಗದವರೇ… ಮೂಲನಿವಾಸಿಗಳು ಹಾಗೂ ಉಳಿದ… ಹೊರಗಿನಿಂದ ಬಂದವರು ಎಂದು ಆಯ… ಭೇದವನ್ನು ಅಧಿಕೃತವಾಗಿ ಒಪ್ಪಿಕೊಂಡಂತಾಗು… ಆರ್ಯ ಮಾನಸಿಕತೆಯ ಮೇಲ್ಜಾತಿಯವರಲ್ಲಿ… ಪರಕೀಯ ಭಾವನೆ ಹುಟ್ಟಿಸುತ್ತಿತ್ತು. ಅದಕ್ಕಾಗಿ… ಶಬ್ದದ ಬದಲು ಈಗ ಸಂಘಿ ಸರಕಾರ ವನವಾ… ಪದ ಸರಕಾರಿ ದಾಖಲೆಗಳಲ್ಲೂ ಬಳಸಲು ಶುರು… ಎಷ್ಟೇ ಆಗಲಿ ಬುಡಕಟ್ಟು ಜನಾಂಗದವರನ್ನು… ಎಂದು ಅಪವಾದ ಹೊರಿಸಿ ಅವರನ್ನು ಅರ… ಅವರ ಆಸ್ತಿ ಸಂಪತ್ತು ಹಾಗೂ ಸುಂದರ ಹ… ಈ ಹೊರದೇಶದಿಂದ ಬಂದ ವೈದಿಕರು ಕ… ಅಡಿಗಡಿಗೆ ನೆನೆಪಿಸುವ ಈ ಆದಿವಾಸಿ ಎ… ಸಂಘಿಗಳ ಆತ್ಮಸಾಕ್ಷಿಯನ್ನು ಚುಚ್ಚುತ್ತಿರುತ್ತದೆ… ಸಂಘಿ ಸರಕಾರದಿಂದ ಈ ಶಬ್ದಗಳ ತಿರುಚುವಿಕೆಯ…

ವಿಷ್ಣುವಿನ ಕೆಲವು ಅವತಾರಗಳಿಗೆ ತಂದೆ-ತ… ಇಲ್ಲ, ಆದರೂ ಪಂಚಾಂಗದಲ್ಲಿ ಅವುಗಳ… ಉಲ್ಲೇಖಿಸಲಾಗುತ್ತದೆ. ಮತ್ಸ್ಯಾವತಾರ, ಕೂಮ… ವರಹಾವತಾರ, ನರಸಿಂಹಾವತಾರ, ಮೋಹಿನಿ… ಇವೆಲ್ಲಾ ದಿಢೀರ್ ಅವತಾರಗಳು. ಇವಕ್ಕೆ ತಂದೆತಾ… ಹುಟ್ಟಿದ ದಿನ ನಕ್ಷತ್ರಗಳಿಲ್ಲ, ಕೇವಲ ರಾಕ್ಷಸರನ್ನು… ದಿಢೀರ್ ಅವತಾರ ತಳೆದು ನಂತರ ಮಾ… ಅವತಾರಗಳಿವು. ಆದರೂ ವೈದಿಕ ರಸಿಕತೆಯ ಪ… ಈ ಎಲ್ಲಾ ದಿಢೀರ್ ಅವತಾರಗಳಿಗೆ ಒಂದಾದರೂ… ಹೆಂಡತಿ ಇರುವಂತೆ ನೋಡಿಕೊಳ್ಳಲಾಯಿತು. ಇ… ಸೈಜ್ ರಾಮ, ಕೃಷ್ಣ ಪರಶುರಾಮ ಅವತಾರಗಳು… ತಿಂಗಳು ತಾಯಿಯ ಹೊಟ್ಟೆಯಲ್ಲಿದ್ದು ಹುಟ… ಮೆಲ್ಲಗೆ ಮನುಷ್ಯರಂತೆ ಬೆಳೆದು ಮದುವೆಯಾಗಿ… ನಂತರ ದುಷ್ಟ ಅಸುರರನ್ನು ಕೊಲ್ಲಲು ಹೋ… ಕೃಷ್ಣನಂತೂ ತೊಂಬತ್ತು ವರ್ಷದ ಮುದುಕನಾ… ದುಷ್ಟರನ್ನು ಶಿಕ್ಷಿಸಲು ಕುರುಕ್ಷೇತ್ರ ಯುದ್ಧ… ಹಾಗಾದರೆ ಈ ಅವತಾರಗಳಲ್ಲಿ ಕೆಲವು ದುಷ್ಟ… ಹೋಮಹವನದಲ್ಲಿ ನಿರತರಾಗಿದ್ದ ಋಷಿ-ಮು… ಹಿಂಸಿಸಲು ಹಾಗೂ ಪತಿವ್ರತಾ ಮಹಿಳೆಯರನ್ನು… ಮಜಾ ಮಾಡಲು ಅಷ್ಟೊಂದು ದೀರ್ಘ ಕಾ… ಯಾಕೆ ಕೊಡಲಾಯಿತು? ಅಂದರೆ ದುಷ್ಟರಿ… ಶಿಕ್ಷೆ ಮತ್ತು ಶಿಷ್ಟರಿಗೆ ತಕ್ಷಣ ನ್ಯಾಯ ಕೊಡುವ… ನಿಯಮಕ್ಕೆ ತೊಂಬತ್ತು ವರ್ಷ ಲೆಕ್ಕವಿಲ್ಲವೇ? … ನಮ್ಮ ಈಗಿನ ಆಮೆ ಗತಿಯ ಕೋರ್ಟು… ದೇವರ ನ್ಯಾಯದಾನದ ವಿಧಾನಕ್ಕೂ ಭೇ… ಉಳಿಯಿತು ಅಲ್ಲವೇ!

- ಜೆ. ರವಿಕಿರಣ, ಮ…

ಶೂದ್ರ ಕಪ್ಪೆಗಳು ಮತ್ತು ಮೇ… ಹಾವುಗಳು

ಕರ್ನಾಟಕದ ಹೈಕೋರ್ಟ್ ನ್ಯಾಯಾಧೀಶರ… ಮೀಡಿಯಂ ಮಾತ್ರ ಬೇಕು ಎನ್ನುವವರು ಬಾವಿ… ಕಪ್ಪೆಯ ಮನಸ್ಥಿತಿಯವರು" ಎಂದಿರುವುದು … ಬೇರೆ ಭಾಷಾ ಮಾಧ್ಯಮದಲ್ಲಿ ಮಕ್ಕಳು ಕಲಿಯು… ಮಾತೃಭಾಷಾ ಮಾಧ್ಯಮದಲ್ಲಿ ಕಲಿಯುವುದು… ಪರಿಣಾಮಕಾರಿ ಎಂಬುದಕ್ಕೆ ಗಟ್ಟಿ… ಮನೋವೈಜ್ಞಾನಿಕ ಕಾರಣಗಳಿವೆ ಎಂದು ಜಗತ್ತಿನ… ಶಿಕ್ಷಣ ತಜ್ಞರೇ ಹೇಳುತ್ತಿರುವಾಗ, ಶಿಕ್ಷಣ ತ… ನ್ಯಾಯಾಧೀಶರೊಬ್ಬರು ಮಾತೃಭಾಷಾ ಶಿಕ್ಷಣದ… ತನ್ನ ಅಭಿಪ್ರಾಯ ಸಾರ್ವಜನಿಕವಾಗಿ ಮಂಡಿಸಿರುವ… ಒಂದು ಪ್ರಕರಣದಲ್ಲಿ ಒಂದು ಶಾಲೆಯ ಆಡಳಿತ… ಕನ್ನಡ ಮಾಧ್ಯಮದ ಅನುಮತಿಯೊಂದಿಗೆ ಶಾಲೆ ಪ… ನಂತರ ಅವರು ಶಿಕ್ಷಣ ಇಲಾಖೆಯ ಅನುಮತಿ… ಇಂಗ್ಲಿಷ್ ಮಾಧ್ಯಮಕ್ಕೆ ಅನಧಿಕೃತವಾಗಿ ಬದಲಾಯಿ…

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು… ಪ್ರತಿಕ್ರಿಯೆಗಳನ್ನು 9980331427 ನಂಬ… ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸ…

ರ್ಥಿಸಿ ಈ ನ್ಯಾಯಾಧೀಶರು ತೀರ್ಪು ಕೊಟ್ಟದ್ದು ಾತಕಾರಿಯಾಗಿದೆ.

ನಮ್ಮ ಕರಾವಳಿಯಲ್ಲೂ ಕನ್ನಡ ಮೀಡಿಯಂ ಬಗ್ಗೆ ವು ಪೂರ್ವಾಗ್ರಹಗಳು ಸಕಾರಣವಾಗಿ ಹುಟ್ಟಿಕೊಂಡಿವೆ. ದೂತ್ವ ಎಂಬ ಬಾವಿಯೊಳಗೆ ಇರುವ ಕಪ್ಪೆಗಳೆಲ್ಲಾ ತ ಮೀಡಿಯಮ್ ಎನ್ನುವ ಭಾವನೆ ಸಾರ್ವತ್ರಿಕವಾಗಿದೆ. ರಂಗದಳ, ರಾಮಸೇನೆ, ಗೋರಕ್ಷಕದಳ ಮುಂತಾದ ಂಡಾಪಡೆಗಳಲ್ಲಿ ಇರುವ ಕಾಲಾಳುಗಳೆಲ್ಲಾ ಕನ್ನಡ ಡಿಯಮ್ಮಿನವರು. ದೇವರ ಹೆಸರಿನ ಸಮಾರಂಭಗಳ ದಲ್ಲಿ ದಂಡಿಯಾಗಿ ಹಫ್ತಾ ವಸೂಲಿಯಲ್ಲಿ ಡಗುವವರೂ ಕನ್ನಡ ಮೀಡಿಯಂನವರು, ಅನೈತಿಕ ಲೀಸ್‌ಗಿರಿ ಮಾಡಿ ಇಂಗ್ಲಿಷ್ ಮೀಡಿಯಂ ಹುಡುಗ ಡುಗಿಯರಿಗೆ ಹೊಡೆಯುವವರೆಲ್ಲಾ ಕನ್ನಡ ಡಿಯಂನವರು, ಹಳ್ಳಿ ಹಳ್ಳಿಗಳಲ್ಲಿ ಗಾಂಜಾ ಮಾರಾಟ ಡುವವರೂ ಕನ್ನಡ ಮೀಡಿಯಂನವರು. ಇವರಿಗೆಲ್ಲಾ ಗ್ಲಿಷ್ ಮಾತನಾಡಲು ಬರುವುದಿಲ್ಲ ಹಾಗಾಗಿ ಅವರಲ್ಲಿ ನೆಮಾಡಿರುವ ಒಂದು ರೀತಿಯ ಇಂಫಿರಿಯಾರಿಟಿ ಂಪ್ಲೆಕ್ಸ್‌ನಿಂದಾಗಿ ಅವರು ಧರ್ಮದ ವಿಷಯದಲ್ಲಿ ಹಿಂಸಾತ್ಮಕವಾಗಿ ವರ್ತಿಸುತ್ತಾರೆ ಎನ್ನುವ ಭಾವನೆ ಎಲ್ಲೆಡೆ ಯಾಗಿದೆ. ಕಾರಣ ಇಂಗ್ಲಿಷ್ ಮೀಡಿಯಂ ಹುಡುಗರು ಮುಗಿಸಿ ಮುಂಬೈ-ಬೆಂಗಳೂರು- ಅಮೆರಿಕ ಅಥವಾ ಲ್ಲಿ ದೇಶಗಳಿಗೆ ಹೋಗಿ ತಮ್ಮ ಭವಿಷ್ಯ ರೂಪಿಸಿಕೊಂಡರೆ, ಡ ಮೀಡಿಯಂನವರಿಗೆ ಸರಿಯಾದ ಕೆಲಸ ಸಿಗದೇ ರುದ್ಯೋಗಿ ಆಗಿದ್ದುಕೊಂಡು ಕೊನೆಗೆ ಹಿಂದೂತ್ವವಾದಿ ಘಟನೆ ಅಥವಾ ರಾಜಕೀಯ ಪಕ್ಷಗಳು ತೋಡಿದ ಳಚೆ ಗುಂಡಿಗೆ ಬಿದ್ದು ತಮ್ಮ ಭವಿಷ್ಯ ಹಾಳು ಾಡಿಕೊಳ್ಳುತ್ತಿದ್ದಾರೆ ಹಾಗೂ ಗಾಂಜಾ ವ್ಯಸನಿಗಳಾಗುತ್ತಿದ್ದಾರೆ ನ್ನುವ ಆರೋಪ ಸಾರ್ವತ್ರಿಕವಾಗಿದೆ.

ವಿಪರ್ಯಾಸವೆಂದರೆ ಹಿಂದೂತ್ವ ಸಂಘಟನೆಗಳ ಮೇಲ್ಜಾತಿ ನೇತಾರರೆಲ್ಲ ತಮ್ಮ ಮಕ್ಕಳನ್ನು ಇಂಗ್ಲಿಷ್ ಮೀಡಿಯಂ ಶಾಲೆಗೆ - ಅದೂ ಕ್ರೈಸ್ತರ ಕಾನ್ವೆಂಟುಗಳಿಗೆ ಕಳುಹಿಸಿ ಅವರನ್ನು ಡಾಕ್ಟರ್, ಇಂಜಿನಿಯರ್, ಸಿಎ ಮಾಡಿ ದೊಡ್ಡ ನಗರಗಳಿಗೆ ಅಥವಾ ವಿದೇಶಕ್ಕೆ ಕಳುಹಿಸಿ ಸುರಕ್ಷಿತವಾದ ಭವಿಷ್ಯ ರೂಪಿಸುತ್ತಾರೆ. ಆದರೆ ಕೇವಲ ಕನ್ನಡ ಮೀಡಿಯಂನ ಶೂದ್ರ ಕಾಲಾಳುಗಳು ಮಾತ್ರ ಈ ಮೇಲ್ಜಾತಿಯವರು ತೋಡಿದ ಹಿಂದೂತ್ವ ಗುಂಡಿಗೆ ಬಿದ್ದು ಬೇರೆ ಧರ್ಮದವರನ್ನು ದ್ವೇಷಿಸುತ್ತಾ ಜೀವನ ಹಾಳು ಮಾಡಿಕೊಳ್ಳುತ್ತಾರೆ. ಬಾವಿಯ ನಿಜ ಕಪ್ಪೆಗಳು ಯಾರಿಗೂ ಹಾನಿ ಮಾಡುವುದಿಲ್ಲ ಆದರೆ ಈ ನಮ್ಮ ಕರಾವಳಿಯ ಶೂದ್ರ ಕಪ್ಪೆಗಳು ಮಾತ್ರ ಮೇಲ್ಜಾತಿ ಹಾವಿನೊಂದಿಗೆ ಸ್ನೇಹ ಬೆಳೆಸಿ ತಮ್ಮ ಭವಿಷ್ಯ ತಾವೇ ಹಾಳು ಮಾಡಿಕೊಳ್ಳುತ್ತಿವೆ, ಜತೆಗೆ ಗೋರಕ್ಷಣೆಯ ಮತ್ತು ಧರ್ಮ ರಕ್ಷಣೆಯ ನೆಪದಲ್ಲಿ ಸಮಾಜಕ್ಕೂ ಕಂಟಕ ಆಗುತ್ತಿವೆ ಎನ್ನುವುದು ಮಾತ್ರ ಸತ್ಯ.

- ಗಂಗಾಧರ ಪೂಜಾರಿ, ಪುತ್ತೂರು

ಈ ವಾರ ನಿಮ್ಮ ಪತ್ರಿಕೆಯಲ್ಲಿ ಪ್ರಕಟಗೊಂಡ ಂಡಹಾಗೆ' ಅಂಕಣ ಕುರಿತು ನಮ್ಮ ಅಭಿಪ್ರಾಯ: ಕಾವೇರಿ ನೀರಿನ ವಿಷಯ ಹಾಗು ಕನ್ನಡ ಭಾಷೆ-ಕನ್ನಡ ನೆಲ ಇವುಗಳ ಹೆಸರಿನಲ್ಲಿ ಕುತಂತ್ರ ಮಾಡಿ, ದೊಂಬಿ-ಗಲಭೆಗಳನ್ನು ಉಂಟುಮಾಡುವ ನಮ್ಮ ಕುತಂತ್ರಿ ರಾಜಕಾರಣಿಗಳೂ ಹಾಗು ನಾಡಿನ ರಕ್ಷಣೆಯ ಹೆಸರಿನಲ್ಲಿ ಅಶಾಂತಿಯನ್ನು ಉಂಟುಮಾಡುವ ನಮ್ಮ ಕರುನಾಡಿನ ನಾಯಕರ ಬಗ್ಗೆ ತುಂಬಾ ಸರಿಯಾಗಿ ಬರೆದಿದ್ದೀರ. ಇವರ ಮಾತುಗಳನ್ನು ಕೇಳಿ ದೊಂಬಿ ಗಲಭೆಗಳನ್ನು ಮಾಡಿಕೊಂಡು ಕೊನೆಗೆ ಜೈಲು ಸೇರುವವರು ಕೇವಲ ಅಮಾಯಕರು ಮಾತ್ರ. ಇಂತಹ ಅಮಾಯಕ ಯುವಜನತೆಗೆ ನಿಮ್ಮ ಈ ಲೇಖನ ಅತ್ಯಂತ ಉತ್ತಮವಾದ ಪಾಠ ಎಂದು ತಿಳಿದಿದ್ದೇವೆ. ಇದನ್ನು ತಿಳಿದುಕೊಂಡು ಇನ್ನು ಮುಂದಾದರೂ ನಮ್ಮ ಜನತೆ ಒಳ್ಳೆಯ ಪಾಠವನ್ನು ಕಲಿಯಬಹುದು.

ಹಾಗು ಕೇವಲ ತಮ್ಮ 'ಟಿಆರ್‌ಪಿ' ರೇಟಿಂಗ್‌ಗಾಗಿ ಕ್ಷುಲ್ಲಕ ವಿಷಯವನ್ನೂ ಬೆಟ್ಟದಷ್ಟು ಮಾಡಿ ಅಮಾಯಕ ಜನಗಳನ್ನು ರೊಚ್ಚಿಗೆಬ್ಬಿಸುವ ನಮ್ಮ ಮನಾಹ್ ಟಿವಿ ಚಾನೆಲ್‌ಗಳಿಗೆ ನಮ್ಮ ಧಿಕ್ಕಾರ!

ಇಂತಹ ಒಂದು ಅದ್ಭುತವಾದ ಲೇಖನವನ್ನು ಬರೆದಿರುವ ನಿಮಗೆ ನಮ್ಮ ಪ್ರೀತಿಯ ವಂದನೆಗಳು.

- ಆರ್ಯ ತೇಜಸ್ ಮತ್ತು ಗೆಳೆಯರು,
ವಿಜಯನಗರ, ಬೆಂಗಳೂರು

ಈ ಬಾರಿಯ ಗೌರಿ ಲಂಕೇಶ್ ವಿಭಿನ್ನ ಡಿಸೈನ್‌ನಲ್ಲಿ ಉತ್ತಮವಾಗಿ ಮೂಡಿ ಬಂದಿದೆ. ಅಂಗವಿಕಲರೊಬ್ಬರ ಮೇಲೆ ಮಸ್ಕಿ ಶಾಸಕ ಪ್ರತಾಪಗೌಡ ಪಾಟೀಲ್‌ನ ಪಿಎ ಮತ್ತು ಆತನ ಹಿಂಬಾಲಕರು ನಡೆಸಿದ ದೌರ್ಜನ್ಯ ಘಟನೆಯನ್ನು ಖಂಡಿಸುವ ಮೂಲಕ ಪತ್ರಿಕೆ ಸಾಮಾನ್ಯರ ಪರ ಎನ್ನುವುದನ್ನು ಸಾಬೀತುಪಡಿಸಿದೆ. ಗಟ್ಟಿ ಧೈರ್ಯದಿಂದ ವರದಿ ಮಾಡಿರುವ ವರದಿಗಾರರಿಗೆ ಹಾಗೂ ಪತ್ರಿಕೆಗೆ ಧನ್ಯವಾದಗಳು.

– ಇಮಾಮ್ ಬಸವರಾಜ, ಸಿಂಧನೂರು

ಅನುಭವದೊಳಗೆ ಅಮೃತ ಕಂಡೆ: ಮಯೂರಿ


ಕಿರುತೆರೆಯಲ್ಲಿ ಫೇಮಸ್ ಆದ ಈ ಪ್ರತಿಭೆ ಸಡನ್ನಾಗಿ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟು ಅಚ್ಚರಿ ಮೂಡಿಸಿದೆ. ಹಲವು ಕೊರತೆಗಳ ನಡುವೆಯೂ ತಮ್ಮ ಬದುಕನ್ನು ಸಿನಿಮಾರಂಗದಲ್ಲಿ ಕಟ್ಟಿಕೊಳ್ಳುತ್ತಿದ್ದಾರೆ 'ಅಶ್ವಿನಿ ನಕ್ಷತ್ರ' ಖ್ಯಾತಿಯ ಮಯೂರಿ.



'ಅಶ್ವಿನಿ ನಕ್ಷತ್ರ' ಧಾರಾವಾಹಿ ಮೂಲಕ ಬಣ್ಣದ ಜಗತ್ತಿಗೆ ಕಾಲಿಟ್ಟವರು ನಟಿ ಮಯೂರಿ. ಕಿರುತೆರೆಯ ಲೋಕದಲ್ಲಿ ಮಿಂಚುತ್ತಿದ್ದಂತೆಯೇ ಸಹಜವಾಗಿ ಸ್ಯಾಂಡಲ್‌ವುಡ್ ಕಣ್ಣಿಗೆ ಬಿದ್ದವರು. 'ಕೃಷ್ಣಲೀಲಾ' ಚಿತ್ರದಿಂದ ಸಿನಿಮಾ ರಂಗಕ್ಕೂ ಪರಿಚಯ ಆದರು. 'ಕೃಷ್ಣಲೀಲಾ' ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಗೆಲುವು ಸಾಧಿಸಿತು. ಹೀಗಾಗಿ ಸಿನಿಮಾ ರಂಗದಲ್ಲೂ ಬಿಜಿಯಾದರು. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಇಷ್ಟಕಾಮ್ಯ'ದಲ್ಲೂ ವಿಭಿನ್ನ ಪಾತ್ರ ನಿರ್ವಹಿಸಿದರು. ಅಲ್ಲಿಂದ ತೆಲುಗಿಗೂ ಹಾರಿದರು. ಇನ್ನಷ್ಟೇ ಅವರ ತೆಲುಗಿನ ಹಾರರ್ ಚಿತ್ರ ರಿಲೀಸ್ ಆಗಬೇಕಿದೆ. ಈ ಮಧ್ಯೆ ಪವನ್ ಒಡೆಯರ್ ಅವರ 'ನಟರಾಜ ಸರ್ವೀಸ್' ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಅಲ್ಲದೇ 'ಕರಿಯಾ-2' ಸಿನಿಮಾಗೂ ಇವರೇ ನಾಯಕಿ. ಸದ್ಯ 'ನಟರಾಜ್' ತೆರೆಗೆ ಬರಲು ರೆಡಿಯಾಗಿದ್ದಾನೆ. ಈ ನೆಪದಲ್ಲಿ ಮಯೂರಿ ತಮ್ಮ ಸಿನಿಮಾ ಜರ್ನಿಯನ್ನು ನೆನಪಿಸಿಕೊಂಡಿದ್ದಾರೆ.

** ನೀವು ಓದಿದ್ದೇ ಬೇರೆ. ಬದುಕು ಕಟ್ಟಿಕೊಳ್ಳಲು ಆಯ್ಕೆ ಮಾಡಿಕೊಂಡಿದ್ದು ನಟನಾ ಜಗತ್ತನ್ನು. ಯಾಕೆ ಈ ಕಡೆ ಮನಸ್ಸು ಮಾಡಿದ್ದು?*

ನಾನು ನಟಿಯಾಗುತ್ತೇನೆ ಅಂತ ಕನಸಲ್ಲೂ ಕಂಡವಳಲ್ಲ. ಧಾರಾವಾಹಿಗೆ ಆಯ್ಕೆಯಾಗಿದ್ದು ಕೂಡ ಆಕಸ್ಮಿಕ. ಮೊದಲ ಸೀರಿಯಲ್‌ನಲ್ಲೇ ನನಗೆ ಅಪರೂಪದ ಪಾತ್ರ ಸಿಕ್ಕಿತ್ತು. ಆ ಪಾತ್ರ ಸಾಕಷ್ಟು ಫೇಮಸ್ ಕೂಡ ಆಯಿತು. ನನ್ನ ಅಳು ಅವರಿಗೆ ಇಷ್ಟವಾಯಿತು. ಸಹನೆಯನ್ನು ಕಂಡು ಪ್ರೇಕ್ಷಕರೇ ಮರುಗಿದರು. ಈಗಲೂ ಎಷ್ಟೋ ಜನಕ್ಕೆ ನನ್ನ ನಿಜ ಹೆಸರೇ ಗೊತ್ತಿಲ್ಲ. ಅಶ್ವಿನಿ ಅಂತಾನೇ ಕರೆಯುತ್ತಾರೆ. ಆ ಧಾರಾವಾಹಿಯೇ ನನ್ನ ಬದುಕಿಗೆ ಚೆನ್ನೆಲುಬಾಯಿತು.



** ಸಖತ್ ಮಾಡ್ ಆಗಿರುವ ನೀವು, ಮೊದಲ ಧಾರಾವಾಹಿಯಲ್ಲೇ ಅಳುಮುಂಜಿ ಪಾತ್ರ ಒಪ್ಪಿಕೊಂಡಿದ್ದು ಯಾಕೆ?*

ಅದು ಅಳುಮುಂಜಿ ರೀತಿಯ ಪಾತ್ರವಲ್ಲ. ಸಂದರ್ಭ ಬಂದಾಗ ಅವಳು ಗಂಡನ ವಿರುದ್ಧ ಸಿಡಿದೆದ್ದಿದ್ದಾಳೆ. ಆದರೆ, ಅವಳ ಪ್ರತಿಭಟನೆಯ ರೀತಿಯೇ ವಿಭಿನ್ನವಾಗಿತ್ತು. ರೆಗ್ಯುಲರ್ ರೀತಿಯ ಪಾತ್ರ ಅದಾಗಿರಲಿಲ್ಲ. ಹೀಗಾಗಿ ಒಪ್ಪಿಕೊಂಡೆ.

** ಹಾಗಾದರೆ, ಸಿನಿಮಾರಂಗಕ್ಕೆ ಬಂದಿದ್ದು ಕೂಡ ಆಕಸ್ಮಿಕನಾ?*

'ಅಶ್ವಿನಿ ನಕ್ಷತ್ರ' ಸೀರಿಯಲ್ ನೋಡಿದ್ದ ಶಶಾಂಕ್ ಅವರು 'ಕೃಷ್ಣಲೀಲಾ' ಸಿನಿಮಾದಲ್ಲಿ ನಟಿಸಲು ಕೇಳಿದರು. ನನಗೂ ಆಗ ಸಿನಿಮಾದಲ್ಲಿ ನಟಿಸುವ ಆಸೆ ಆಗಿತ್ತು. ಅವರು ಕರೆದದ್ದಕ್ಕೂ ನನ್ನಲ್ಲೂ ಆಸೆ ಮೂಡಿದ್ದಕ್ಕೂ ಸರಿಹೋಗಿತ್ತು. ಹೀಗಾಗಿ ಸಿನಿಮಾರಂಗಕ್ಕೆ ಹೋದೆ. ಅಲ್ಲಿ ಮತ್ತೊಂದು ಹೊಸ ರೀತಿಯ ಪಾತ್ರ. ಸಿನಿಮಾ ಕೂಡ ಹಿಟ್ ಆಯಿತು. ಹೀಗಾಗಿ ಮತ್ತಷ್ಟು ಅವಕಾಶಗಳು ಕೂಡಿ ಬಂದವು.

** 'ಕೃಷ್ಣಲೀಲಾ' ಹಿಟ್ ಆಗುತ್ತಿದ್ದಂತೆಯೇ ತೆಲುಗಿನತ್ತ ಮುಖ ಮಾಡಿದಿರಿ. ಆ ಆಫರ್ ಸಿಕ್ಕಿದ್ದು ಹೇಗೆ?*

'ಕೃಷ್ಣಲೀಲಾ'ದಿಂದಾಗಿಯೇ ತೆಲುಗಿನಲ್ಲಿ ನಟಿಸಲು ಅವಕಾಶ ಸಿಕ್ಕಿದ್ದು. ಅದು ಹಾರರ್ ಮೂವಿ. ಮಹಿಳಾ ಪ್ರಧಾನ ಸಿನಿಮಾ ಕೂಡ ಅದು. ಶೋಷಿತ ಮಹಿಳೆಯ ಪಾತ್ರವನ್ನು ನಾನಲ್ಲಿ ಮಾಡಿದ್ದೇನೆ. ಈ ಚಿಕ್ಕ ವಯಸ್ಸಿನಲ್ಲಿ ನನಗೆ ಅಂಥದ್ದೊಂದು ಪಾತ್ರ ಸಿಕ್ಕಿದ್ದಕ್ಕೆ ಹೆಮ್ಮೆಪಡುತ್ತೇನೆ.

** ಸದ್ಯ 'ನಟರಾಜ ಸರ್ವೀಸ್‌ನಲ್ಲಿ' ನಟಿಸಿದ್ದೀರಿ. ಅದರಲ್ಲಿ ಎಂತಹ ಪಾತ್ರವನ್ನು ಪೋಷಿಸಿದ್ದೀರಿ?*

'ಅಶ್ವಿನಿ ನಕ್ಷತ್ರ'ದಂತೆಯೇ ಇಲ್ಲಿಯೂ ನಾನು ಸೈಲೆಂಟ್ ಆಗಿರುವ ಹುಡುಗಿಯ ಪಾತ್ರ ಮಾಡಿದ್ದೇನೆ. ಅವಳ ಹೆಸರು ಸಹನಾ ಅಂತ. ಪಾತ್ರಕ್ಕೆ ತಕ್ಕಂತೆಯೇ ಸಹನೆಯಿಂದಲೇ ಇರುವ ಹುಡುಗಿ ಆಕೆ. ಜೀವನದಲ್ಲಿ ಸಾಕಷ್ಟು ನೊಂದುಕೊಂಡಿರುವ ಹುಡುಗಿಯಾಕೆ.

** 'ನಟರಾಜ ಸರ್ವೀಸ್'ನ ವಿಶೇಷತೆ ಏನು? ಯಾಕೆ ನಿಮ್ಮ ಪಾತ್ರ ಇಷ್ಟವಾಯಿತು?*

ಕತೆಯೇ ಸುಂದರವಾಗಿದೆ. ಶರಣ್ ಅವರ ಜತೆ ನಟಿಸುತ್ತಿದ್ದೇನೆ. ನಮ್ಮಿಬ್ಬರ ಕಾಂಬಿನೇಷನ್ ಬಗ್ಗೆ ನನಗೆ ನಿರೀಕ್ಷೆ ಇದೆ. ಅಲ್ಲದೇ ಪವನ್ ಒಡೆಯರ್ ನಿರ್ದೇಶನದಲ್ಲಿ ಮೂಡಿಬಂದಿರುವ ಸಿನಿಮಾ ಇದು. ಈಗಾಗಲೇ ಅನೇಕ ಹಿಟ್ ಚಿತ್ರಗಳನ್ನು ಕೊಟ್ಟಿರುವ ನಿರ್ದೇಶಕರು ಅವರು. ಈ ಸಿನಿಮಾವನ್ನು ಅಂದವಾಗಿ ಚಿತ್ರಿಸಿದ್ದಾರೆ. ನನ್ನ ಪಾತ್ರವನ್ನೂ ಅಷ್ಟೇ ಸುಂದರವಾಗಿ ತೋರಿಸಿದ್ದಾರೆ. ಹೀಗಾಗಿ ಪಾತ್ರ ಮತ್ತು ಸಿನಿಮಾ ಇಷ್ಟವಾಯಿತು.

** 'ಕರಿಯಾ-2' ಸಿನಿಮಾದಲ್ಲೂ ನಾಯಕಿಯಾಗಿ ನಟಿಸುತ್ತಿದ್ದೀರಿ. ಆ ಪಾತ್ರದ ಬಗ್ಗೆ ಹೇಳಿ.*

ಅದೊಂದು ವಿಚಿತ್ರ ಪಾತ್ರ. ಎಲ್ಲರಿಗೂ ಗೊತ್ತಿರುವಂತೆ 'ಕರಿಯಾ' ಸಿನಿಮಾ ರೌಡಿಸಂ ಹಿನ್ನೆಲೆಯಲ್ಲಿ ಮೂಡಿಬಂದಿತ್ತು. 'ಕರಿಯಾ-2'ನಲ್ಲೂ ಅಂತಹ ಒಂದಿಷ್ಟು ಛಾಯೆ ಇದೆ. ಅಪ್ಪಟ ಪ್ರೇಮಿಯಾಗಿ ನಾನು ಕಾಣಿಸಿಕೊಂಡಿದ್ದೇನೆ. ಡಿಫರೆಂಟ್ ಲುಕ್ ಕೂಡ ನೋಡಬಹುದು. ಪಾತ್ರದ ಬಗ್ಗೆ ಹೆಚ್ಚೇನೂ ಹೇಳಲಾರೆ.

** ಹಿರಿಯ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಜತೆ ಕೆಲಸ ಮಾಡುವಾಗಿನ ಅನುಭವ ಹೇಗಿತ್ತು?*

'ಇಷ್ಟಕಾಮ್ಯ'ದಲ್ಲಿ ನಟಿಸುತ್ತಿಯಾ ಅಂತ ಸಾರ್ ಕೇಳಿದಾಗ ಭಯ ಆಗಿತ್ತು. ದೊಡ್ಡ ನಿರ್ದೇಶಕರು. ಸಾಹಿತ್ಯ ವಲಯದಲ್ಲೂ ಅವರಿಗೆ ದೊಡ್ಡ ಹೆಸರಿದೆ. ಅಳುಕಿನಿಂದಲೇ ಒಪ್ಪಿಕೊಂಡೆ. ಅವರು ಕೆಲಸ ಮಾಡುವ ರೀತಿ ನೋಡಿ ನನಗೆ ಅಚ್ಚರಿ ಆಯಿತು. ತುಂಬಾ ತಾಳ್ಮೆಯಿಂದ ಕೆಲಸ ಮಾಡುವ ಮೇಷ್ಟ್ರು ಅವರು. ಅವರ ಮೇಕಿಂಗ್ ಇನ್ನೂ ವಿಭಿನ್ನವಾಗಿದೆ.

ರಾಯಚೂರು ಬಿಜೆಪಿ ಶಾಸಕರ ಭಾನಗಡಿಗಳು

07 ⏮

ಮುಂದೆಹೋಗಿ ಯಾರೋ ಹೇಳಿದರು ಅಂತ ತನ್ನ ಕಾಲನ್ನೇ ಕಳೆದುಕೊಳ್ಳುವ ಸ್ಥಿತಿಗೆ ತಲುಪಿದ್ದಾನೆ, ಅದೂ ಚುನಾವಣೆಯಲ್ಲಿ ಗೆಲ್ಲುವುದಕ್ಕೆ!

ಅದ್ಯಾರೋ ಪುಣ್ಯಾತ್ಮ ದೇವಗಣಾಪುರ ದೇವಸ್ಥಾನದ ಅರ್ಚಕರು ಮಂತ್ರಿಸಿದ ತಾಯತವನ್ನು ತೊಡೆಗೆ ಬಿಗಿಯಾಗಿ ಕಟ್ಟಿಕೊಂಡರೆ ಎಲೆಕ್ಷನ್‌ನಲ್ಲಿ ಗೆಲ್ತೀಯ ಅಂತ ಈ ನಾಯಕನಿಗೆ ಹೇಳಿದ್ದನಂತೆ. ಅದನ್ನು ತುಸು ಜಾಸ್ತಿಯೇ ನಂಬಿದ ಶಿವನಗೌಡ, ತೊಡೆಗೆ ಕಟ್ಟಿಕೊಂಡರೆ ಬಿದ್ದುಹೋಗಬಹುದು ಅಥವಾ ಕಳೆದುಹೋಗಬಹುದು, ಹಾಗಾಗಿ ಆಪರೇಷನ್ ಮಾಡಿಸಿ ತನ್ನ ತೊಡೆಯೊಳಗೇ ತಾಯಿತ ಫಿಕ್ಸ್ ಮಾಡಿಸಿಕೊಂಡರೆ ಹೇಗೆ ಅನ್ನೋ ಐನಾತಿ ಐಡಿಯಾ ಉಪಯೋಗಿಸಿದ ಪರಿಣಾಮ ಇವತ್ತು ಕಾಲನ್ನೇ ಊನ ಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾನೆ. ಆತನ ತೊಡೆಯೊಳಗೆ ಬಂಧಿಯಾಗಿರುವ ತಾಯತ ಕೊಟ್ಟಿರುವ ತೊಂದರೆಗಳು ಅಷ್ಟಿಷ್ಟಲ್ಲ, ಸುಮಾರು 9 ವರ್ಷಗಳಿಂದ ತೊಡೆಯಲ್ಲಿರುವ ತಾಯತದಿಂದ ಈತನಿಗೆ ಹೆಚ್ಚು ನಡೆಯಲೂ ಆಗುತ್ತಿಲ್ಲ. ನಡೆಯುವುದಿರಲಿ ಬಹಳಹೊತ್ತು ನಿಲ್ಲುವುದಕ್ಕೂ ಇವನಿಂದಾಗುವುದಿಲ್ಲ, ಈ ವರ್ಷ ದೇವದುರ್ಗ ಉಪಚುನಾವಣೆಯಲ್ಲಿ ಗೆಲ್ಲುವುದಕ್ಕೆ ಮುನ್ನ ಒಂದು ವರ್ಷ ಆತ ಇದ್ದಿದ್ದೇ ಆಸ್ಪತ್ರೆ ಮತ್ತು ಮನೆಯ ವಿಶ್ರಾಂತ ಸ್ಥಿತಿಯಲ್ಲಿ, ಈಗ ಅದು ತೀರಾ ಅಪಾಯಕಾರಿ ಸ್ಥಿತಿ ತಲುಪಿದ್ದು ಇಡೀ ಕಾಲು ಗ್ಯಾಂಗ್ರೀನ್‌ಗೆ ತುತ್ತಾಗುವ ಅಪಾಯ ಎದುರಾಗಿದೆ. ಅದನ್ನು ಗುಣಪಡಿಸಿಕೊಳ್ಳಲು ಸಿಂಗಾಪೂರ್‌ನ ಆಸ್ಪತ್ರೆಗೆ ಹೋಗುವ ತಯಾರಿಯಲ್ಲಿದ್ದಾನೆ. ಇದು ಈತನೊಬ್ಬನ ಸಮಸ್ಯೆಯಲ್ಲ, ಈ ಭಾಗದ ಹಲವು ರಾಜಕಾರಣಿಗಳು ಇಂತಹ ಅಪಾಯಕಾರಿ ಮೌಢ್ಯಗಳನ್ನು ಪಾಲಿಸುತ್ತಿದ್ದಾರೆ.

ಶಿವನಗೌಡನ ದುರಾಚಾರಗಳು

ಶಿವನಗೌಡ ನಾಯಕ ಹೊಸದಾಗಿ ಸರ್ಕಾರದಿಂದ ಸಬ್ಸಿಡಿ ಪಡೆದು ಶಿವಲಿಂಗು ಷುಗರ್ ಫ್ಯಾಕ್ಟರಿ ಸ್ಥಾಪಿಸಲು ಹೆಣಗಾಡುತ್ತಿದ್ದಾನೆ. ಇದಕ್ಕಾಗಿ ಜಂಬಲದಿನ್ನಿ ಕ್ಯಾಂಪ್‌ನಲ್ಲಿ 300 ಎಕರೆ ಫಾರೆಸ್ಟ್ ಲ್ಯಾಂಡ್ ಅನ್ನು ಕಬಳಿಸಲು ಹೊಂಚುಹಾಕಿದ್ದಾನೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕಾಡು ಒತ್ತುವರಿಗೆ ಮುಂದಾಗಿದ್ದಾನೆ. ಆದರೆ ಸ್ಥಳೀಯರಿಂದ ಬಂದ ವಿರೋಧ ಮತ್ತು ಸಕ್ಕರೆ ಕಾರ್ಖಾನೆಗೆ 300 ಎಕರೆ ಸಾಕಾಗುವುದಿಲ್ಲ ಎಂಬ ಕಾರಣಕ್ಕೆ ಅದನ್ನು ಮಸ್ಕಿಗೆ ವರ್ಗಾಯಿಸುತ್ತಿದ್ದಾನೆ ಎಂಬ ಮಾತುಗಳು ಕೇಳಿಬರುತ್ತಿವೆ. ಮಸ್ಕಿ ಕ್ಷೇತ್ರದಲ್ಲಿ ತನ್ನ ಬೆಂಬಲಿಗರ ಹೆಸರಿನಲ್ಲಿ ಇರುವ 400 ಎಕರೆ ಬೇನಾಮಿ ಆಸ್ತಿಯಲ್ಲಿ ಫ್ಯಾಕ್ಟರಿ ಹಾಕಬೇಕೆಂದು ತೀರ್ಮಾನಿಸಿದ್ದಾನಂತೆ.

ದೇವದುರ್ಗ ತಾಲ್ಲೂಕು ಒಂದರಲ್ಲೇ 50 ಸಾವಿರ ಆಶ್ರಯ ಮನೆಗಳನ್ನು ನಿರ್ಮಿಸಿದ್ದೇವೆಂದು ಸರ್ಕಾರಿ ಅಂಕಿಅಂಶಗಳು ಹೇಳುತ್ತವೆ. ಆದರೆ ನಿಜವಾಗಿಯೂ 10 ಸಾವಿರದಷ್ಟೂ ಮನೆಗಳು ಸಿಕ್ಕಿಲ್ಲ ಎಂದು ಸ್ಥಳೀಯ ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ನಿರ್ಮಿಸಿಕೊಟ್ಟ ಮನೆಗಳು ಸಹ ಕೇವಲ ಸ್ವಜಾತೀಯ (ವಾಲ್ಮೀಕಿ ನಾಯಕರು) ಮತ್ತು ಅವನ ಬೆಂಬಲಿಗರ ಪಾಲಾಗಿವೆ.

ಇನ್ನು ಅಧಿಕಾರಿಗಳಿಗೆ ಈತ ಯಾವುದೇ ಬೆಲೆ ಕೊಡುವುದಿಲ್ಲ, ಸಾರ್ವಜನಿಕವಾಗಿಯೇ ಸೊಂಟದ ಕೆಳಗಿನ 'ಸಂಸ್ಕೃತ'ಗಳನ್ನು ಬಳಸಲು ಈತ ಹಿಂದೇಟು ಹಾಕುವುದಿಲ್ಲ. ಒಮ್ಮೆ ದೇವದುರ್ಗದ ಸಬ್ ಇನ್ಸ್‌ಪೆಕ್ಟರ್‌ಗೆ 'ಪೊಲೀಸ್ ಆಗಲು ನೀನು ಲಾಯಕ್ಕಿಲ್ಲ, ಸೀರೆ ಬಳೆ ಹಾಕೊಂಡು ಬಾ' ಎಂದು ಲೇವಡಿ ಮಾಡಿದ್ದ. ಅಲ್ಲದೇ ತಹಸೀಲ್ದಾರ್‌ಗೆ 'ನಾಲಾಯಕ್ ನೀನು ಉಸುಕಿನ ಹೆಸರಿನಲ್ಲಿ ಒಬ್ಬನೇ ದುಡ್ಡು ತಿಂದವನು' ಎಂದು ಬೈದಿದ್ದ. ಅಂದರೆ ಶಿವನಗೌಡನಿಗೂ ತಿನ್ನಿಸಿ ಆತ ತಿಂದಿದ್ದರೆ ಆಗ ಆತ ಲಾಯಕ್ಕು ಅಂತ ಆಗುತ್ತಿತ್ತು! ಮತ್ತೊಮ್ಮೆ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿದ್ದಾಗಲೇ ಅದನ್ನು ಉಲ್ಲಂಘಿಸಿ ಜಿಲ್ಲಾಧಿಕಾರಿಗಳ ಮಾತಿಗೂ ಬೆಲೆ ಕೊಡದೆ ರಾಯಚೂರು ಡಿಸಿ ಕಚೇರಿಯಲ್ಲೇ ಬೆಂಬಲಿಗರ ಸಭೆ ನಡೆಸಿದ್ದ. ಆಗ ಡಿಸಿಯಾಗಿದ್ದ ಉಜ್ವಲ್‌ಕುಮಾರ್ ಘೋಷ್ ಖಡಕ್ಕಾಗಿ ತಿರುಗೇಟು ನೀಡಿದ ನಂತರವಷ್ಟೇ ಅಲ್ಲಿಂದ ಜಾಗ ಖಾಲಿ ಮಾಡಿದ್ದ.

ಈಗಲೂ ಅತಿ ಹೆಚ್ಚಿನ ದೊಡ್ಡಿಗಳು (ಬೆಟ್ಟದ ಮೇಲೆ ಗುಡಿಸಲುಗಳು) ಇರುವ ದೇವದುರ್ಗದಲ್ಲಿ ಕುಡಿಯುವ ನೀರು, ವಿದ್ಯುತ್ ಮಾತ್ರವಲ್ಲದೇ ದಾರಿಗಳು ಸಹ ಇಲ್ಲದೆ ಬಹಳಷ್ಟು ಕುರಿಗಾಹಿಗಳು ವಾಸ ಮಾಡುತ್ತಿದ್ದಾರೆ. ಮೀಸಲು ಕ್ಷೇತ್ರದಲ್ಲಿ ಗೆದ್ದ ಈತ ಜನತೆಯ ಕಷ್ಟ ಕೇಳುವುದನ್ನು ಬಿಟ್ಟು ಹಣ, ಮೌಢ್ಯಕ್ಕೆ ಒಳಗಾಗಿ ತಾನೇ ಕಷ್ಟದಲ್ಲಿದ್ದಾನೆ. ಈತನನ್ನು ಗೆಲ್ಲಿಸಿದ ತಪ್ಪಿಗೆ ಜನ ಪರಿತಪಿಸುವಂತಾಗಿದೆ.

■ ಮುತ್ತುರಾಜು

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 05-10-2016 RNI No. KARKAN2005/1

ದೋಸೆ ಹಿಂದೆ ಜಗ್ಗೇಶ್



ಸೋಲಿನ ಸುಳಿಯಲ್ಲಿ ಸಿಲುಕಿದ್ದ ಜಗ್ಗೇಶ್‌ರನ್ನು 'ನೀರ್‌ದೋಸೆ' ನಿರಾಳ ಮಾಡಿದೆ. ಪ್ರೇಕ್ಷಕರು ಖುಶ್ಯಾಗಿಯೇ ನೀರ್‌ದೋಸೆ ತಿನ್ನುತ್ತಿದ್ದಾರೆ. ಹೀಗಾಗಿ ಗಲ್ಲಾಪೆಟ್ಟಿಗೆ ಕೂಡ ಭರ್ತಿ ಆಗುತ್ತಿದೆ. ಈ ಸಿನಿಮಾವನ್ನು ನೆಚ್ಚಿಕೊಂಡಿದ್ದ ನಿರ್ದೇಶಕ ವಿಜಯ ಪ್ರಸಾದ್. ಅಕ್ಷರಶಃ ಬೀದಿಗೆ ಬಂದಿದ್ದರು. ಬರೀ ನೀರು ಕುಡಿದುಕೊಂಡೇ ಸಿನಿಮಾ ಮುಗಿಸಲು ಹೆಣಗಿದ್ದರು. ತಾನು ನಂಬಿಕೊಂಡಿದ್ದ ಸಿನಿಮಾ ಕೈ ಹಿಡಿದಿದ್ದರಿಂದ ನೀರಿನ ಜತೆ ದೋಸೆಯೂ ಸಿಕ್ಕಂತಾಗಿದೆ. ಆದರೆ, ಜಗ್ಗೇಶ್ ಇದರ ಲಾಭವನ್ನು ಭರ್ಜರಿಯಾಗಿ ಪಡೆಯಲು ಯತ್ನಿಸುತ್ತಿದ್ದಾರೆ. ಗೆಲುವನ್ನು ಎನ್‌ಕ್ಯಾಶ್ ಮಾಡಲೆಂದೇ ಅವರು ಈ ಚಿತ್ರದ ಪಾಪ್ಯುಲರ್ ಡೈಲಾಗ್‌ವೊಂದನ್ನು ಸಿನಿಮಾ ಟೈಟಲ್ ಆಗಿ ರಿಜಿಸ್ಟರ್ ಮಾಡಿದ್ದಾರೆ.

ನೀರ್‌ದೋಸೆ ಚಿತ್ರದಲ್ಲಿ 'ಮಸಾಲೆ ದೋಸೆ ಸೌಮ್ಯ' ಜನಪ್ರಿಯ ಸಂಭಾಷಣೆಯೊಂದು ಬರುತ್ತದೆ. ಈ ಮಾತನ್ನು ದತ್ತಣ್ಣ ಹೇಳುತ್ತಾರೆ. ಅದು ಕಾಂಟ್ರವರ್ಸಿ ಕೂಡ ಆಗಿತ್ತು, ಅದೇ ಡೈಲಾಗ್ ಅನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ನೋಂದಾಯಿಸಿದ್ದಾರೆ. ಈ ವಿಷಯವನ್ನು ಅವರು ಬೇರೆ ರೀತಿಯಲ್ಲೂ ಸಮರ್ಥಿಸಿಕೊಂಡಿದ್ದಾರೆ.

"ನಿರ್ಮಾಪಕರು ಈ ಡೈಲಾಗ್ ಅನ್ನು ತಮ್ಮ ಸಿನಿಮಾದ ಟೈಟಲ್ ಆಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ವಿಷಯ ನನ್ನ ಗಮನಕ್ಕೆ ಬಂತು. ಯಾರೋ ದುರುಪಯೋಗ ಮಾಡಿಕೊಳ್ಳಬಾರದು ಅನ್ನುವ ಕಾರಣಕ್ಕೆ ನಾನೇ ನೋಂದಾಯಿಸಿದ್ದೇನೆ. ಅನ್ಯಥಾ ಭಾವಿಸಬಾರದು" ಅಂದಿದ್ದಾರೆ ಜಗ್ಗೇಶ್. ಎರಡು ವರ್ಷಗಳಿಂದ ಜಗ್ಗೇಶ್ ಸಿನಿಮಾಗಾಗಿ ಕತೆಯೊಂದನ್ನು ಬರೆದಿದ್ದಾರಂತೆ. ಆ ಕತೆಗೆ ಇದೇ ಶೀರ್ಷಿಕೆ ಸೂಕ್ತ ಅನಿಸಿದೆಯಂತೆ.

ದೊಡ್ಮನೆ ಬಿರಿಯಾನಿ


'ದೊಡ್ಮನೆ ಹುಡುಗ' ಚಿತ್ರದ ರಿಲೀಸ್ ಡೇಟ್ ಪಕ್ಕಾ ಆಗಿದೆ. ಸೆ. 30ರಂದು ಚಿತ್ರವು ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದ್ದು, ಆ ದಿನವನ್ನು ವಿಭಿನ್ನವಾಗಿ ಆಚರಿಸಲು ಮುಂದಾಗಿದೆ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘ. ಇದು ಪುನೀತ್ ಅವರ 25ನೇ ಸಿನಿಮಾ ಆಗಿದ್ದರಿಂದ ರಿಲೀಸ್ ದಿನದಂದು ಡಾ.ರಾಜ್‌ಕುಮಾರ್ ಲಡ್ಡು ಮತ್ತು ಬಿರಿಯಾನಿಯನ್ನು ಉಚಿತವಾಗಿ ಹಂಚಲು ನಿರ್ಧರಿಸಲಾಗಿದೆ. ಅದಕ್ಕಾಗಿ ಬರೋಬ್ಬರಿ 25 ಲಕ್ಷ ರೂಪಾಯಿಯನ್ನು ಖರ್ಚು ಮಾಡಲಾಗುತ್ತಿದೆ.

ಹಾಗಂತ ರಾಜ್ಯದ ಎಲ್ಲಾ ಚಿತ್ರಮಂದಿರಗಳಲ್ಲೂ ಬಿರಿಯಾನಿ ಮತ್ತು ಲಡ್ಡು ಸಿಗುವುದಿಲ್ಲ, ಬೆಂಗಳೂರಿನ ಪ್ರಮುಖ ಚಿತ್ರಮಂದಿರದಲ್ಲಿ ಸಿನಿಮಾ ನೋಡುವವರಿಗೆ ಮಾತ್ರ ಈ ಭಾಗ್ಯ ದೊರೆಯಲಿದೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಗಣೇಶ್ ಸ್ವೀಟ್ಸ್ ರಾಜ್‌ಕುಮಾರ್ ಲಡ್ಡುಗಳನ್ನು ಪರಿಚಯಿಸಿತ್ತು, ಅಲ್ಲೇ ಲಡ್ಡುಗಳನ್ನು ತಯಾರಿಸಲಾಗುತ್ತಿದೆ.

"ಲಡ್ಡು ಓಕೆ, ಬಿರಿಯಾನಿ ಯಾಕೆ?" ಎಂಬ ಪ್ರಶ್ನೆ ಮೂಡುವುದು ಸಹಜ. ಅದಕ್ಕೂ ಇಲ್ಲಿ ಉತ್ತರವಿದೆ. 'ದೊಡ್ಮನೆ ಹುಡುಗ' ಚಿತ್ರದಲ್ಲಿ ಪುನೀತ್ ಅವರದ್ದು ರಸ್ತೆ ಬದಿಯ ಅಂಗಡಿಯಲ್ಲಿ ಬಿರಿಯಾನಿ ಮಾರಾಟ ಮಾಡುವ ಪಾತ್ರ, ಹೀಗಾಗಿ ಪ್ರೇಕ್ಷಕರಿಗೆ ಅದನ್ನು ಹಂಚಲು ನಿರ್ಧರಿಸಿದ್ದಾರೆ.

ಇದು ಸೂರಿ ಮತ್ತು ಪುನೀತ್ ಕಾಂಬಿನೇಷನ್‌ನ ಎರಡನೇ ಚಿತ್ರ. ಇದೇ ಮೊದಲ ಬಾರಿಗೆ ಪುನೀತ್ ಜತೆ ಅಂಬರೀಷ್ ಕೂಡ ನಟಿಸಿದ್ದಾರೆ. ರಾಧಿಕಾ ಪಂಡಿತ್ ಚಿತ್ರದ ನಾಯಕಿ.

ಹರಿಶ್ಚಂದ್ರನಿಗೆ ಸಂಚಿತಾ ನಾಯಕಿ



ಲೂಸ್‌ಮಾದ ಯೋಗೀಶ್ ನಟನೆಯ 'ರಾವಣ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯವಾದ ಸಂಚಿತಾ ಪಡುಕೋಣೆ ಬಹು ವರ್ಷಗಳ ನಂತರ ಮತ್ತೆ ಕನ್ನಡ ಸಿನಿಮಾವನ್ನು ಒಪ್ಪಿಕೊಂಡಿದ್ದಾರೆ. ಶರಣ್ ನಟನೆಯ 'ಸತ್ಯ ಹರಿಶ್ಚಂದ್ರ' ಚಿತ್ರದಲ್ಲಿ ಇವರು ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಈ ಹುಡುಗಿ ಚಿತ್ರಕ್ಕೆ ಆಯ್ಕೆಯಾಗಿದ್ದು ಫೇಸ್‌ಬುಕ್ ಮೂಲಕ ಅನ್ನುವುದು ವಿಶೇಷ. 'ಸತ್ಯ ಹರಿಶ್ಚಂದ್ರ' ಚಿತ್ರಕ್ಕೆ ದಯಾಳ್ ಪದ್ಮನಾಭ್ ನಿರ್ದೇಶಕರು. ನಾಯಕಿಗಾಗಿ ಹುಡುಕಾಟದಲ್ಲಿದ್ದಾಗ ಫೇಸ್‌ಬುಕ್‌ನಲ್ಲಿ ಸಿಕ್ಕಿದ್ದು ಸಂಚಿತಾ. ಗಣೇಶ್ ಹಬ್ಬದ ಫೋಟೋವನ್ನು ಇವರು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಿದ್ದರಂತೆ. ಸುಂದರವಾಗಿ ಕಂಡಿದ್ದರಿಂದ ಕಾಂಟ್ಯಾಕ್ಟ್ ಮಾಡಿದ್ದಾರೆ ನಿರ್ದೇಶಕರು. ಈ ಚಿತ್ರದಲ್ಲಿ ಸಂಚಿತಾರದ್ದು ಬೋಲ್ಡ್ ಹುಡುಗಿಯ ಪಾತ್ರ. ಸಖತ್ ಸ್ಕೋಪ್ ಕೂಡ ಇದೆಯಂತೆ. ಹೀಗಾಗಿಯೇ ಪಾತ್ರ ಮಾಡಲು ಒಪ್ಪಿಕೊಂಡಿದ್ದಾರೆ. ಜತೆಗೆ ಕನ್ನಡದಲ್ಲಿ ಖಂಡಿತಾ ಅವಕಾಶ ಸಿಗಲಿದೆ ಅನ್ನುವ ಅವರ ಪ್ರಾರ್ಥನೆ ಫಲಿಸಿದೆಯಂತೆ.

ಮತ್ತೊಂದು ಇಂಟ್ರಸ್ಟಿಂಗ್ ಸಂಗತಿ ಅಂದರೆ, ಸಂಚಿತಾ ಮೂಲತಃ ಕನ್ನಡದ ಹುಡುಗಿ. ಕುಂದಾಪುರದ ಪಡುಕೋಣೆ ಇವರೂರು. ಬೆಂಗಳೂರಿನಲ್ಲಿ ವಾಸ ಇರುವ ಈ ಹುಡುಗಿ ತಮಿಳು ಮತ್ತು ತೆಲುಗಿನಲ್ಲಿ ಬಿಜಿ ಆಗಿದ್ದರು. ಮತ್ತೆ ಅವರನ್ನು ಕನ್ನಡದ ಪ್ರೇಮ ಇಲ್ಲಿಗೆ ಕರೆತಂದಿದೆ.

ಕೃತಿ ಹಿಂದೆ ಕ್ರೇಜಿಬಾಯ್ ಡೈರೆ[...]

ಬಾಲಿವುಡ್‌ನ 'ರಾಸ್ ರೀಬೂಟ್' ಸಿನಿಮಾದ ಮೂಲಕ ಕ[...] ಮೂಡಿಸಿರುವ ಕೃತಿ ಕರಬಂಧ ಮತ್ತೆ ಕನ್ನಡ ಸಿನಿಮಾದಲ್ಲಿ ಒಪ್ಪಿಕೊಂಡಿದ್ದಾರೆ. ಈಗಾಗಲೇ ಸ್ಯಾಂಡಲ್‌ವುಡ್‌ನಲ್ಲಿ ಒಂದಷ್ಟು [...] ನಟಿಸಿದ್ದ ಇವರು, ಆನಂತರ ಬಾಲಿವುಡ್‌ಗೆ ಹಾರಿದ್ದರು. ಮತ್ತೆ [...] ನಟಿಸುವುದು ಅನುಮಾನ ಎಂಬ ಮಾತು ಕೇಳಿಬಂದಿತ್ತು, ಆದರೆ, [...] ಬಾಬು ಅವರ ಮಾತಿಗೆ ಮನ್ನಣೆ ಕೊಟ್ಟು ಕನ್ನಡ ಸಿ[...] ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ.

ಈ ಸಿನಿಮಾವನ್ನು ಒಪ್ಪಿಕೊಳ್ಳಲು ಕಾರಣವೊಂದಿದೆ. ಈ[...] ಕನ್ನಡಕ್ಕೆ ಪರಿಚಯಿಸಿದ್ದೇ ನಿರ್ದೇಶಕ ಮಹೇಶ್ ಬಾಬು. [...] ಅವರ ಮಾತನ್ನು ಯಾವತ್ತೂ ಕೃತಿ ಮೀರಲ್ಲವಂತೆ.

ಮೊನ್ನೆಯಷ್ಟೇ ನಿರ್ದೇಶಕರ 'ಕ್ರೇಜಿ ಬಾಯ್' ಚಿತ್ರ[...] ಆಗಿದೆ. ಬಾಕ್ಸ್ ಆಫೀಸ್‌ನಲ್ಲಿ ಅಂದುಕೊಂಡಂತೆ ಗೆಲುವು [...] ಇದ್ದರೂ ಅದಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಪ್ರೇಕ್ಷ[...] ಸಿನಿಮಾ ಮೆಚ್ಚಿಕೊಂಡಿದ್ದ. ಹಾಗಾಗಿ ಈಗ ಮು[...] ಸಿನಿಮಾವನ್ನು ಕೈಗೆತ್ತಿಕೊಂಡಿದ್ದಾರೆ ನಿರ್ದೇಶಕರು[...] ಬಾಯ್' ಸಿನಿಮಾದಲ್ಲಿ ಹೊಸ ನಾಯಕ ಮತ್ತು ನಾ[...] ಜತೆ ಕೆಲಸ ಮಾಡಿದ್ದ ಮಹೇಶ್ ಬಾಬು, ಈ ಸಿನಿ[...] 'ಆ ದಿನಗಳು' ಖ್ಯಾತಿಯ ಚೇತನ್ ಅವರನ್ನು [...] ಆಗಿ ಆಯ್ಕೆ ಮಾಡಿಕೊಂಡಿದ್ದಾರೆ. [...] ವರ್ಷ ಜನವರಿಯಲ್ಲಿ ಚಿತ್ರಕ್ಕೆ ಮುಹೂ[...] ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ, ನಾಯಕಿ[...] ಸಿನಿಮಾ ಇದಾಗಿದ್ದು, ಹಾರರ್ ಮತ್ತು[...] ಕತೆಯನ್ನು ಒಳಗೊಂಡಿದೆ.

ಮಾದಕ ಗೀತೆಯಲ್ಲಿ ತಮನ್ನಾ





ದಕ್ಷಿಣ ಭಾರತದ ಖ್ಯಾತ ತಾರೆ ತಮನ್ನಾ ಕನ್ನಡದ 'ಜಾಗ್ವರ್' ಸಿನಿಮಾದಲ್ಲಿ ನಟಿಸಲಿದ್ದಾರೆ ಅನ್ನುವ ಸುದ್ದಿ ಹಬ್ಬಿತ್ತು, ಆನಂತರ ಅದು ಸುಳ್ಳು ಎಂದಾಯಿತು. ಈಗ ಸಿಕ್ಕಿರುವ ಮಾಹಿತಿಯ ಪ್ರಕಾರ ತಮನ್ನಾ ಕನ್ನಡ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ. 'ಜಾಗ್ವರ್' ಸಿನಿಮಾದ ಐಟಂ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಅದನ್ನು ಸ್ವತಃ ನಿರ್ದೇಶಕ ಮಹಾದೇವ್ ಕೂಡ ಖಚಿತಪಡಿಸಿದ್ದಾರೆ. ಶೋಬಿ ಪೌಲ್‌ರಾಜ್ ನೃತ್ಯ ಸಂಯೋಜನೆಯಲ್ಲಿ ಹಾಡು ಮೂಡಿಬಂದಿದ್ದು 'ಸಂಪಿಗೆ...' ಎಂಬ ಸಾಲಿನಿಂದ ಹಾಡು ಶುರುವಾಗುತ್ತದೆ. ಎಸ್.ಎಸ್.ಥಮನ್ ಸಂಗೀತ ಸಂಯೋಜನೆಯ ಗೀತೆಗೆ ಸಮೀರಾ ಮತ್ತು ದೀಪಿಕ್ ದನಿಯಾಗಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, ಈ ಹಾಡಿನಲ್ಲಿ ಶ್ರುತಿ ಹಾಸನ್ ಕಾಣಿಸಿಕೊಳ್ಳಬೇಕಿತ್ತು, ಮಾತುಕತೆ ಕೂಡ ಆಗಿತ್ತು, ಕೊನೆಯ ಕ್ಷಣದಲ್ಲಿ ಎಲ್ಲವೂ ಬದಲಾಗಿದೆ. ಶ್ರುತಿ ಸ್ಥಾನಕ್ಕೆ ತಮನ್ನಾ ತುಂಬಿದ್ದಾರೆ. ಇದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರ್ ಅಭಿನಯದ ಸಿನಿಮಾ. ಕನ್ನಡ ಮತ್ತು ತೆಲುಗಿನಲ್ಲಿ ಏಕಕಾಲಕ್ಕೆ ತಯಾರಾಗುತ್ತಿದೆ. ಈ ಚಿತ್ರವನ್ನು ತೆಲುಗಿನ ಖ್ಯಾತ ನಿರ್ದೇಶಕ ರಾಜಮೌಳಿ ಶಿಷ್ಯ ಮಹದೇವ್ ನಿರ್ದೇಶಿಸುತ್ತಿದ್ದು, ವಿಜಯೇಂದ್ರ ಪ್ರಸಾದ್ ಚಿತ್ರಕತೆ ಹೆಣೆದಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com